ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಭಿನ್ನ
ಶ್ರೀಲಕ್ಷ್ಮೀಹಯಗ್ರೀವಾಯನಮಃ ॥ ಶ್ರೀ ಶ್ರೀಶೋ ವಿಜಯತೇ ॥
॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯೇಭ್ಯೋ ನಮಃ ॥ ॥ಶ್ರೀವಾದಿರಾಜ ಗುರುಭ್ಯೋ ನಮಃ ॥ ಶ್ರೀಗುರುಭ್ಯೋನಮಃ ॥

## ॥ಅಥ ಶ್ರೀರಾಯಪಾಳ್ಯ ರಾಘವೇಂದ್ರಾಚಾರ್ಯವಿರಚಿತ ಪ್ರಮಾಣತತ್ವ ॥

## ಪ್ರತ್ಯಕ್ಷ ಪ್ರಕರಣ

ದ್ವೈತಸಿದ್ಧಾಂತ ಪ್ರವರ್ತಕರು ಪ್ರಮಾಣಗಳಿಗೆ ಲಕ್ಷಣಾದಿಗಳನ್ನು ಶಾಸ್ತ್ರಗ್ರಂಥಗಳಲ್ಲಿ ಸಪರಿಕರವಾಗಿ ಸ್ವಾಭಿಮತಕ್ರಮದಿಂದ ನಿರೂಪಿಸಿ ಪರಪಕ್ಷಗಳನ್ನು ವಿಸ್ತಾರವಾಗಿ ಪರೀಕ್ಷಿಸಿರುತ್ತಾರೆ. ಅವುಗಳೆಲ್ಲವೂ ಸಂಗ್ರಹದಿಂದ ತಿಳಿಯುವುದಕ್ಕಾಗಿ ''ಪ್ರಮಾಣಲಕ್ಷಣ'' ವೆಂಬ ಗ್ರಂಥವನ್ನು ಭಾಷ್ಯಕಾರರು ರಚಿಸಿರುತ್ತಾರೆ. ಶ್ರೀಜಯತೀರ್ಥನಾಮದಿಂದ ಸುಪ್ರಸಿದ್ಧರಾದ ಟೀಕಾಚಾರ್ಯರು ಅದಕ್ಕೆ ''ನ್ಯಾಯಕಲ್ಪಲತೆ''ಯೆಂಬ ಟೀಕೆಯನ್ನು ರಚಿಸಿ ವಿವರಿಸಿರುತ್ತಾರೆ. ಅಲ್ಲದೇ ಅವರು ಸಂಕ್ಷೇಪವಾಗಿ ಆ ವಿಷಯಗಳನ್ನೇ ಶಿಷ್ಯಬುದ್ಧಿಗೆ ಹಿತವಾಗಿ ಪ್ರತಿಪಾದಿಸಲು 'ಪ್ರಮಾಣ ಪದ್ಧತಿ' ಯೆಂಬ ಗ್ರಂಥವನ್ನು ಮಾಡಿರುತ್ತಾರೆ. ಈ ಗ್ರಂಥಗಳಲ್ಲಿ ನ್ಯಾಯ-ವೈಶೇಷಿಕ ಸಿದ್ಧಾಂತಗಳಲ್ಲಿಯೂ ಮತ್ತು ಮೀಮಾಂಸಾದಿ ದರ್ಶನಗಳಲ್ಲಿಯೂ ಉಕ್ತವಾದ ವಿಷಯಗಳನ್ನು ತಾವು ಹೇಳಿರುವ ವಿಷಯಗಳಿಗೆ ಹೋಲಿಸಿ ಸೂಕ್ಷ್ಮವಾದ ನಿರ್ಣಯಗಳನ್ನು ಮಾಡಿರುತ್ತಾರೆ. 'ಪ್ರಮಾಣಪದ್ಧತಿ'ಗೆ ಮಹಾಮಹಾಪ್ರೌಢರಾದ ಅನೇಕ ಪಂಡಿತರು ಟಿಪ್ಪಣಿಗಳನ್ನು ಬರೆದು ಜನೋಪಕಾರವನ್ನು ಮಾಡಿರುತ್ತಾರೆ[11]. ಈ ಪ್ರಕಾರವಾಗಿ ವಿಸ್ತಾರವನ್ನು ಹೊಂದಿರುವ ದ್ವೈತಸಿದ್ಧಾಂತದ ಪ್ರಮಾಣತತ್ವದ ವಿಚಾರವನ್ನು ಸಂಗ್ರಹವಾಗಿ ನಾವು ಇಲ್ಲಿ ನಿರೂಪಿಸಿರುತ್ತೇವೆ.

ನಾವು ಹೇಳಬೇಕಾಗಿರುವ ವಿಷಯವು 'ಪ್ರಮಾಣತತ್ವವು'. ಪ್ರಮಾಣವೆಂದರೆ, 'ಪ್ರ'ಪೂರ್ವಕವಾದ ಮಾಂಙ್ ಮಾನೇ ಎಂಬ ಧಾತುವಿನ 'ಲುಟ್ ಭಾವೇಕರಣಾಧಿಕರಣಯೋಶ್ಚ' ಎಂಬ ಪಾಣಿನೀಸೂತ್ರಪ್ರಕಾರವಾಗಿ ಲುಟ್ ಪ್ರತ್ಯಯವು 'ಯುವೋರನಾಕೌ' ಎಂಬ ಸೂತ್ರಾನುಸಾರ ಅನಾದೇಶವು 'ಋಷಾಭ್ಯಾಂ ನೋಣಸ್ಸಮಾನಪದೇ' ಎಂಬ ಸೂತ್ರ ಪ್ರಕಾರ 'ನ'ಕಾರಕ್ಕೆ 'ಣ'ತ್ವವು ಬರಲಾಗಿ ನಿಷ್ಪನ್ನವಾದ 'ಪ್ರಮಾಣ'ಶಬ್ದಕ್ಕೆ ಪ್ರತ್ಯಯಾರ್ಥವಾಗಿ ಮೂರುಅರ್ಥಗಳಾಗಬಹುದು. (1). ಭಾವವೆಂದರೆ ಕೇವಲ ಧಾತ್ವರ್ಥವೇ ಪ್ರತ್ಯಯಕ್ಕೂ ಅರ್ಥವಾಗಿ ವಿವಕ್ಷಿತವಾದಲ್ಲಿ 'ಯಥಾರ್ಥಜ್ಞಾನವೇ' ಎಂದು ಅರ್ಥವು. (2)'ಕರಣ' ಎಂದರೆ ಸಾಧನ ಅಥವಾ ಸಲಕರಣೆ ಎಂಬರ್ಥದಲ್ಲಿ ಪ್ರತ್ಯಯ ಬರುವುದಾದರೆ ಯಥಾರ್ಥಜ್ಞಾನಕ್ಕೆ ಸಾಧನವೆಂದು ಮತ್ತೊಂದು ಅರ್ಥವು. 'ಅಧಿಕರಣ'ದಲ್ಲಿ ಪ್ರಮಾಣಶಬ್ದಕ್ಕೆ ಪ್ರಯೋಗವಿಲ್ಲವಾದ ಕಾರಣ ಆ ಅರ್ಥವನ್ನು ಹೇಳುವ ಶಕ್ಯವಿಲ್ಲ. ಇವುಗಳಲ್ಲಿ 'ಯಥಾರ್ಥಜ್ಞಾನ'ವೆಂಬ ಅರ್ಥದಲ್ಲಿ ಪ್ರಮಾಣಶಬ್ದಕ್ಕೆ ಪ್ರಯೋಗವನ್ನು ನೈಯಾಯಿಕಾದಿಗಳು ಹೆಚ್ಚಾಗಿ ಮಾಡುವುದಿಲ್ಲ. ಆದುದರಿಂದ 'ಪ್ರಮಾಣ' ಎಂಬುದಕ್ಕೆ ಲಕ್ಷಣವನ್ನು ಹೇಳುವಾಗ ಅವರು ಯಥಾರ್ಥಜ್ಞಾನಕ್ಕೆ ಸಾಧನವನ್ನೇ ನಿರೂಪಿಸಿರುತ್ತಾರೆ.

ದ್ವೈತಸಿದ್ಧಾಂತದಲ್ಲಿಯಾದರೋ 'ಪ್ರಮಾಣ'ಶಬ್ದಕ್ಕೆ ಯಥಾರ್ಥಜ್ಞಾನದಲ್ಲಿಯೂ ಮತ್ತು ತತ್ಸಾಧನದಲ್ಲೂ ಪ್ರಯೋಗವಿರುತ್ತಾದ ಕಾರಣ ಎರಡನ್ನೂ ಪ್ರಮಾಣಶಬ್ದಾರ್ಥವನ್ನಾಗಿ ವಿವಕ್ಷಿಸಿ ಲಕ್ಷಣಾದಿಗಳು ಹೇಳಲ್ಪಟ್ಟಿವೆ.

### 1. ಉದ್ದೇಶ, ಲಕ್ಷಣ, ವಿಭಾಗ ಪರೀಕ್ಷೆಗಳಿಂದ ವಿಷಯ ನಿರೂಪಣೆ.

ಯಾವುದಾದರೊಂದು ವಿಷಯವನ್ನು ಪ್ರತಿಪಾದಿಸಬೇಕಾದರೆ ಉದ್ದೇಶ, ಲಕ್ಷಣ, ವಿಭಾಗ ಮತ್ತು ಪರೀಕ್ಷೆಗಳಿಂದ ನಿರೂಪಣವು ಅವಶ್ಯಕವು.

ಉದ್ದೇಶವೆಂದರೆ, ಯಾವ ವಿಷಯವನ್ನು ಹೇಳಲು ಇಚ್ಛಿಸಿರುತ್ತೇವೆಯೋ ಅಂತಹ ಅರ್ಥದ ಸಂಸ್ಕೃತನಾಮವನ್ನು ಕೀರ್ತಿಸುವುದು. ಹೆಸರನ್ನು ಹೇಳದೇ ವಿಷಯವನ್ನು ಮಾತ್ರ ನಿರೂಪಿಸುತ್ತಿದ್ದರೆ 'ಹೇಳಲ್ಪಡುವುದು ಇಂತಹುದು' ಎಂದು ಕೇಳತಕ್ಕವರಿಗೆ ತಿಳಿಯದೇ ಹೋಗುವುದರಿಂದ ಮನಸ್ಸಿಗೆ ವ್ಯಾಕುಲೀಭಾವ ಉಂಟಾಗುವುದು. ಅದರ ನಿವಾರಣೆಗಾಗಿ ಉದ್ದೇಶವು ಅವಶ್ಯಕವು.

ಹೆಸರು ಹೇಳಿದ ಮೇಲೆ ಆ ಹೆಸರಿನ ಪದಾರ್ಥಕ್ಕೆ ಏನು ಲಕ್ಷಣವೆಂದು ಜಿಜ್ಞಾಸೆಯುಂಟಾಗುತ್ತಾದ ಕಾರಣ ಅನಂತರ ಲಕ್ಷಣ ಕಥನವು ಅವಶ್ಯಕವು. ಲಕ್ಷಣವೆಂದರೆ, ಆ ಹೆಸರಿನ ಪದಾರ್ಥದಲ್ಲಿರುವ ಅಸಾಧಾರಣಧರ್ಮವು. (ಲಕ್ಷಣವಾದ ಅಸಾಧಾರಣಧರ್ಮವು) ಎಂದರೆ, ಲಕ್ಷ್ಯದಲ್ಲಿ ಸರ್ವತ್ರ ಇರುವುದಾಗಿಯೂ, ಅಲಕ್ಷ್ಯದಲ್ಲಿ ಎಲ್ಲಿಯೂ ಇಲ್ಲದೇ ಇರುವಂತಹ ಧರ್ಮವು. ಉದಾ:- ಗೋವಿಗೆ ಸಾಸ್ನಾದಿಮತ್ವವು (ಗಂಗೆತೊಗಲು ಇರುವಿಕೆಯೆಂಬುದು) ಲಕ್ಷಣವೆಂದು ಹೇಳುತ್ತಾರೆ. ಎಲ್ಲಾ ಗೋವುಗಳಲ್ಲಿಯೂ ಇರುವುದಾಗಿಯೂ, ಗೋವಲ್ಲದ ಮಹಿಷಾದಿ (ಎಮ್ಮೆಗಳೇ ಮೊದಲಾದ)ಗಳಲ್ಲಿಲ್ಲದಿರುವುದಾಗಿಯೂ ಇರುವುದರಿಂದ ಲಕ್ಷಣವೆನ್ನಿಸಿಕೊಳ್ಳುತ್ತದೆ. ಹೀಗಲ್ಲದೇ ಇರುವುದು ಲಕ್ಷಣವಾಗುವುದಿಲ್ಲ . ಅದು ಅಲಕ್ಷಣವೆನ್ನಿಸಿಕೊಳ್ಳುತ್ತದೆ. ಅಲಕ್ಷಣವು, ಅಸಂಭವಿ-ಅವ್ಯಾಪಕ-ಅತಿವ್ಯಾಪಕ ಎಂದು ಮೂರುವಿಧವು. ಲಕ್ಷ್ಯದಲ್ಲಿ ಎಲ್ಲಿಯೂ ಇಲ್ಲದೇ ಇರುವುದು ಅಸಂಭವಿ ಎನ್ನಿಸಿಕೊಳ್ಳುತ್ತದೆ. ಗೋವಿಗೆ 'ಏಕಶಫತ್ವ' ಎಂದರೆ ಒಂದೇ ಗೊರಸುಳ್ಳತನವು

11) ಇತ್ತೀಚೆಗೆ ಈ ಟಿಪ್ಪಣಿಗಳನ್ನು ಬೆಂಗಳೂರಿನ ದ್ವೈತ ಸಂಶೋಧನಾಕೇಂದ್ರದವರು ಪ್ರಕಟನೆ ಮಾಡಿರುತ್ತಾರೆ. ( ಶ್ರೀ ಪ್ರೊ ॥ಕೆ.ಟಿ. ಪಾಂಡುರಂಗಿಯವರಿಂದ ಸಂಶೋಧಿಸಲ್ಪಟ್ಟಿದೆ.)

ಲಕ್ಷಣವು ಎಂದು ಹೇಳಿದರೆ ಅದು ಅಸಂಭವಿ ಎಂದೆನ್ನಿಸಿಕೊಳ್ಳುತ್ತದೆ. ಯಾವ ಗೋವಿನಲ್ಲಿಯೂ ಏಕಶಫತ್ವವು ಇರುವುದಿಲ್ಲ. ಆದುದರಿಂದ ಇದಕ್ಕೆ ಅಸಂಭವವೆಂಬ ದೋಷವು ಪ್ರಾಪ್ತವಾಗುವುದು. ಅವ್ಯಾಪಕವೆಂದರೆ, ಲಕ್ಷ್ಯದಲ್ಲಿ ಕೆಲವು ಕಡೆಯಿದ್ದು ಕೆಲವು ಕಡೆಯಿಲ್ಲದಂತಹುದು. ಗೋಸಾಮಾನ್ಯಕ್ಕೆ ಲಕ್ಷಣವನ್ನು ಕೇಳಿದರೆ ನೀಲರೂಪವು (ಕಪ್ಪುಬಣ್ಣವು)ಲಕ್ಷಣವೆಂದು ಹೇಳಿದರೆ ಅದು ಅವ್ಯಾಪಕವಾಗುತ್ತದೆ. ನೀಲಗೋವಿನಲ್ಲಿ ಮಾತ್ರವಿದ್ದು ನೀಲೇತರಗೋವುಗಳಲ್ಲಿ ಇರುವುದಿಲ್ಲ. ಲಕ್ಷ್ಯದಲ್ಲಿದ್ದುಕೊಂಡು ಅಲಕ್ಷ್ಯದಲ್ಲಿ ಎಲ್ಲಿಯಾದರೂ ಇರುವಂತಹುದು ಅತಿವ್ಯಾಪಕ ವೆನ್ನಿಸಿಕೊಳ್ಳುತ್ತದೆ. ಗೋವಿಗೆ 'ಶೃಂಗಿತ್ವ'ಲಕ್ಷಣವೆಂದು ಹೇಳಿದರೆ, ಇದು ಅತಿವ್ಯಾಪಕವಾಗುತ್ತದೆ. ಲಕ್ಷ್ಯವಾದ ಎಲ್ಲಾ ಗೋವುಗಳಲ್ಲಿಯೂ ಇರುವುದಾಗಿಯೂ, ಗೋಭಿನ್ನವಾದ ಮಹಿಷಾದಿಗಳಲ್ಲಿಯೂ ಇರುವುದಾದ ಕಾರಣ ಇಂತಹುದಕ್ಕೆ ಅತಿವ್ಯಾಪ್ತಿ ಎಂಬ ದೋಷವು ಬರುತ್ತದೆ. ಈ ಪ್ರಕಾರ ದೂಷಣತ್ರಯದಿಂದ ರಹಿತವಾದ ಧರ್ಮವು ಲಕ್ಷಣವೆಂದು ಶಾಸ್ತ್ರದಲ್ಲಿ ಕರೆಯಲ್ಪಡುತ್ತದೆ.

ವಿಭಾಗವೆಂದರೆ, ಇಂಥ ಲಕ್ಷಣವುಳ್ಳ ಪದಾರ್ಥವು ಎಷ್ಟುವಿಧವುಳ್ಳದ್ದು ಎಂಬ ಜಿಜ್ಞಾಸೆಯು ತಪ್ಪದೆ ಉಂಟಾಗುತ್ತೆ. ಆದುದರಿಂದ ಆ ಜಿಜ್ಞಾಸೆಯ ಪರಿಹಾರಕ್ಕಾಗಿ ಅಂತಹ ಪದಾರ್ಥದ ಒಳಭೇದದ ನಿರೂಪಣವು ವಿಭಾಗವೆನ್ನಿಸಿಕೊಳ್ಳುತ್ತದೆ.

ಈ ಉದ್ದೇಶ-ಲಕ್ಷಣ-ವಿಭಾಗಗಳು ಪ್ರತಿಪಾದಿಸುವವರ ಇಚ್ಛಾನುಸಾರವಾಗಿ ಭಿನ್ನಭಿನ್ನವಾಗಿ ಏರ್ಪಟ್ಟರೆ, ಅವುಗಳಲ್ಲಿ ಯಾವ ಉದ್ದೇಶವು ಯುಕ್ತವು, ಯಾವುದು ಅಯುಕ್ತವು ಮತ್ತು ಯಾವ ಲಕ್ಷಣ-ವಿಭಾಗಗಳು ಸರಿಯಾದವು, ಯಾವುವು ಸರಿಯಲ್ಲ ಎಂಬ ವಿಚಾರಪೂರ್ವಕ ನಿರ್ಣಯವು ಪರೀಕ್ಷೆ ಎನ್ನಿಸಿಕೊಳ್ಳುತ್ತದೆ. ಈ ನಾಲ್ಕುಸಾಧನಗಳಿಂದ ವಸ್ತುನಿರೂಪಣವು ನಡೆಯಬೇಕಾಗಿರುತ್ತದೆ.

### 2. ಪ್ರಮಾಣಸಾಮಾನ್ಯಲಕ್ಷಣ - ಅದಕ್ಕೆ ಅತಿವ್ಯಾಪ್ತ್ಯಾದಿ ದೋಷಕಾರಣ.

'ಯಥಾರ್ಥವಾದುದು ಪ್ರಮಾಣ'ವೆಂದು ಕರೆಯಲ್ಪಡುತ್ತದೆ. ಇಲ್ಲಿ 'ಯಥಾರ್ಥವಾದುದು'ಎಂಬಂಶವು ಲಕ್ಷಣಭಾಗವು; 'ಪ್ರಮಾಣ ವೆನ್ನಿಸಿಕೊಳ್ಳುತ್ತದೆ' ಎಂಬ ಭಾಗವು ಲಕ್ಷ್ಯನಿರ್ದೇಶವು. ಈ ಲಕ್ಷಣಕ್ಕೆ ಯಥಾರ್ಥಜ್ಞಾನವು ಮತ್ತು ಅದಕ್ಕೆ ಸಾಧನವಾದ ಇಂದ್ರಿಯಾದಿಗಳು ಲಕ್ಷ್ಯವಾಗಿರುತ್ತವೆ. ಯಥಾರ್ಥವೆಂದರೆ, ಅರ್ಥವನ್ನು ಮೀರದೇ ಇರುವುದು. ಅರ್ಥವೆಂದರೆ, ತಿಳಿಯಲ್ಪಡುವ ವಸ್ತುವು. ಯಾವಕಾಲದಲ್ಲಿ ಮತ್ತು ಯಾವದೇಶದಲ್ಲಿ ಹೇಗೆ ಇರುತ್ತದೆಯೋ <u>ಹಾಗೆಯೇ</u> ಆ ವಸ್ತುವನ್ನು ವಿಷಯೀಕರಿಸುವ ಜ್ಞಾನವು ಮತ್ತು ಅದಕ್ಕೆ ಸಾಧನವೂ ಕೂಡ ಪ್ರಮಾಣವೆಂದು ಕರೆಯಲ್ಪಡುತ್ತದೆ. ಘಟಾದಿ ಪದಾರ್ಥಗಳ ತಿಳುವಳಿಕೆಯು, ಅದಕ್ಕೆ ಸಲಕರಣೆಯಾದ ಕಣ್ಣು ಮೊದಲಾದ ಇಂದ್ರಿಯಗಳು ಕೂಡ ಪ್ರಮಾಣಗಳಾಗುತ್ತವೆ.

ಈ ಲಕ್ಷಣದಲ್ಲಿ 'ವಿಷಯೀಕರಿಸುವುದೇ ಪ್ರಮಾಣವೆಂದು' ಹೇಳುವುದಾದರೆ ಗಮನಾದಿ ಕ್ರಿಯೆಗಳೆಲ್ಲವೂ ಗಮ್ಯವಾದ ಸ್ಥಾನಾದಿಗಳನ್ನು ವಿಷಯೀಕರಿಸುತ್ತವಾದ ಕಾರಣ ಅತಿವ್ಯಾಪ್ತಿ ಬರುತ್ತದೆ. ತತ್ಪರಿಹಾರಕ್ಕಾಗಿ 'ಜ್ಞೇಯವನ್ನು ವಿಷಯೀಕರಿಸುವುದು' ಎಂದು ಹೇಳಬೇಕು. ಗಮನಾದಿ ಕ್ರಿಯೆಗಳಲ್ಲಿ ಗಮ್ಯವಿಷಯೀಕಾರಿತ್ವವಿರುತ್ತದೆಯೇ ಹೊರತು ಜ್ಞೇಯವಿಷಯೀಕಾರಿತ್ವವು ಇರುವುದಿಲ್ಲವಾದಕಾರಣ ಅತಿವ್ಯಾಪ್ತಿಯು ಹೋಗುತ್ತದೆ. 'ಜ್ಞೇಯವಿಷಯೀಕಾರಿತ್ವ ಮಾತ್ರವೇ ಲಕ್ಷಣವೆಂದರೆ' -ಸಂಶಯ ಮತ್ತು ವಿಪರ್ಯಯ ಎಂದರೆ ಭ್ರಾಂತಿ ಹಾಗೆಯೇ ಇವುಗಳ ಸಾಧನಗಳಲ್ಲಿ ಅತಿವ್ಯಾಪ್ತಿ ಬರುತ್ತದೆ. ಇದರ ಪರಿಹಾರಕ್ಕಾಗಿ 'ಜ್ಞೇಯವು ಹೇಗೆ ಇದೆಯೋ ಹಾಗೆಯೇ ವಿಷಯೀಕರಿಸುವುದು' ಎಂದು ಹೇಳಲ್ಪಟ್ಟಿದೆ. ಸಂಶಯಾದಿಗಳು ಅಂತಹುವಲ್ಲವಾದಕಾರಣ ಅತಿವ್ಯಾಪ್ತಿ ಪರಿಹಾರವಾಗುತ್ತದೆ. 'ವಸ್ತುವು ಹೇಗಿದೆಯೋ ಹೇಗಿದೆಯೋ ಹಾಗೆಯೇ ವಿಷಯೀಕರಿಸುವುದು ಪ್ರಮಾಣವೆಂದು' ಮಾತ್ರ ಲಕ್ಷಣವಾದರೆ ಯಥಾರ್ಥಜ್ಞಾನದಲ್ಲಿ ಲಕ್ಷಣವಿದ್ದರೂ ಯಥಾರ್ಥಜ್ಞಾನಕ್ಕೆ ಸಾಧನವಾದ ಇಂದ್ರಿಯಾದಿಗಳಲ್ಲಿ ಈ ಲಕ್ಷಣವಿಲ್ಲ. ಆದುದರಿಂದ ಅವ್ಯಾಪ್ತಿಯು ಬರುತ್ತದೆ. ಆದಕಾರಣ 'ವಸ್ತುವು ಹೇಗಿದೆಯೋ ಹಾಗೆ ವಿಷಯೀಕರಿಸುವಂತಹುದಾಗಲೀ, ಅದಕ್ಕೆ ಸಾಧನವಾಗಲೀ ಪ್ರಮಾಣವಾಗುತ್ತದೆ' ಎಂದು ಲಕ್ಷಣವನ್ನು ಹೇಳಬೇಕಾಯಿತು.

### <u>3. ಸಂಶಯಾದಿ- ಕಾರಣ ವಿಚಾರ</u>

ಜ್ಞಾನವು ಯಥಾರ್ಥವು-ಅಯಥಾರ್ಥವು ಎಂದು ದ್ವಿವಿಧವು. ಇವುಗಳಲ್ಲಿ ಅಯಥಾರ್ಥಜ್ಞಾನವು ಸಂಶಯ ಮತ್ತು ವಿಪರ್ಯಯ ವೆಂದು ಎರಡು ವಿಧವುಳ್ಳದ್ದಾಗಿದೆ. ಸಂಶಯವೆಂದರೆ- ಒಂದೇ ವಸ್ತುವಿನಲ್ಲಿ ಅನೇಕವಿಧವಾದ ವಿರುದ್ಧಪ್ರಕಾರಗಳನ್ನು ವಿಷಯೀಕರಿಸುವಂತಹ ಜ್ಞಾನವು. ಉದಾ:- ನಮ್ಮ ಮುಂದಿರುವ ಒಂದು ಉದ್ದವಾದ ಪದಾರ್ಥವನ್ನು ನೋಡಿ 'ಇದು ಮರದ ತುಂಡೋ ಅಥವಾ ಒಬ್ಬ ಆಳೋ' ಎಂದು ತಿಳಿದುಕೊಳ್ಳುತ್ತಾನೆ. ಇದು ಸಂಶವೆನ್ನಿಸಿಕೊಳ್ಳುತ್ತದೆ. ಇಂತಹ ಸಂಶಯಕ್ಕೆ ಕಾರಣಗಳು ಐದೆಂದು ನ್ಯಾಯವೈಶೇಷಿಕ ಸಿದ್ಧಾಂತದವರು ಹೇಳುತ್ತಾರೆ.

1. ಅವುಗಳಲ್ಲಿ ಸಾಧಾರಣಧರ್ಮವು ಒಂದು ಕಾರಣವು. ಮೇಲೆ ಹೇಳಿದ ಉದಾಹರಣೆಯಲ್ಲಿ ಉದ್ದವಾಗಿರುವಿಕೆ- ಮರದ ತುಂಡೇ ಎಂದಾಗಲೀ, ಆಳೇ ಎಂದಾಗಲೀ ನಿಶ್ಚಯಿಸುವುದಕ್ಕೆ ಸಾಧನವಿಲ್ಲದಿರುವಾಗ ಮೇಲೆ ಹೇಳಿದಂತಹ ಸಂಶಯವನ್ನು ಹುಟ್ಟಿಸುತ್ತದೆ.
2. ಇನ್ನು ಅಸಾಧಾರಣ ಧರ್ಮವು ಮತ್ತೊಂದು ಸಂಶಯಕಾರಣವು. ಆಕಾಶದಲ್ಲಿ ಶಬ್ದವೆಂಬ ಒಂದೇ ಗುಣವಿಶೇಷವು ಇರುತ್ತದೆಂದು ಸಿದ್ಧಾಂತಕ್ಕನುಸಾರವಾಗಿ ಅಕಾಶವಿಶೇಷಗುಣತ್ವವೆಂಬ ಶಬ್ದದಲ್ಲಿ ಮಾತ್ರವಿರುವ ಅಸಾಧಾರಣಗುಣವು, ಶಬ್ದವು ನಿತ್ಯವೋ, ಅನಿತ್ಯವೋ ಎಂಬ

ಸಂಶಯವನ್ನು ವಿಶೇಷನಿರ್ಣಯಕ್ಕೆ ಸಾಧನವಿಲ್ಲದಿರುವಾಗ ಕಾರಣವಾಗುತ್ತದೆ.

3. ವಿಪ್ರತಿಪತ್ತಿ ಎಂದರೆ ವಿವಾದವು ಸಂಶಯಕ್ಕೆ ಮೂರನೇ ಕಾರಣವು. ಇಂದ್ರಿಯಗಳು ತೈಜಸವೆಂದು ಸಾಂಖ್ಯಮತದವರು ಹೇಳುತ್ತಾರೆ. ಭೌತಿಕವೆಂದು ವೈಶೇಷಿಕರು ಹೇಳುತ್ತಾರೆ. ಈ ಉಭಯಮತದವರ ವಿವಾದವು ಇಂದ್ರಿಯಗಳು ಭೌತಿಕವೇ ಅಥವಾ ಅಭೌತಿಕವೇ ಎಂಬ ಸಂಶಯವನ್ನು ಹುಟ್ಟಿಸುತ್ತದೆ.

4. ಹೀಗೆಯೇ ಉಪಲಬ್ಧಿಯು ಎಂದರೆ ಕಾಣುವುದು ನಾಲ್ಕನೆಯ ಕಾರಣವು. ಎಲ್ಲಿಯಾದರೊಂದು ಸ್ಥಳದಲ್ಲಿ ಭಾವಿಯನ್ನು ಅಗಿದಮೇಲೆ ನೀರುಕಾಣಿಸಲು ; ನೀರು ಹೊಸದಾಗಿ ಹುಟ್ಟಿತೋ ಅಥವಾ ಇದ್ದ ನೀರೇ ಕಾಣಿಸಿತೋ ಎಂಬ ಸಂಶಯವು ಬರುತ್ತದೆ. ಇದಕ್ಕೆ ಉಪಲಬ್ಧಿಯೇ ಕಾರಣವು.

5. ಅನುಪಲಬ್ಧಿಯು ಕಾಣದಿರುವಿಕೆಯು ಐದನೆಯ ಕಾರಣವು. ಒಂದು ಮರದಲ್ಲಿ ಪಿಶಾಚವಿದೆಯೆಂದು ಲೋಕವಾರ್ತೆಯನ್ನು ಕೇಳಿದವನಿಗೆ ಆ ಮರದ ಬಳಿಗೆ ಹೋದಾಗ ಪಿಶಾಚವು ಕಾಣದಿದ್ದರೆ ಇಲ್ಲಿ ಪಿಶಾಚವು ಇಲ್ಲವೋ? ಅಥವಾ ಇದ್ದೂ ಕಾಣಿಸುವುದಿಲ್ಲವೋ ಎಂಬ ಸಂಶಯವು ಬರುತ್ತದೆ. ಇದಕ್ಕೆ ಕಾಣದಿರುವಿಕೆಯೇ ಕಾರಣ.

ಈ ಐದು ಕಾರಣಗಳನ್ನು ವೈಶೇಷಿಕರು ನಿರೂಪಿಸುತ್ತಾರೆ. ಇವುಗಳಲ್ಲಿ ಉಪಲಬ್ಧಿ ಮತ್ತು ಅನುಪಲಬ್ಧಿ ಇವುಗಳು ಸಾಧಾರಣಧರ್ಮದಲ್ಲೇ ಸೇರುತ್ತವಾದ ಕಾರಣ ಅವೆರಡನ್ನೂ ಬಿಟ್ಟು ಮೂರೇ ಸಂಶಯಕ್ಕೆ ಕಾರಣಗಳೆಂದು ನೈಯಾಯಿಕರು ಹೇಳುತ್ತಾರೆ. ಅಸಾಧಾರಣಧರ್ಮ ಮತ್ತು ವಿಪ್ರತಿಪತ್ತಿಯು ಸಾಧಾರಣಧರ್ಮದಲ್ಲೇ ಸೇರುತ್ತವಾದ ಕಾರಣ ಸಾಧಾರಣಧರ್ಮವೊಂದೇ ಸಂಶಯಕ್ಕೆ ಕಾರಣವೆಂದು ದ್ವೈತಸಿದ್ಧಾಂತ ದವರು ಹೇಳುತ್ತಾರೆ. ಅಸಾಧಾರಣ, ವಿಪ್ರತಿಪತ್ತಿಗಳಿಗೆ ಸಾಧಾರಣಧರ್ಮದಲ್ಲೇ ಅಂತರ್ಭಾವವು ಹೇಗೆ ಎಂಬುದನ್ನು ಪಾಠಕರಿಗೆ ತಿಳಿಸಿದರೂ ಕಷ್ಟವಾದ ಕಾರಣ ಇಲ್ಲಿ ವಿವರಿಸದೇ ಬಿಟ್ಟಿದೆ.

ವಿಪರ್ಯಯ ವೆಂದರೆ, ವಸ್ತುವಿರುವ ಸ್ಥಿತಿಗೆ ವಿಪರೀತವಾಗಿ ನಿಶ್ಚಯಿಸುವಿಕೆ. ಉದಾ:- ಕಪ್ಪೆಚಿಪ್ಪನ್ನು ನೋಡಿ ಅದು ಥಳಥಳವೆಂದು ಮೆರುಗುತ್ತಿರುವ ದೋಷದಿಂದ ಬೆಳ್ಳಿಯೆಂದು ಭ್ರಮಿಸುವುದು ವಿಪರ್ಯಯವಾಗುತ್ತದೆ. ಇಂತಹ ವಿಪರ್ಯಯಜ್ಞಾನವು ಇಂದ್ರಿಯದೋಷದಿಂದಲೂ, ಅರ್ಥದೋಷದಿಂದಲೂ, ಅನುಮಾನಾಭಾಸದಿಂದಲೂ ಉಂಟಾಗುತ್ತದೆ. ಹೀಗೆ ಸಂಶಯ,ವಿಪರ್ಯಯ ಮತ್ತು ತತ್ಸಾಧನಗಳನ್ನು ತಿಳಿದುಕೊಳ್ಳತಕ್ಕದು.

## <u>4. ಅಯಥಾರ್ಥಜ್ಞಾನ ವಿಷಯದಲ್ಲಿ ವಿವಾದ. ಪ್ರಾಭಾಕರಾದಿಗಳು ಹೇಳುವ ರೀತಿ</u>

''ಜ್ಞಾನವೆಲ್ಲವೂ ಯಥಾರ್ಥವೇ ಹೊರತು ಅಯಥಾರ್ಥಜ್ಞಾನವೇ ಇಲ್ಲ''ವೆಂದು ಕೆಲವರು ಹೇಳುತ್ತಾರೆ. ಅದರಲ್ಲಿ ಪ್ರಾಭಾಕರರೆಂಬ ಮೀಮಾಂಸಕರು 'ಇದು ಬೆಳ್ಳಿ'ಯೆಂಬ ಜ್ಞಾನವು ಅಯಥಾರ್ಥವಲ್ಲ. 'ಇದು' ಎಂಬ ಅಂಶದಲ್ಲಿ ಎದುರಿಗೆ ಕಾಣುವ ಶುಕ್ತಿ ಮೊದಲಾದ ಪದಾರ್ಥವನ್ನು ಗ್ರಹಿಸುತ್ತದೆ. ಆ ಪದಾರ್ಥವು ಅಲ್ಲಿಯೇ ಇರುವುದರಿಂದ ಆ ಅಂಶದಲ್ಲಿ ಅಯಥಾರ್ಥವಾಗುವುದಿಲ್ಲ. 'ಬೆಳ್ಳಿ'ಯೆಂಬ ಅಂಶವು ಥಳಥಳಿಸುತ್ತಿರುವ ಕಾರಣದಿಂದ ಅಂತಹವಸ್ತುವನ್ನು ನೋಡುತ್ತಲೇ, ಬೆಳ್ಳಿಯ ಸಂಸ್ಕಾರ ಉದ್ಬುದ್ಧವಾಗಲು ಹುಟ್ಟುವ ಬೆಳ್ಳಿಯ ಸ್ಮರಣವಿದೆ. ಅದು ಯಥಾರ್ಥವೇ ಆದುದರಿಂದ ಈ ಗ್ರಹಣ,ಸ್ಮರಣಗಳೆಂಬ ಎರಡು ಜ್ಞಾನಗಳು 'ಇದು ಬೆಳ್ಳಿ' ಎಂದು ತೋರುವಿಕೆಯಾಗುತ್ತಾದ ಕಾರಣ ಅಯಥಾರ್ಥಜ್ಞಾನವು ಎಲ್ಲಿಂದ ಬಂತು? ಅಲ್ಲದೇ ಅಯಥಾರ್ಥಜ್ಞಾನವನ್ನು ಒಪ್ಪುವ ಪಕ್ಷದಲ್ಲಿ ಕೆಲವು ದೋಷಗಳು ಬರುತ್ತವೆ. ಹೇಗೆಂದರೆ- ಅಂತಹ ಜ್ಞಾನದಲ್ಲಿ ತೋರುವ ಬೆಳ್ಳಿಯು ಅಲ್ಲಿಯೇ ಇದೆ ಎಂದು ಹೇಳಲಾಗುವುದಿಲ್ಲವಷ್ಟೇ. ಇಲ್ಲದಂತಹ ವಸ್ತುವು ತೋರಬೇಕಾದರೆ ಅದು ಜ್ಞಾನದ ಆಕಾರವೆಂದು ಹೇಳಬೇಕಾಗುತ್ತಾದ ಕಾರಣ ಸಾಕಾರವಿಜ್ಞಾನವಾದಿಗಳೆಂಬ ಬೌದ್ಧರಸಿದ್ಧಾಂತವನ್ನೇ ಅಂಗೀಕರಿಸಿದಂತಾಗುತ್ತದೆ. ಇಲ್ಲದಂತಹ ವಸ್ತುವೇ ತೋರುತ್ತದೆಂದು ಹೇಳುವುದಾದರೆ ಅಸತ್‌ಖ್ಯಾತಿವಾದವನ್ನು ಒಪ್ಪಿದಂತಾಗುತ್ತದೆ. 'ಬೆಳ್ಳಿಯನ್ನು ನಾನು ತಿಳಿದಿದ್ದೇನೆ' ಎಂದು ಅನುವ್ಯವಸಾಯದಲ್ಲಿ ವಿರೋಧವೂ ಬರುತ್ತದೆ. ಇಲ್ಲಿ ಇಂತಹ ಜ್ಞಾನಕ್ಕೆ ಕಾರಣವೇ ನಿರೂಪಿಸುವುದಕ್ಕೆ ಶಕ್ಯವಲ್ಲ ಮತ್ತು ಒಂದು ಜ್ಞಾನವು ಅಯಥಾರ್ಥವಾದರೆ, ಜ್ಞಾನಾಂತರಗಳೂ ಅಯಥಾರ್ಥವಾಗ-ಬೇಕಾಗುವುದರಿಂದ ಜ್ಞಾನದಲ್ಲಿಯೇ ವಿಶ್ವಾಸವಿಲ್ಲದಂತಾಗುತ್ತದೆ, ಇತ್ಯಾದಿ ದೋಷಗಳನ್ನು ಪರ್ಯಾಲೋಚನೆ ಮಾಡಲಾಗಿ ಜ್ಞಾನವೆಲ್ಲಾ ಯಥಾರ್ಥವೆಂದೇ ಹೇಳುವುದು ಯುಕ್ತವೆಂದು ಪ್ರಾಭಾಕರರು,

'ಸಾಕಾರವಾದಾದಸತೋ ನ ಭಾನಾತ್ ಸಂವಿದ್ವಿರೋಧಾದಥ ಹೇತ್ವಭಾವಾತ್ । ಧಿಯಾಮನಾಶ್ವಾಸಭಯಾಚ್ಚ ನೇಷ್ಟಾ ಯತೋಽನ್ಯಥಾಖ್ಯಾತಿರತೋ ಯಥಾರ್ಥಾಃ' ಈ ಕಾರಿಕೆಯಿಂದ ಪ್ರತಿಪಾದಿಸಿರುತ್ತಾರೆ.

ಹೀಗೆಯೇ 'ಯಥಾರ್ಥಂ ಸರ್ವವಿಜ್ಞಾನಮಿತಿ ವೇದವಿದಾಂ ಮತಂ' ಎಂದು ವಿಶಿಷ್ಟಾದ್ವೈತಿಗಳಾದ ರಾಮಾನುಜೀಯರು ಭ್ರಮಜ್ಞಾನವನ್ನು ಅಂಗೀಕರಿಸುವುದಿಲ್ಲ. ಅವರು 'ತಾಸಾಂ ತ್ರಿವೃತಂ ತ್ರಿವೃತಂ' ಎಂಬ ವೇದವಾಕ್ಯದಿಂದಲೂ, 'ತ್ರ್ಯಾತ್ಮಕತ್ವಾತ್ತು-ಭೂಯಸ್ತ್ವಾತ್' ಎಂಬ ಬ್ರಹ್ಮಸೂತ್ರದಿಂದಲೂ, 'ಸಮೇತಾನ್ಯೋನ್ಯಸಂಯೋಗಂ' ಎಂಬುದು ಮೊದಲಾದ ಪುರಾಣವಾಕ್ಯಗಳಿಂದಲೂ ಈ ಪ್ರಪಂಚದಲ್ಲಿರುವ ಸರ್ವಪದಾರ್ಥಗಳೂ ಸರ್ವಾತ್ಮಕವೆಂದು ತಿಳಿದುಬರುತ್ತಾದ ಕಾರಣ ಎಲ್ಲಾವಸ್ತುಗಳಲ್ಲಿಯೂ ಎಲ್ಲಾವಸ್ತುಗಳ ಅಂಶವೂ

ಇರುತ್ತದೆ. ಆದುದರಿಂದ 'ಶುಕ್ತಿಯಲ್ಲಿ ರಜತವೆಂಬುದು ಮೊದಲಾದ ಜ್ಞಾನಗಳೆಲ್ಲವೂ ಯಥಾರ್ಥವೇ' ಎಂದು ನಿರೂಪಿಸುತ್ತಾರೆ. ಈ ಮತಗಳಿಗೆ ವಿರುದ್ಧವಾಗಿ ನೈಯಾಯಿಕರು, ಅದ್ವೈತಿಗಳು ಮತ್ತು ದ್ವೈತಿಗಳು ಮೊದಲಾದವರು 'ನಾನು ಇದುವರೆವಿಗೂ ಶುಕ್ತಿಯನ್ನೇ ರಜತವನ್ನಾಗಿ ತಿಳಿದುಕೊಂಡಿದ್ದೆನು' ಎಂದು ಅನುವ್ಯವಸಾಯಜ್ಞಾನದವಿರೋಧ ಬರುತ್ತದೆಂದು ಭ್ರಾಂತಿಜ್ಞಾನವನ್ನು ಅಂಗೀಕರಿಸಲೇ ಬೇಕೆಂದು ಅಭಿಪ್ರಾಯ ಪಡುತ್ತಾರೆ.

'ಇಂತಹ ಸ್ಥಳದಲ್ಲಿ ತೋರುವ ಬೆಳ್ಳಿಯು ದೇಶಾಂತರದಲ್ಲಿರುವುವಂತಹುದೇ' ಎಂದು ವೈಶೇಷಿಕರು, ನೈಯಾಯಿಕರು ಹೇಳುತ್ತಾರೆ. 'ಜ್ಞಾನಸ್ವರೂಪಭೂತವೇ' ಎಂದು ವಿಜ್ಞಾನವಾದಿಗಳಾದ ಬೌದ್ಧರು ಹೇಳುತ್ತಾರೆ. 'ತತ್ಕಾಲದಲ್ಲಿಯೇ ಹುಟ್ಟಿದಂತಹುದು' ಎಂದು ಭಾಸ್ಕರರು ಹೇಳುತ್ತಾರೆ. ಸತ್ತು, ಅಸತ್ತು ಮತ್ತು ಸದಸತ್ತೂ ಅಲ್ಲ ಮತ್ತೇನೆಂದರೆ ಅನಿರ್ವಚನೀಯವೇ ಎಂದು ಅದ್ವೈತಿಗಳು ಹೇಳುತ್ತಾರೆ. ಈ ಪಕ್ಷಗಳೆಲ್ಲಾ ರಜತವೆಂದು ತಿಳಿದಮೇಲೆ ಪರೀಕ್ಷಾದಿಗಳನ್ನು ಮಾಡಲು 'ರಜತವು ಅಲ್ಲ, ಅಸತ್ತು' ಎಂದು ತಿಳಿದುಕೊಳ್ಳುತ್ತಾನಾದ ಕಾರಣ ಅಂತಹ ಅನುಭವಕ್ಕೆ ವಿರುದ್ಧವಾಗಿದೆ ಎಂದು ಪರ್ಯಾಲೋಚಿಸಿ, ಅಸತ್ತಾಗಿರುವ ರಜತವೇ ಶುಕ್ತಿಯಲ್ಲಿ ತೋರುತ್ತದೆಂದು ಹೇಳುವುದು ಯುಕ್ತವೆಂದು ದ್ವೈತಮತ ದವರು ಅಭಿಪ್ರಾಯ ಪಡುತ್ತಾರೆ.

ಅಯಥಾರ್ಥಜ್ಞಾನವು ಸಂಶಯವಿಪರ್ಯಯಭೇದದಿಂದ ದ್ವಿವಿಧವೆಂದು ಸಿದ್ಧವಾಯಿತು.ಆದರೆ ಅನಧ್ಯವಸಾಯ ಮತ್ತು ಸ್ವಪ್ನವೆಂದು ಅಯಥಾರ್ಥಜ್ಞಾನಾಂತರವಿದೆ ಎಂದು ವೈಶೇಷಿಕರು ಹೇಳುತ್ತಾರೆ. ' ಈ ಮರವು ಏನು ಹೆಸರಿನದೋ' ಎಂಬುದಷ್ಟೇ ಅನಧ್ಯವಸಾಯವು. ಇಂತಹ ಸ್ಥಳದಲ್ಲಿ ಮರಗಳ ಹೆಸರು ಅನೇಕವಾಗಿರುವುದರಿಂದ ಅವುಗಳನ್ನೆಲ್ಲಾ ನಿರ್ದೇಶಮಾಡದೇ ಹೆಸರಿನವಿಷಯದಲ್ಲಿ ಸಂಶಯವೇ ಇರುತ್ತದೆಂದು ಹೇಳಬೇಕಾಗುತ್ತದೆ. ಆದುದರಿಂದ ಅನಧ್ಯವಸಾಯವು ಬೇರೆಯಲ್ಲ. ಸ್ವಪ್ನವಂತೂ ಗಜಾದಿದರ್ಶನರೂಪವಾದರೆ ಅದು ಯಥಾರ್ಥವೇ. ಮನಸ್ಸಿನಲ್ಲಿರುವ ಸಂಸ್ಕಾರದಿಂದ ತತ್ಕಾಲದಲ್ಲಿ ಹುಟ್ಟಿದ ಗಜಾದಿಗಳು ಸ್ವಪ್ನದಲ್ಲಿ ಕಾಣುತ್ತವೆ. ಅವುಗಳು ಹೊರಗೆ ಕಾಣುವ ಗಜಾದಿಗಳೇ ಎಂಬ ಜ್ಞಾನವಾದರೆ ಅದು ವಿಪರ್ಯಯವಾಗುತ್ತದೆ. ಆದುದರಿಂದ ಅದು ಬೇರೆಯಲ್ಲ. ಸಂಭಾವನಾ ನಾಮಕವಾದ ಜ್ಞಾನಾಂತರವೂ ಕೂಡ ಸಂಶಯ ಪ್ರಭೇದವೇ. ತರ್ಕವು ಅನುಪ್ರಮಾಣದಲ್ಲಿ ಸೇರುತ್ತದೆಂದು ಮುಂದೆ ಹೇಳಲ್ಪಡುತ್ತದೆ. ಆದುದರಿಂದ ಅಯಥಾರ್ಥಜ್ಞಾನದಲ್ಲಿ ಹೆಚ್ಚುಪ್ರಭೇದವನ್ನು ಹೇಳುವ ವೈಶೇಷಿಕಮತವೂ, ಸಂಶಯ ವಿಪರ್ಯಯ ತರ್ಕವೆಂದು ಮೂರುವಿಧವೆಂದು ಹೇಳುವ ನೈಯಾಯಿಕಪಕ್ಷವೂ ಸರಿಯಲ್ಲವೆಂದು ದ್ವೈತಿಗಳ ಅಭಿಪ್ರಾಯ.

ಈ ಪ್ರಕಾರ ಜ್ಞಾನ ಮತ್ತು ತತ್ಸಾಧನಗಳು ಎಲ್ಲವೂ ಪ್ರಮಾಣ ಸಾಮಾನ್ಯಲಕ್ಷಣಕ್ಕೆ ಲಕ್ಷ್ಯವೆಂದು ದ್ವೈತಿಗಳು ಅಭಿಪ್ರಾಯಪಡುತ್ತಾರೆ. 'ಆದರೆ ಅನುಭವವೇ ಪ್ರಮಾಣವು. ಸ್ಮೃತಿಭಿನ್ನವಾದ ಜ್ಞಾನವು ಅನುಭವವೆನ್ನಿಸಿಕೊಳ್ಳುತ್ತದೆಂದು ಪ್ರಾಭಾಕರರು ಪ್ರಮಾಣಲಕ್ಷಣವನ್ನು ಹೇಳುತ್ತಾರೆ. ಈ ಲಕ್ಷಣವು ಸಂಶಯ ವಿಪರ್ಯಯಗಳಲ್ಲಿ ಅತಿವ್ಯಾಪ್ತಿ ಬರುವುದರಿಂದಲೂ, ಸ್ಮೃತಿ ಮತ್ತು ವೇದಾದಿಗಳಲ್ಲಿ ಈ ಲಕ್ಷಣವಿಲ್ಲದಿರುವುದರಿಂದಲೂ ಈ ಲಕ್ಷಣವು ಅಸಂಗತವಾಗುತ್ತದೆ. 'ಜ್ಞಾತತಾ ಪ್ರಾಕಟ್ಯ' ಎಂಬ ಪ್ರಕಾಶವಿಶೇಷಕ್ಕೆ ಸಾಧನವಾದಂತಹ ಜ್ಞಾನವು ಪ್ರಮಾಣವೆಂದು ಪ್ರಾಭಾಕರರು ಲಕ್ಷಣಾಂತರವನ್ನು ಹೇಳುವುದುಂಟು. ಆ ಲಕ್ಷಣಕ್ಕೆ 'ಜ್ಞಾತತಾ' ಎಂಬ ವಸ್ತ್ವಂತರವಿದೆ ಎಂಬುದರಲ್ಲಿ ಪ್ರಮಾಣವಿಲ್ಲದಿರುವುದರಿಂದ ಅಸಂಭವದೋಷವು ಬರುತ್ತದೆ. ಅತೀತಾದಿ ವಿಷಯಗಳನ್ನು ಗ್ರಹಿಸುವ ಜ್ಞಾನದಲ್ಲಿ ಜ್ಞಾತತೆಯು ಹುಟ್ಟುವುದಿಲ್ಲವಾದ ಕಾರಣ ಅಲ್ಲಿಯೂ ಮತ್ತು ವೇದಾದಿಗಳಲ್ಲಿಯೂ ಅವ್ಯಾಪ್ತಿಯು ಬರುತ್ತದೆ. ಪೂರ್ವದಲ್ಲಿ ತಿಳಿಯದಂತಹ ವಸ್ತುವಿನ ಅನುಭವವು ಪ್ರಮಾಣವೆನ್ನುವ ಪ್ರಾಭಾಕರರ ಲಕ್ಷಣಾಂತರವೂ ಸ್ಮೃತಿ ಮತ್ತು ವೇದಾದಿಗಳಲ್ಲಿ ಅವ್ಯಾಪ್ತಿ ಬರುವುದರಿಂದ ಸರಿಯಲ್ಲ. ''ಯಥಾರ್ಥಾನುಭವಕ್ಕೆ ಸಾಧನವೇ ಪ್ರಮಾಣ'ವೆನ್ನುವ ನೈಯಾಯಿಕರ ಲಕ್ಷಣವೂ ಯಥಾರ್ಥಜ್ಞಾನದಲ್ಲಿ ಅವ್ಯಾಪ್ತಿದೋಷದಿಂದ ಗ್ರಸ್ತವಾಗುತ್ತದೆ. 'ಪ್ರಮಾವ್ಯಾಪ್ತವು ಪ್ರಮಾಣ' ವೆನ್ನುವ ಉದಯನೋಕ್ತ ಲಕ್ಷಣವು ಪ್ರಮೇಯದಲ್ಲಿ ಈಶ್ವರಪ್ರಮಾವ್ಯಾಪ್ತತ್ವವಿರುವುದರಿಂದ ಅತಿವ್ಯಾಪ್ತಿದೋಷಯುಕ್ತವಾಗುತ್ತದೆ. ಪ್ರಮಾಸಾಧನವನ್ನು , ಪ್ರಮಾಶ್ರಯವನ್ನು ಪ್ರಮಾಣವೆಂದು ಹೇಳುವ ಉದಯನ ಪಕ್ಷವು ಪ್ರಮಾಣಶಬ್ದಕ್ಕೆ ಪ್ರಮಾಶ್ರಯವಾಚಕತ್ವವಿಲ್ಲದಿರುವುದರಿಂದ ಅಸಂಗತವು. ಆದುದರಿಂದ ದ್ವೈತಿಗಳು ಪೂರ್ವೋಕ್ತಲಕ್ಷಣವನ್ನೇ ಸ್ಥಾಪಿಸಿ ವಿಭಾಗಿಸಿರುವರು.

## 5. ಪ್ರಮಾಣದಲ್ಲಿ ಕೇವಲ ಪ್ರಮಾಣ-ಅನುಪ್ರಮಾಣಭೇದ ಅದರಲ್ಲಿ ವಿಪ್ರತಿಪತ್ತಿ.

'ಕೇವಲ ಪ್ರಮಾಣ-ಅನುಪ್ರಮಾಣ'ವೆಂದು ಪ್ರಮಾಣವು ಎರಡು ವಿಧವು. ವಸ್ತುವನ್ನು ಇದ್ದಹಾಗೆಯೇ ಗ್ರಹಿಸುವುದು ಕೇವಲ ಪ್ರಮಾಣವು. ಉದಾ:- ಇದು ಘಟವು(ಮಡಿಕೆಯು) ಎಂಬುದು ಮುಂತಾದ ಜ್ಞಾನವು. ಯಥಾರ್ಥಜ್ಞಾನಕ್ಕೆ ಸಾಧನವು ಅನುಪ್ರಮಾಣವು. ಉದಾ:- ಚಕ್ಷುರಾದಿಂದ್ರಿಯಗಳು, ಅನುಮಾನ, ಆಗಮ.

ಕೇವಲ ಪ್ರಮಾಣವು ಈಶ್ವರಜ್ಞಾನ-ಲಕ್ಷ್ಮೀಜ್ಞಾನ-ಯೋಗಿ ಜ್ಞಾನ- ಅಯೋಗಿಜ್ಞಾನವೆಂದು ನಾಲ್ಕುವಿಧವು. ಇವುಗಳ ನಿರೂಪಣೆಯು ಶಾಸ್ತ್ರದಲ್ಲಿ ಹೆಚ್ಚಾಗಿ ಮಾಡಲ್ಪಟ್ಟಿದೆ. ಇದರ ಸಮಗ್ರನಿರೂಪಣೆಯೆಲ್ಲವೂ ಶಾಸ್ತ್ರದಿಂದಲೇ ತಿಳಿಯತಕ್ಕುದಾಗಿದೆ.

ಅನುಪ್ರಮಾಣಕ್ಕೆ ಪ್ರತ್ಯಕ್ಷ, ಅನುಮಾನ, ಆಗಮ ಎಂದು ಮೂರು ಪ್ರಭೇದಗಳು.

6. ಪ್ರತ್ಯಕ್ಷಲಕ್ಷಣ - ಅದರ ವಿಭಾಗಗಳು.

‘ನಿರ್ದೋಷವಾದ ಇಂದ್ರಿಯಗಳಿಗೆ ನಿರ್ದೋಷವಾದ ವಿಷಯಗಳಿಂದ ಆಗುವ ಸನ್ನಿಕರ್ಷವು ಎಂದರೆ ಸಂಬಂಧವು ಪ್ರತ್ಯಕ್ಷವೆನ್ನಿಸಿ ಕೊಳ್ಳುವುದು. ಜ್ಞಾನಸಾಧನಗಳಾದ ಇಂದ್ರಿಯಗಳೆಲ್ಲವೂ ಪ್ರತ್ಯಕ್ಷವೆಂತಲೂ ಕರೆಯಲ್ಪಡುತ್ತವೆ. ಈ ಪಕ್ಷದಲ್ಲಿ ನಿರ್ದೋಷವಾದ ವಸ್ತುಗಳಿಂದ ಸಂಬಂಧಿಸಿದ ಇಂದ್ರಿಯಗಳು ಪ್ರತ್ಯಕ್ಷವಾಗುತ್ತವೆ ಎಂದು ಲಕ್ಷಣವನ್ನರಿಯುವುದು. ಇಂತಹ ಪ್ರತ್ಯಕ್ಷವು ಸಾಕ್ಷಿ-ಘ್ರಾಣ-ರಸನ-ತ್ವಕ್-ಚಕ್ಷುಸ್ಸು-ಶ್ರೋತ್ರ-ಮನಸ್ಸು ಎಂದು ಏಳುವಿಧವು.

7. ಸ್ಮೃತಿಯು ಪ್ರತ್ಯಕ್ಷಭಿನ್ನವೇ.

ಮೇಲೆ ಹೇಳಿದ ಇಂದ್ರಿಯಗಳ ಮಧ್ಯದಲ್ಲಿ ಮನಸ್ಸಿನಿಂದ ಸಂಸ್ಕಾರದ್ವಾರದಿಂದ ಉಂಟಾಗುವ ಜ್ಞಾನವು ಸ್ಮೃತಿಯೆಂದು ಕರೆಯಲ್ಪಡುತ್ತದೆ. ಇಂತಹ ಸ್ಮೃತಿಯು ಇಂದ್ರಿಯಜನ್ಯವಾದ ಕಾರಣ ಪ್ರತ್ಯಕ್ಷವಲ್ಲವೆಂದು ನೈಯಾಯಿಕಾದಿಗಳು ಹೇಳುವುದು ಸರಿಯಲ್ಲ. ‘‘ಸ್ಮೃತಿಃ ಪ್ರತ್ಯಕ್ಷಮೈತಿಹ್ಯಮನುಮಾನ ಚತುಷ್ಟಯಂ । ಪ್ರಮಾಣಮಿತಿ ವಿಜ್ಞೇಯಮ್’’ ಇತ್ಯಾದಿ ಪ್ರಮಾಣಗಳಿಂದಲೂ ಸ್ಮೃತಿಗೆ ಪ್ರಾಮಾಣ್ಯವು ಸಿದ್ಧವಾಗುತ್ತದೆ. ಅಂತಹ ಪ್ರಾಮಾಣ್ಯವು ಸ್ಮೃತಿಗೆ ಪ್ರತ್ಯಕ್ಷದಲ್ಲಿ ಅಂತರ್ಭಾವವನ್ನು ಒಪ್ಪಿದರೆ ಕೂಡುತ್ತದೆಯೇ ಹೊರತು ಇಲ್ಲದಿದ್ದರೆ ಕೂಡುವುದಿಲ್ಲ. ಆದುದರಿಂದ ಸ್ಮೃತಿಯು ಪ್ರತ್ಯಕ್ಷವೇ ಎಂದು ಹೇಳಬೇಕು. ಆದರೆ ಸ್ಮೃತಿಯೆಂಬ ಜ್ಞಾನವು ಕೇವಲ ಪ್ರಮಾಣದಲ್ಲಿ ಸೇರುವ ಪ್ರತ್ಯಕ್ಷಜ್ಞಾನರೂಪವಾಗುತ್ತದೆ. ಮನ್ವಾದಿ ಸ್ಮೃತಿಗಳು ಪ್ರತ್ಯಕ್ಷದಲ್ಲಿ ಸೇರುವುದಿಲ್ಲ. ಆಗಮಪ್ರಮಾಣದಲ್ಲಿ ಸೇರುತ್ತವೆಂದು ವಿಶೇಷವನ್ನರಿಯುವುದು

8. ಅನುಪ್ರಮಾಣದಲ್ಲಿ ಸಾಕ್ಷಿ - ಷಡಿಂದ್ರಿಯ-ತದ್ವಿಷಯ ನಿರೂಪಣೆ.

ಇಂದ್ರಿಯಗಳಲ್ಲಿ ಸ್ವರೂಪೇಂದ್ರಿಯ-ಬಾಹ್ಯೇಂದ್ರಿಯಗಳೆಂಬ ದ್ವೈವಿಧ್ಯವಿರುತ್ತದೆ. ಚೇತನಸ್ವರೂಪಭೂತವಾದ ಇಂದ್ರಿಯವು ಸಾಕ್ಷೀಂದ್ರಿಯವೆಂದು ಕರೆಯಲ್ಪಡುತ್ತದೆ. ಸಾಕ್ಷೀಂದ್ರಿಯಕ್ಕೆ ಆತ್ಮಸ್ವರೂಪವು, ಆತ್ಮಸ್ವರೂಪದ ಧರ್ಮಗಳು ; ಅವಿದ್ಯೆಯು- ಮನಸ್ಸು- ಮನಸ್ಸಿನ ಪರಿಣಾಮಭೂತವಾದ ಜ್ಞಾನಸುಖಾದಿಗಳು, ಕಾಲವು- ಅವ್ಯಾಕೃತಾಕಾಶವು ಮೊದಲಾದವುಗಳು ವಿಷಯಗಳಾಗುತ್ತವೆ. ಜೀವನ ಸ್ವರೂಪಭೂತ ಜ್ಞಾನವು ನಿತ್ಯವಾಗುವುದರಿಂದ ಅದಕ್ಕೆ ಸಾಕ್ಷೀಂದ್ರಿಯದಿಂದ ಉತ್ಪತ್ತಿಯಾಗಿರುವುದಿಲ್ಲ. ಅಭಿವ್ಯಕ್ತಿಮಾತ್ರವಾಗುತ್ತದೆ.

ಉಳಿದ ಷಡಿಂದ್ರಿಯಗಳು ಬಾಹ್ಯವೆಂದು ಕರೆಯಲ್ಪಡುತ್ತವೆ. ಅದರಲ್ಲಿ ಗಂಧವು, ಗಂಧಪ್ರಭೇದವು ಘ್ರಾಣೇಂದ್ರಿಯಕ್ಕೆ ವಿಷಯಗಳು. ರಸವು, ರಸಪ್ರಭೇದಗಳು ರಸನೇಂದ್ರಿಯಕ್ಕೆ ವಿಷಯಗಳು; ಪರಿಣಾಮದಲ್ಲಿ ದೊಡ್ಡದಾಗಿ ರೂಪವುಳ್ಳ ದ್ರವ್ಯಗಳು, ಕೆಲವು ಗುಣಗಳು, ಕರ್ಮಗಳು ಮತ್ತು ಜಾತಿಗಳು ಚಕ್ಷುಸ್ಸು, ತ್ವಗಿಂದ್ರಿಯಗಳಿಗೆ ವಿಷಯಗಳು ; ವಾಯುವಿನಲ್ಲಿರುವ ಸ್ಪರ್ಶವೂ ಕೂಡ ತ್ವಗಿಂದ್ರಿಯಕ್ಕೆ ವಿಷಯವಾಗುತ್ತದೆ. ಶಬ್ದವು ತತ್ಪ್ರಭೇದವು ಶ್ರೋತ್ರೇಂದ್ರಿಯಕ್ಕೆ ವಿಷಯವು. ಈ ಐದು ಇಂದ್ರಿಯಗಳಿಗೂ ಮನಸ್ಸಿನ ಸಂಬಂಧವಿಲ್ಲದಿರುವಿಕೆಯು, ಕಾಚಕಾಮಲಾದಿಗಳು ಕೂಡ ದೋಷವಾಗಿರುತ್ತವೆ. ಇವೆಲ್ಲವೂ ಬಾಹ್ಯೇಂದ್ರಿಯಗಳ ದ್ವಾರದಿಂದ ಮನಸ್ಸಿಗೆ ವಿಷಯಗಳಾಗುತ್ತವೆ. ಮನಸ್ಸು ಸ್ವತಂತ್ರವಾಗಿ ಸ್ಮರಣೆಯನ್ನುಂಟುಮಾಡುತ್ತದೆ. ಮನಸ್ಸಿಗೆ ರಾಗಾದಿಗಳು ದೋಷಗಳು.

9. ಪ್ರತ್ಯಕ್ಷ ವಿಷಯ- ಸನ್ನಿಕರ್ಷವಿಚಾರ:

ಇಂದ್ರಿಯಗಳೇ ಪ್ರತ್ಯಕ್ಷವೆಂದು ಕರೆಯಲ್ಪಡುತ್ತದೆಂದು ಮೇಲೆ ಹೇಳಲ್ಪಟ್ಟಿತು. ತತ್ತದಿಂದ್ರಿಯಗಳಿಗೆ ಮೇಲೆ ಹೇಳಿದಂತಹ ತತ್ತದ್ವಿಷಯ-ಗಳಿಂದ ಸಂಬಂಧವುಂಟಾದರೆ ಪ್ರತ್ಯಕ್ಷವೆಂಬ ಜ್ಞಾನವು ಉಂಟಾಗುತ್ತದೆ. ಇಂದ್ರಿಯಗಳಿಗೆ ವಿಷಯಸಂಬಂಧವು ಸನ್ನಿಕರ್ಷವೆಂದು ಕರೆಯಲ್ಪಡು- ತ್ತದೆ. ಅಂತಹ ಸನ್ನಿಕರ್ಷವು ಆರುವಿಧವುಳ್ಳದ್ದೆಂದು ನೈಯಾಯಿಕ-ವೈಶೇಷಿಕರು ಹೇಳುತ್ತಾರೆ. ದ್ರವ್ಯಗಳಿಗೆ ಚಕ್ಷುರಾದಿ ಇಂದ್ರಿಯಗಳಿಂದ ಆಗುವ ಸಂಬಂಧವು ಸಂಯೋಗ ವೆನ್ನಿಸಿಕೊಳ್ಳುತ್ತದೆ. ಅದು ಘಟಾದಿಗಳ ಪ್ರತ್ಯಕ್ಷಕ್ಕೆ ಕಾರಣವಾಗುತ್ತದೆ. ದ್ರವ್ಯಗಳಲ್ಲಿರುವ ಗುಣಕರ್ಮಾದಿಗಳೊಡನೆ ಆಗುವ ಸಂಬಂಧವು ಸಂಯುಕ್ತಸಮವಾಯವು. ಅದು ದ್ರವ್ಯಗತ ಗುಣಕರ್ಮಗಳ ಪ್ರತ್ಯಕ್ಷಕ್ಕೆ ಕಾರಣವಾಗುತ್ತದೆ. ಅಂತಹ ಗುಣಕರ್ಮಗಳ ಲ್ಲಿರುವ ಜಾತಿಗಳೊಡನೆ ಆಗುವ ಸಂಯುಕ್ತಸಮವೇತಸಮವಾಯವೆಂಬ ಸಂಬಂಧವು ಅಂತಹ ಜಾತಿಗಳ ಪ್ರತ್ಯಕ್ಷಕ್ಕೆ ಕಾರಣವಾಗುತ್ತದೆ. ಹೀಗೆಯೇ ಮನಸ್ಸಿನಿಂದ ಆತ್ಮತದ್ಗತ ಗುಣಕರ್ಮಸಾಮಾನ್ಯಗಳ ಪ್ರತ್ಯಕ್ಷಕ್ಕೂ ಕಾರಣವನ್ನು ತಿಳಿಯುವುದು. ಘ್ರಾಣರಸನೇಂದ್ರಿಯಗಳಿಗೆ ಗಂಧ ರಸಗಳು ಮತ್ತು ತದ್ಗತ ಜಾತಿಪ್ರತ್ಯಕ್ಷಕ್ಕೂ ಕಾರಣವಾದ ಸನ್ನಿಕರ್ಷವು ಸಂಯುಕ್ತಸಮವಾಯವು, ಸಂಯುಕ್ತಸಮವೇತ- ಸಮವಾಯವು ಆಗುತ್ತದೆ. ಶ್ರೋತ್ರೇಂದ್ರಿಯಕ್ಕೆ ಶಬ್ದದೊಡನೆ ಸಮವಾಯವೆಂಬ ಸಂಬಂಧವು ಶಬ್ದಪ್ರತ್ಯಕ್ಷಕ್ಕೂ , ಶಬ್ದಗತ ಜಾತಿಪ್ರತ್ಯಕ್ಷಕ್ಕೆ ಸಮವೇತಸಮವಾಯವು ಕಾರಣವಾಗುತ್ತದೆ. ಅಭಾವ, ಸಮವಾಯ ಪ್ರತ್ಯಕ್ಷಗಳನ್ನು ಕುರಿತು ಮೇಲೆ ಹೇಳಿದಂತಹ ಐದು ವಿಧವಾದ ಸಂಬಂಧಗಳಿಂದ ಸೇರಿಕೊಂಡಂತಹ ವಿಶೇಷಣವಿಶೇಷ್ಯಭಾವವು ಸನ್ನಿಕರ್ಷವಾಗುತ್ತದೆ. ಈ ಪ್ರಕಾರವಾದ ಆರುವಿಧ ಸನ್ನಿಕರ್ಷಗಳನ್ನು ದ್ವೈತಿಗಳು ಒಪ್ಪುವುದಿಲ್ಲ. ಏಕೆಂದರೆ- ಸಮವಾಯವನ್ನು ವೇದಾಂತಿಗಳ್ಯಾರೂ ಒಪ್ಪುವುದಿಲ್ಲವಾದಕಾರಣ ಸಮವಾಯಗರ್ಭವಾದ ನಾಲ್ಕು ಸನ್ನಿಕರ್ಷಗಳು ಮತ್ತು ಅದರಿಂದ ಸೇರಿಕೊಂಡ ವಿಶೇಷಣವಿಶೇಷ್ಯಭಾವವು ಪ್ರಮಾಣವಿಲ್ಲದಿರುವುದರಿಂದ ಅಂಗೀಕಾರ್ಹವಲ್ಲ. ಆದುದರಿಂದ ಎಲ್ಲಾ ವಿಷಯಗಳಿಂದಲೂ

ತತ್ತದಿಂದ್ರಿಯಗಳಿಗೆ ಆಗುವ ಸನ್ನಿಕರ್ಷವು ಸಂಯೋಗವೊಂದೇ ಎಂದು ಈ ಸಿದ್ಧಾಂತದಲ್ಲಿ ತಿಳಿಯತಕ್ಕದು.

## 10. ಸ್ಮೃತಿಗೆ ಪ್ರಾಮಾಣ್ಯ ನಿರೂಪಣೆ

ಸ್ಮೃತಿಯು ಪ್ರತ್ಯಕ್ಷದಿಂದ ಹುಟ್ಟುವ ಪ್ರತ್ಯಕ್ಷ-ಜ್ಞಾನವೆಂದು ಪೂರ್ವದಲ್ಲಿ ಉಕ್ತವಾಯಿತು. ಹಾಗಾದರೆ ಸ್ಮೃತಿಯು ಪ್ರಮಾಣವೆಂದು ಹೇಳಬೇಕಾಗುತ್ತದೆ. ಪ್ರತ್ಯಕ್ಷವೆಂಬುದು ಪ್ರಮಾಣಗಳಲ್ಲಿ ಒಂದಾಗಿದೆ. ಸ್ಮೃತಿಯು ಪ್ರತ್ಯಕ್ಷದಲ್ಲಿ ಸೇರುವುದಾದರೆ ಪ್ರಮಾಣವಲ್ಲದೇ ಹೋಗಬಹುದೇ? ಎಂದು ಆಲೋಚಿಸಿ ಸ್ಮೃತಿಯು ಪ್ರಮಾಣವೆಂದು ಪೂರ್ವದಲ್ಲಿ ಉಕ್ತವಾಯಿತು. ಸ್ಮೃತಿಜ್ಞಾನವು ಸಂಸ್ಕಾರದ್ವಾರದಿಂದ ಮನಸ್ಸಿನದೆಶೆಯಿಂದ ಹುಟ್ಟುವ ಜ್ಞಾನವಾಗಿದೆ. ಸಂಸ್ಕಾರವು ಪೂರ್ವಾನುಭವದಿಂದ ಹುಟ್ಟಬೇಕು. ಪೂರ್ವಾನುಭವದಲ್ಲಿ ಪೂರ್ವದೇಶಕಾಲ ಗಳು ತೋರುತ್ತವೆ. ಪೂರ್ವದೇಶಕಾಲ ಸಂಬಂಧವು ಘಟಾದಿ ವಸ್ತುಗಳಿಗೆ ಪೂರ್ವದಲ್ಲಿತ್ತೇ ಹೊರತು ಈಗ ಇರುವುದಿಲ್ಲ. ಈಗ ಇಲ್ಲದಂತಹ ಪೂರ್ವದೇಶಕಾಲಸಂಬಂಧವನ್ನು ಸ್ಮೃತಿಯು ವಿಷಯೀಕರಿಸುವುದಾದರೆ ಜ್ಞಾನಕಾಲದಲ್ಲಿಲ್ಲದಂತಹ ವಸ್ತುವನ್ನು ವಿಷಯೀಕರಿಸುವ ಜ್ಞಾನವಾಯಿತು. ಅಂತಹ ಜ್ಞಾನವಾಗಿರುವ ಸ್ಮೃತಿಯು ಪ್ರಮಾಣವು ಹೇಗಾಗಬಹುದು ಎಂಬ ಶಂಕೆಗೆ ಸಮಾಧಾನವೇನೆಂದರೆ:-

ಈಗ ಸ್ಮೃತಿಯಲ್ಲಿ ವಿಷಯವಾಗುವ ಘಟಾದಿಗಳು ಪೂರ್ವದಲ್ಲಿ ತದ್ದೇಶಕಾಲಸಂಬಂಧವುಳ್ಳದ್ದೆಂದು ಅನುಭವದಿಂದ ಗ್ರಹಿಸಲ್ಪಟ್ಟಿರುವುದು ಯಥಾರ್ಥವೇ. ಆದರೆ ಸ್ಮೃತಿಜ್ಞಾನವು ತನ್ನಲ್ಲಿ ತೋರುವ ಘಟಾದಿಗಳು ಪೂರ್ವದೇಶಕಾಲಗಳಿಗೆ ಸಂಬಂಧಿಸಿದವು ಎಂತಲೇ ಸ್ಮೃತಿಗೆ ವಿಷಯವಾಗುತ್ತವೆ. ಆದುದರಿಂದ ಪೂರ್ವದಲ್ಲಿದ್ದ ವಸ್ತುವನ್ನು ಈಗಿರುವುದಾಗಿ ಗ್ರಹಿಸುವುದಿಲ್ಲವಾದ ಕಾರಣ ಪ್ರಾಮಾಣ್ಯಕ್ಕೆ ಬಾಧಕವೇನೂ ಇರುವುದಿಲ್ಲ.

ಆದರೆ ಇನ್ನೊಂದು ಅನುಪಪತ್ತಿ ಬರುತ್ತದೆ. ಸ್ಮೃತಿಯು ಸಂಸ್ಕಾರಸಹಿತವಾದ ಮನಸ್ಸಿನದೆಶೆಯಿಂದ ಹುಟ್ಟುವಂತಹ ಜ್ಞಾನವಲ್ಲವೇ ? ಸ್ಮೃತಿಗೆ ಕಾರಣವಾದ ಸಂಸ್ಕಾರವು ಅನುಭವದಿಂದಲ್ಲವೇ ಹುಟ್ಟಬೇಕು. ಪೂರ್ವಾನುಭವವಾದರೋ ಪೂರ್ವದೇಶಕಾಲಗಳನ್ನು ಅತೀತವಾಗಿ ಗ್ರಹಿಸುವುದಿಲ್ಲ. ಅಂತಹ ವಿಷಯದಲ್ಲಿ ಆ ಅನುಭವದಿಂದ ಅತೀತಾದಿ ವಿಷಯಕವಾದ ಸಂಸ್ಕಾರವು ಹುಟ್ಟುವುದೇ ಅಯುಕ್ತ. ಸಂಸ್ಕಾರಕ್ಕೆ ವಿಷಯವಲ್ಲದ ಪೂರ್ವದೇಶಕಾಲಸಂಬಂಧವನ್ನು ಸ್ಮೃತಿಯು ವಿಷಯೀಕರಿಸುವುದಕ್ಕೆ ಕಾರಣವೇ ಇರುವುದಿಲ್ಲ. ಆದುದರಿಂದ ಸ್ಮೃತಿಯನ್ನು ಪ್ರಮಾಣಜ್ಞಾನವೆಂದು ಹೇಳುವುದು ಹೇಗೆ?

ಉತ್ತರ:- ಸ್ವಾಭಾವಿಕವಾದ ಕಾರಣಗಳಿಗೆ ಸಹಕಾರಿಯಾದ ಕಾರಣಾಂತರದ ಸಹಾಯದಿಂದ ಶಕ್ತಿಯು ಬದಲಾಯಿಸುವುದು ಉಂಟು. ಕಾಡುಗಿಚ್ಚಿನಿಂದ ಸುಟ್ಟ ಬೆತ್ತದ ಬೀಜವು ಬಾಳೆಯಗಿಡವನ್ನು ಹುಟ್ಟಿಸುತ್ತದೆ ಎನ್ನುವುದು ಸರ್ವರಿಗೂ ತಿಳಿದವಿಷಯ. ಹೀಗೆ ಅನೇಕ ಉದಾಹರಣೆಗಳು ಸಿಗುತ್ತವೆ. ಪ್ರಕೃತದಲ್ಲಿ ಮನೋರೂಪವಾದ ಇಂದ್ರಿಯವು ಬಾಹ್ಯವಾದ ಚಕ್ಷುರಿಂದ್ರಿಯಾದಿಗಳಿಂದ ಘಟಾದಿದ್ರವ್ಯವನ್ನು ಗ್ರಹಿಸುತ್ತದೆ. ಈ ರೀತಿಯಲ್ಲಿ ಘಟಾದಿಗಳ ಅನುಭವದಿಂದ ಸಂಸ್ಕಾರವು ಹುಟ್ಟಿಯೂ ಇರುತ್ತದೆ. ಅಂತಹ ಸಂಸ್ಕಾರವನ್ನು ಮನಸ್ಸು ತನ್ನಲ್ಲಿಟ್ಟುಕೊಂಡು ಸಮಯಾಂತರದಲ್ಲಿ ಅವುಗಳ ಸಂಸ್ಕಾರವು ಉದ್ಬುದ್ಧವಾಗುವುದಕ್ಕೆ ಕಾರಣವುಂಟಾದಾಗ ಪೂರ್ವದಲ್ಲಿ ಕಂಡಿದ್ದ ಘಟಾದಿಗಳ ಸ್ಮೃತಿಯನ್ನು ಹುಟ್ಟಿಸುತ್ತದೆ. ಆದುದರಿಂದ ಕೇವಲ ಮನಸ್ಸಿನಿಂದಾಗಲೀ, ಕೇವಲ ಸಂಸ್ಕಾರದಿಂದಾಗಲೀ ಸ್ಮೃತಿಯು ಹುಟ್ಟುತ್ತದೆಂದು ದ್ವೈತಸಿದ್ಧಾಂತಿಗಳು ಹೇಳುವುದಿಲ್ಲವಾದ ಕಾರಣ ಸಂಸ್ಕಾರಸಹಿತ ಮನಸ್ಸಿನಿಂದ ಹುಟ್ಟಿ, ಈ ಸ್ಮೃತಿಜ್ಞಾನವು ಇತರ ಜ್ಞಾನಗಳಂತೆ ಅತೀತತ್ವಾದಿ ಗಳನ್ನು ಹೇಗೆ ವಿಷಯೀಕರಿಸಬಹುದೆಂದು ಶಂಕಿಸಲರ್ಹವಲ್ಲ. ಈ ಪ್ರಕಾರ ಪ್ರತ್ಯಕ್ಷದ ನಿರೂಪಣವು ಮುಗಿದುದು.

## ಅನುಮಾನ ನಿರೂಪಣೆ

ಈಗ ಅನುಮಾನಪ್ರಮಾಣವನ್ನು ನಿರೂಪಿಸಬೇಕಾಗಿದೆ. ಅನುಮಾನಪ್ರಮಾಣಕ್ಕೂ ಪೂರ್ವದಲ್ಲಿ ನಿರೂಪಿಸಿದ ಪ್ರತ್ಯಕ್ಷಪ್ರಮಾಣಕ್ಕೂ ಉಪಜೀವ್ಯೋಪಜೀವಕವೆಂಬ ಸಂಗತಿ ಇರುತ್ತದೆ. ಪ್ರತ್ಯಕ್ಷವು ಅನುಮಾನಕ್ಕೆ ಉಪಜೀವ್ಯವಾಗುತ್ತದೆ. ಉಪಜೀವ್ಯವೆಂದರೆ, ಯಾವುದಾದರೂ ಎರಡು ಪದಾರ್ಥಗಳಲ್ಲಿ ಒಂದು ಮತ್ತೊಂದಕ್ಕೆ ಸ್ವರೂಪಲಾಭವನ್ನು ಉಂಟುಮಾಡಿಕೊಡುವುದಾದರೆ, ಅಂತಹುದು ಮತ್ತೊಂದಕ್ಕೆ ಉಪಜೀವ್ಯ ವಾಗುತ್ತದೆ. ಪ್ರತ್ಯಕ್ಷದ ಸಹಾಯವಿಲ್ಲದೇ ಧೂಮಾದ್ಯನುಮಾನವು ಪರ್ವತಾದಿಗಳಲ್ಲಿ ಬೆಂಕಿ ಮೊದಲಾದ್ದನ್ನು ಸಾಧಿಸುವುದಕ್ಕೆ ಸಮರ್ಥವಾಗ ಲಾರದು. ಪ್ರತ್ಯಕ್ಷದಿಂದ ಪರ್ವತಾದಿಗಳನ್ನು ಕಂಡು ಹೊಗೆಯನ್ನು ನೋಡಿ ಬೆಂಕಿ ಇಲ್ಲಿದೆ ಎಂದು ಸಾಧಿಸುವುದಕ್ಕೆ ಸಾಮರ್ಥ್ಯವು ಬರುವುದಾದ ಕಾರಣ ಉಪಜೀವ್ಯವಾದ ಪ್ರತ್ಯಕ್ಷದ ನಿರೂಪಣವು ಅನುಮಾನನಿರೂಪಣಕ್ಕಿಂತಲೂ ಪ್ರಥಮದಲ್ಲಿ ಮಾಡಿದುದು ಯುಕ್ತವೇ. ಈಗ ಅನುಮಾನವು ನಿರೂಪಿಸಲ್ಪಡುತ್ತದೆ.

## 1. ಅನುಮಾನ ಲಕ್ಷಣ- ಅನುಮಿತಿ ಸಾಮಗ್ರೀ ವಿಚಾರ.

‘ಅನುಮೀಯತೇಽನೇನೇತ್ಯನುಮಾನಂ’ ಎಂದು ವ್ಯುತ್ಪತ್ತಿಯಿಂದ ಅನುಮಿತಿ ಎಂಬ ಯಥಾರ್ಥಜ್ಞಾನಕ್ಕೆ ಸಾಧನವಾದುದು ಅನುಮಾನವೆಂದು ಕರೆಯಲ್ಪಡುತ್ತದೆ. ಅನುಸರಿಸಿ ಯಥಾರ್ಥಜ್ಞಾನವನ್ನು ಹುಟ್ಟಿಸುವ ಕಾರಣ ಅನುಮಾನವೆಂದು ಹೆಸರು. ಪ್ರತ್ಯಕ್ಷ ಅಥವಾ ಶಬ್ದಪ್ರಮಾಣವನ್ನು ಅನುಸರಿಸಿ ಇದರಿಂದ ಅನುಮಿತಿ ಜ್ಞಾನವು ಹುಟ್ಟುತ್ತದೆ. ಆದುದರಿಂದ ಈ ಹೆಸರು ತಕ್ಕುದೇ ಆಗಿರುತ್ತದೆ. ಬೆಟ್ಟ ಮೊದಲಾದುದರಲ್ಲಿ ದೂರದಲ್ಲಿ ಹೋಗುತ್ತಿರುವ ಮನುಷ್ಯನು ದೊಡ್ಡಹೊಗೆಯು ಅಲ್ಲಿಂದ ಬರುವುದನ್ನು ನೋಡಿ ಆ ಸ್ಥಳದಲ್ಲಿ ಬೆಂಕಿಯಿದೆ

ಎಂದು ತಿಳಿದುಕೊಳ್ಳುತ್ತಾನೆ. 'ಎಲ್ಲೆಲ್ಲಿ ಹೊಗೆಯಿದೆಯೋ ಅಲ್ಲಿ ಎಲ್ಲಾ ಕಡೆಯಲ್ಲಿಯೂ ಬೆಂಕಿಯಿದೆ' ಎಂದು ಹೊಗೆ ಬೆಂಕಿಗಳಿಗೆ ಕೂಡಿರುವಿಕೆಯನ್ನು ಕಂಡುಕೊಂಡು ವಿಚಾರಪೂರ್ವಕವಾಗಿ ಬೆಂಕಿಯಿಲ್ಲದ ಸ್ಥಳಗಳಲ್ಲಿ ಹೊಗೆಯಿಲ್ಲದಿರುವಿಕೆಯನ್ನು ನಿಶ್ಚಯಿಸಿಕೊಂಡಿರುವ ಪುರುಷನು ಹೊಗೆಯನ್ನು ನೋಡುತ್ತಲೇ 'ಹೊಗೆಯು ಬೆಂಕಿಯನ್ನು ಬಿಡದೇ ಕೂಡಿಯೇ ಇರುತ್ತದೆ' ಎಂಬುದರ ಸಂಬಂಧವನ್ನು ಸ್ಮರಣೆಗೆ ತಂದುಕೊಳ್ಳುತ್ತಾನೆ. ಇಂತಹ ಹೊಗೆಯು ಇಲ್ಲಿರುತ್ತಾದ ಕಾರಣ ಬೆಂಕಿಯು ಇಲ್ಲಿ ಇದೆ ಎಂದು ನಾನು ನಿಶ್ಚಯಿಸುತ್ತೇನೆ ಎಂದು ಪುರುಷನಿಗೆ ಹುಟ್ಟುವ ಜ್ಞಾನವು ಅನುಮಿತಿ ಎನ್ನಿಸಿಕೊಳ್ಳುತ್ತದೆ.ಇಂತಹ ಅನುಮಿತಿಯನ್ನು ಕುರಿತು ಹೊಗೆಮೊದಲಾದುದು ಸಾಧನವಾಗುತ್ತದಾದ ಕಾರಣ ಹೊಗೆಯೇ ಅನುಮಾನವೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಹೊಗೆಯು ಬೆಟ್ಟದಲ್ಲಿದೆ ಎಂಬಜ್ಞಾನವು ಪಕ್ಷಧರ್ಮತಾಜ್ಞಾನವೆಂದು ಎನ್ನಿಸಿಕೊಳ್ಳುತ್ತದೆ. ಈ ಎರಡು ಜ್ಞಾನಗಳ ಸಹಾಯದಿಂದ ಹೊಗೆಯು ಮೇಲೆ ಹೇಳಿದಂತಹ ಅನುಮಿತಿಗೆ ಕಾರಣವಾಗುತ್ತದೆ.ಇದೇ ಅನುಮಿತಿ ಸಾಮಗ್ರಿ ಎಂದು ಕರೆಯಲ್ಪಡುತ್ತದೆ.

ಈ ಅನುಮಾನಕ್ಕೆ ದೋಷರಹಿತವಾದ ವ್ಯಾಪ್ಯವುಅನುಮಾನವೆಂತಲೂ ಲಕ್ಷಣವನ್ನು ಹೇಳುವುದುಂಟು. ಈ ವಾಕ್ಯಕ್ಕೂ ಮೇಲೆ ಹೇಳಿದ ಅಭಿಪ್ರಾಯವು ಸಮ್ಮತವು. ಮುಂದೆ ನಿರೂಪಿಸಲ್ಪಡುವ ದೋಷಗಳೊಂದೂ ಇಲ್ಲದ ಸಾಧನವು ಅನುಮಾನವೆಂದು ಇದಕ್ಕೆ ಅರ್ಥ. ಅಂತಹ ಸಾಧನವು ಹೊಗೆ ಮುಂತಾದುದೇ ಆಗುತ್ತದೆ. ವ್ಯಾಪ್ಯವೆಂದರೆ, ವ್ಯಾಪ್ತಿಗೆ ಆಶ್ರಯವಾದುದು, ಹೊಗೆ ಮುಂತಾದುದೇ. ಅದರಲ್ಲಿ ದೋಷವೂ ಇಲ್ಲವಾದ ಕಾರಣ ಈ ಲಕ್ಷಣವು ಇದರಲ್ಲಿ ಕೂಡುತ್ತದೆ. ವ್ಯಾಪ್ಯವು- ಉಪಪತ್ತಿಯು -ಯುಕ್ತಿಯು- ಲಿಂಗವು ಈ ಪದಗಳು ಧೂಮಾದ್ಯನುಮಾನವನ್ನು ಬೋಧಿಸುತ್ತವೆ. ಆದುದರಿಂದ ಈ ಪದಗಳು ಎಲ್ಲೇ ಬಂದರೂ ಸಮಾನಾರ್ಥಕಗಳೆಂದು ತಿಳಿಯತಕ್ಕದು.

## 2. ವ್ಯಾಪ್ತಿ-ಪಕ್ಷಧರ್ಮತೆಗಳ ವಿಚಾರ :

ಮೇಲೆ ಹೇಳಿದ ಧೂಮಾಗ್ನಿಗಳಲ್ಲಿ ಧೂಮವು ವ್ಯಾಪ್ಯವು. ಅಗ್ನಿಯು ವ್ಯಾಪಕವು ಎಂದು ಕರೆಯಲ್ಪಡುತ್ತವೆ. ವ್ಯಾಪ್ಯವೆಂದರೆ- ವ್ಯಾಪ್ತಿಗೆ ಕರ್ಮವು ಅಥವಾ ಆಶ್ರಯವಾದಂತಹುದು. ವ್ಯಾಪಕವೆಂದರೆ ವ್ಯಾಪಿಸುವಂತಹುದು ವ್ಯಾಪ್ತಿಗೆ ಕರ್ತೃವು, ಧೂಮಕ್ಕೆ ಅಗ್ನಿಯಿಂದ ಬಿಡದಂತಹ ಸಂಬಂಧವಿದೆ ಎಂದು ಸೂಚಿತವಾಗಿತ್ತು. ಅಂತಹ ಸಂಬಂಧಕ್ಕೆ ವ್ಯಾಪ್ತಿ ಎಂದು ಹೆಸರು. ವ್ಯಾಪ್ತಿ ಎಂದರೆ ಬಿಡದೇ ಇರುವಂತಹ ಧರ್ಮವು. ಅಗ್ನಿಯನ್ನು ಬಿಡದೇ ಧೂಮವು ಸರ್ವಸ್ಥಳದಲ್ಲೂ ಇರುತ್ತದೆ. ಆದರೆ ಅಗ್ನಿಯು ಕೆಲವು ಕಡೆ ಧೂಮವನ್ನು ಬಿಟ್ಟಿರಬಹುದು. ಉಕ್ಕಿನಗುಂಡಿನಲ್ಲಿ , ಚಕ್ಕೆಮುಕ್ಕೆ ಕಲ್ಲಿನಲ್ಲಿ ಬೆಂಕಿಯು ಇರುತ್ತದೆ. ಹೊಗೆಯು ಇರುವುದಿಲ್ಲ. ವ್ಯಾಪಕದ ಸಂಬಂಧವು ವ್ಯಾಪ್ಯದಲ್ಲಿ ಬಿಡದಂತಹುದಾಗಿರಬೇಕೇ ಹೊರತು ವ್ಯಾಪಕಕ್ಕೆ ವ್ಯಾಪ್ಯದ ಸಂಬಂಧವು ಅಂತಹುದ್ದಾಗಿರಬೇಕೆಂಬ ಅವಶ್ಯಕವಿಲ್ಲ. ಈ ಸ್ಥಳದಲ್ಲಿ ಧೂಮವು ವ್ಯಾಪ್ಯವು ವಹ್ನಿಯು ವ್ಯಾಪಕವು. ಆದುದರಿಂದ ಮೇಲೆ ಹೇಳಿದ ಕೆಲವು ಸ್ಥಳಗಳಲ್ಲಿ ಧೂಮವನ್ನು ಬಿಟ್ಟು ಅಗ್ನಿಯು (ಬೆಂಕಿಯು) ಇರುವಿಕೆಯು ದೋಷಕ್ಕೆ ಕಾರಣವಾಗುವುದಿಲ್ಲ. ಈ ಪ್ರಕಾರ ಧೂಮಾಗ್ನಿಗಳಲ್ಲಿರುವಂತೆ ಹೆಚ್ಚುಸ್ಥಳದಲ್ಲಿರುವಂತಹುದಾಗಿ ತನ್ನನ್ನು ಬಿಡುವುದಕ್ಕೆ ಲಿಂಗ-(ವ್ಯಾಪ್ಯ)ಕ್ಕೆ ಅವಕಾಶವನ್ನು ಕೊಡದೇ ಇರುವುದು ವ್ಯಾಪಕವು ಮತ್ತು ಸಾಧ್ಯವೂ ಆಗುತ್ತದೆ. ಅದು ಲಿಂಗ ಅಥವಾ ಹೇತುವೆನ್ನಿಸಿಕೊಳ್ಳುತ್ತದೆ. ಹೇತುವಿನಲ್ಲಿ ವ್ಯಾಪ್ತಿಯಿರುತ್ತದೆ. ಸಾಧ್ಯದಿಂದ ವ್ಯಾಪಿಸಿಕೊಳ್ಳುವುದಕ್ಕೆ ಕರ್ಮವೂ ಆಗುತ್ತದೆ. ಆದಕಾರಣ ಹೇತುವಿಗೆ ವ್ಯಾಪ್ಯವೆಂದು ಹೆಸರು. ಸಾಧ್ಯವು ಹೇತು ಇರುವ ಸ್ಥಳದಲ್ಲೆಲ್ಲಾ ವ್ಯಾಪಿಸುವ ನಿಮಿತ್ತದಿಂದ ವ್ಯಾಪಕವೆಂದು ಕರೆಯಲ್ಪಡುತ್ತದೆ. ಹೇತುವಿಗೆ ವ್ಯಾಪಕವಾದ ಸಾಧ್ಯದೊಂದಿಗೆ ವ್ಯಭಿಚಾರವು ಇರಕೂಡದು.

ಹೇತು ಎಂದರೆ ಧೂಮಾದಿಗಳಿಗೆ ಪಕ್ಷದಲ್ಲಿ ಎಂದರೆ ಪರ್ವತ ಮೊದಲಾದುದರಲ್ಲಿ ಇರುವಿಕೆಯು ಪಕ್ಷಧರ್ಮತೆ ಎನ್ನಿಸಿಕೊಳ್ಳುತ್ತದೆ. ಇಂತಹ ಪಕ್ಷಧರ್ಮತೆಯ ಜ್ಞಾನವು ಮೇಲೆ ಹೇಳಿದಂತಹ ವ್ಯಾಪ್ತಿಯ ಜ್ಞಾನವು ಇಲ್ಲದೇ ಅನುಮಿತಿಯು ಹುಟ್ಟುವುದಿಲ್ಲ. ಕೆಲವು ಸ್ಥಳಗಳಲ್ಲಿ ಪೂರ್ವದಲ್ಲಿ ವ್ಯಾಪ್ತಿಜ್ಞಾನವು ಉಂಟಾಗಿದ್ದರೆ ಆ ವ್ಯಾಪ್ತಿಯ ಸ್ಮರಣವಾದರೂ ಬರಬೇಕು. ಅಂತಹ ವ್ಯಾಪ್ತಿಸ್ಮರಣಕ್ಕೆ ಧೂಮದರ್ಶನಾದಿಗಳು ಕಾರಣವಾಗುತ್ತವೆ. ಪರ್ವತದಲ್ಲಿ ಧೂಮವಿದೆ ಎಂದು ಪಕ್ಷಧರ್ಮತಾಜ್ಞಾನವು ಬಂದು, ಧೂಮದಲ್ಲಿ ಅಗ್ನಿವ್ಯಾಪ್ತಿಯು ಸ್ಮರಣಕ್ಕೆ ಬಂದಮೇಲೆ ಅಗ್ನಿಗೆ ವ್ಯಾಪ್ಯವಾದ ಧೂಮವು ಪರ್ವತದಲ್ಲಿದೆ ಎಂಬ ಲಿಂಗಪರಾಮರ್ಶವು ಬಂದಮೇಲೆ 'ಈ ಪರ್ವತದಲ್ಲಿ ಬೆಂಕಿಯಿದೆ' ಎಂಬ ಅನುಮಿತಿಯು ಹುಟ್ಟುತ್ತದೆ.

## 3. ವ್ಯಾಪ್ಯವ್ಯಾಪಕಗಳಿಗೆ ಸಾಮಾನಾಧಿಕರಣ್ಯನಿಯಮವಿಲ್ಲವೆಂದು ಹೇಳುವಿಕೆ.

ಮೇಲೆ ಹೇಳಿದಂತಹ ವ್ಯಾಪ್ಯವ್ಯಾಪಕಗಳು ಒಂದೇ ಕಡೆಯೇ ಇರುತ್ತದೆಯೆಂಬ ನಿಯಮವು ಎಲ್ಲಾಕಡೆಯಲ್ಲಿಯೂ ಇರುವುದಿಲ್ಲ. ಕೆಲವು ಸ್ಥಳಗಳಲ್ಲಿ ವ್ಯಾಪ್ಯವ್ಯಾಪಕಗಳಿಗೆ ಬೇರೆಬೇರೆ ಸ್ಥಳದಲ್ಲಿರುವಿಕೆಯು ಎಂದರೆ, ವೈಯಧಿಕರಣ್ಯವು ಕಂಡಿದೆ. ದೃಷ್ಟಾಂತ- ಒಂದು ಹೊಳೆಯಲ್ಲಿ ಪ್ರವಾಹವು ಬರುತ್ತಿರುವುದನ್ನು ಕಂಡು ಬುದ್ಧಿವಂತನಾದವನು ಮೇಲೆ ಮಳೆಯಾಗಿದೆಯೆಂದು ತಿಳಿಯುತ್ತಾನೆ. ಈ ಉದಾಹರಣೆಯಲ್ಲಿ ಪ್ರವಾಹವು ವ್ಯಾಪ್ಯವು. ಮಳೆಯು ವ್ಯಾಪಕವು. ಇವೆರಡೂ ಒಂದು ಕಡೆಯಿಲ್ಲಿಲ್ಲ. ಮೇಲ್ಗಡೆ ಮಳೆಯೂ, ಕೆಳಗಡೆ ಪ್ರವಾಹವೂ ಇರುತ್ತದೆ. ಹೀಗೆಯೇ ಕೃತ್ತಿಕೆಯು ಉದಯಿಸಿರುವುದನ್ನು ಕಂಡು ರೋಹಿಣಿಯು ಉದಯಿಸುವ ಕಾಲ ಸನ್ನಿಹಿತವಾಗಿದೆಯೆಂದು ಹೇಳುವುದುಂಟು. ಈ ಸ್ಥಳದಲ್ಲಿ ಕೃತ್ತಿಕೋದಯವು ವ್ಯಾಪ್ಯವು. ರೋಹಿಣ್ಯುದಯಕಾಲಸನ್ನಿಧಾನವು ವ್ಯಾಪಕವು. ಈ ಸ್ಥಳದಲ್ಲಿ

ರೋಹಿಣ್ಯುದಯವು; ಕೃತ್ತಿಕೋದಯವು ಒಂದು ಕಾಲದಲ್ಲಿರುವುದಿಲ್ಲ. ಹೀಗೆ ಭಿನ್ನಭಿನ್ನವಾದ ದೇಶಕಾಲಗಳಲ್ಲಿ ಇರುವಂತಹ ವ್ಯಾಪ್ಯ-ವ್ಯಾಪಕಗಳಿಗೂ ಬಿಡದಂತಹ ಸಂಬಂಧವಿರುತ್ತದೆ. ಆದಕಾರಣ ಧೂಮಾಗ್ನಿಸ್ಥಳಗಳಂತೆ ಸರ್ವಸ್ಥಳಗಳಲ್ಲಿಯೂ ವ್ಯಾಪ್ಯ-ವ್ಯಾಪಕಗಳು ಒಂದೇ ಸ್ಥಳದಲ್ಲಿರುವಿಕೆಯುಳ್ಳದ್ದಾಗಿರಬೇಕೆಂಬ ಅವಶ್ಯಕತೆಯಿರುವುದಿಲ್ಲ.

## 4. ವ್ಯತಿರೇಕವ್ಯಾಪ್ತಿಗೆ ಅನಾವಶ್ಯಕತ್ವ ನಿರೂಪಣೆಯು

ಇಂತಹ ಅನುಮಾನವು ಕೇವಲಾನ್ವಯಿ, ಕೇವಲವ್ಯತಿರೇಕಿ ; ಅನ್ವಯ ವ್ಯತಿರೇಕಿ ಎಂದು ಮೂರುವಿಧವಾಗಿದೆ ಎಂಬುದಾಗಿ ನೈಯಾಯಿಕ-ವೈಶೇಷಿಕರು ಹೇಳುತ್ತಾರೆ. ಕೇವಲಾನ್ವಯಿ ಎಂದರೆ ಅನ್ವಯವ್ಯಾಪ್ತಿಮಾತ್ರವುಳ್ಳದ್ದು. ವ್ಯತಿರೇಕವ್ಯಾಪ್ತಿಮಾತ್ರ ಉಳ್ಳದ್ದು ಕೇವಲ ವ್ಯತಿರೇಕಿ. ಅನ್ವಯವ್ಯಾಪ್ತಿಯು ವ್ಯತಿರೇಕವ್ಯಾಪ್ತಿಯು ಇರುವಂತಹುದು ಅನ್ವಯವ್ಯತಿರೇಕಿ. ಹೇತುವಿಗೆ ಸಾಧ್ಯದಿಂದ ವ್ಯಾಪ್ತಿಯು ಅನ್ವಯವ್ಯಾಪ್ತಿಯು.ಎಲ್ಲಿ ಹೊಗೆಯಿದೆಯೋ ಅಲ್ಲಿ ಬೆಂಕಿಯಿದೆ ಎಂಬುದು ಅನ್ವಯವ್ಯಾಪ್ತಿಯಾಗುತ್ತದೆ. ಇಂತಹ ವ್ಯಾಪ್ತಿಗೆ ಪ್ರದರ್ಶನ ಮಾಡುವುದಕ್ಕೆ ಯಾವುದಾದರೊಂದು ಸ್ಥಾನವು ಅವಶ್ಯಕವು. ಮಹಾನಸ(ಅಡುಗೆಮನೆಯು)ಮೊದಲಾದುವು ಈ ವ್ಯಾಪ್ತಿಯನ್ನು ಪ್ರದರ್ಶಿಸುವುದಕ್ಕೆ ಸ್ಥಾನವಾಗಿರುತ್ತದೆ. ಹೀಗೆಯೇ ಸಾಧ್ಯದ ಅಭಾವಕ್ಕೆ ಹೇತುವಿನ ಅಭಾವದಿಂದ ಹೇಳುವ ವ್ಯಾಪ್ತಿಗೆ ವ್ಯತಿರೇಕವ್ಯಾಪ್ತಿಯು ಎಂದು ಹೆಸರು. ಎಲ್ಲಿ ಬೆಂಕಿ ಇಲ್ಲವೋ ಅಲ್ಲಿ ಹೊಗೆಯಿಲ್ಲವೆಂಬ ವ್ಯಾಪ್ತಿಯು ವ್ಯತಿರೇಕವ್ಯಾಪ್ತಿಗೆ ಉದಾಹರಣೆ. ಇಂತಹ ವ್ಯಾಪ್ತಿಯನ್ನು ತೋರಿಸುವುದಕ್ಕೆ ಹೊಗೆಯೂ, ಬೆಂಕಿಯೂ ಎರಡೂ ಇಲ್ಲದಂತಹ ದೊಡ್ಡ ಮಡುವು(ಸರೋವರವು) ಸ್ಥಾನವಾಗಿರುತ್ತದೆ. ಈ ಎರಡು ವಿಧವಾದ ವ್ಯಾಪ್ತಿಯು ಧೂಮಾನುಮಾನದಲ್ಲಿ ಇರುತ್ತದೆಯಾದ ಕಾರಣ ಅದು ಅನ್ವಯವ್ಯತಿರೇಕಿಗೆ ಉದಾಹರಣವಾಗುತ್ತದೆ. ಕೇವಲಾನ್ವಯಿಗೆ 'ಘಟವು ಅಭಿಧೇಯವು ಪ್ರಮೇಯವಾದ ಕಾರಣ' ಎಂಬ ಅನುಮಾನವು ಉದಾಹರಣವು. ಎಲ್ಲಿ ಪ್ರಮೇಯತ್ವವಿರುತ್ತದೆಯೋ ಅಲ್ಲಿ ಅಭಿಧೇಯತ್ವವಿದೆ ಎಂಬ ಅನ್ವಯವ್ಯಾಪ್ತಿ ಮಾತ್ರವೇ ಇರುತ್ತದೆ. ಪ್ರಮೇಯತ್ವಾಭಿಧೇಯತ್ವಗಳು ಎಲ್ಲಾ ಕಡೆಯಲ್ಲಿಯೂ ಇರತಕ್ಕುವಾದ ಕಾರಣ ಇವುಗಳ ಅಭಾವವೇ ಅಪ್ರಸಿದ್ಧವು. ಅದುದರಿಂದ ಅಭಾವಗಳಿಗೆ ವ್ಯಾಪ್ತಿರೂಪವಾದ ವ್ಯತಿರೇಕವ್ಯಾಪ್ತಿಯು ಇವುಗಳಿಗೆ ಹೇಗೆ ಬಂದೀತು? ಪ್ರಮೇಯತ್ವವೆಂದರೆ-ಯಥಾರ್ಥಜ್ಞಾನಕ್ಕೆ ವಿಷಯವಾಗಿರುವಿಕೆ. ಅಭಿಧೇಯತ್ವವೆಂದರೆ- ಯಾವುದಾದರೊಂದು ಪದದಿಂದ ಹೇಳಿಸಿಕೊಳ್ಳಲ್ಪಡುವಿಕೆ. ಈ ಧರ್ಮಗಳು ಇಲ್ಲದ ವಸ್ತುಗಳು ಎಲ್ಲಿಯಾದರೂ ಉಂಟೇ?

ಹೇತು ಸಾಧ್ಯಗಳಿಗೆ ವ್ಯಾಪ್ತಿಯನ್ನು ತೋರಿಸುವುದಕ್ಕೆ ದೃಷ್ಟಾಂತವು ದೊರೆಯದ ಸ್ಥಳದಲ್ಲಿ ವ್ಯತಿರೇಕವ್ಯಾಪ್ತಿಯನ್ನು ಹೇಳುವ ಪದ್ಧತಿಯಿದೆ. ''ಬದುಕಿರುವ ಶರೀರವೆಲ್ಲವೂ ಪ್ರಾಣಾದಿ ವಾಯುಗಳ ಸಂಚಾರವಿರುವುದರಿಂದ ಆತ್ಮನಿಗೆ ಅಧಿಷ್ಠಾನವಾಗಿದೆ'' ಎಂಬ ಅನುಮಾನದಲ್ಲಿ ಪ್ರಾಣಾದಿಮತ್ತ್ವವೆಂಬ ಹೇತುವಿಗೆ ಸಾತ್ಮಕತ್ವವೆಂಬ ಸಾಧ್ಯದೊಡನೆ ವ್ಯಾಪ್ತಿಯನ್ನು ತೋರಿಸುವುದಕ್ಕೆ ಬದುಕಿರುವ ಶರೀರವೆಲ್ಲವೂ ಪಕ್ಷವಾಗಿರುವು ದರಿಂದ ದೃಷ್ಟಾಂತವೇ ಸಿಕ್ಕುವುದಿಲ್ಲ. ಆದುದರಿಂದ ಇಂತಹ ಸ್ಥಳದಲ್ಲಿ ಎಲ್ಲಿ ಆತ್ಮನಿಲ್ಲವೋ ಅಲ್ಲಿ ಪ್ರಾಣಾದಿವಾಯುಗಳು ಇರುವುದಿಲ್ಲವೆಂದು ಸಾಧ್ಯಾಭಾವ ಹೇತ್ವಾಭಾವಗಳಿಗೆ ವ್ಯಾಪ್ತಿಯನ್ನು ಹೇಳಬೇಕಾಯಿತು. ಇಂತಹ ವ್ಯಾಪ್ತಿಯನ್ನು ತೋರಿಸುವುದಕ್ಕೆ ಘಟಾದಿ ದೃಷ್ಟಾಂತಗಳು ಸಿಕ್ಕುತ್ತವೆ. ಆದುದರಿಂದ ಮೇಲೆ ಹೇಳಿದಂತಹ ಅನುಮಾನವು ಕೇವಲ ವ್ಯತಿರೇಕಿಯಾಗಿರುತ್ತದೆ.

ಈ ಪ್ರಕಾರವಾದ ಅನುಮಾನ ತ್ರೈವಿಧ್ಯವನ್ನು ದ್ವೈತಿಗಳು, ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ಮೊದಲಾದವರು ಒಪ್ಪುವುದಿಲ್ಲ. ಏಕೆಂದರೆ, ಯಾವುದಾದರೊಂದು ಅರ್ಥವನ್ನು ಸಾಧಿಸುವುದಕ್ಕಾಗಿ ಹೇತುವನ್ನು ಪ್ರಯೋಗಿಸುತ್ತಾರೆ. ಆದುದರಿಂದ ಸಾಧಿಸಲು ಉದ್ದೇಶಿಸಿರುವ ಅರ್ಥ ದೊಂದಿಗೆ ಹೇತುವಿಗೆ ವ್ಯಾಪ್ತಿಯು ಅನುಮಾನದಿಂದಾಗುವ ಅನುಮಿತಿಗೆ ಅವಶ್ಯಕವೇ ಹೊರತು ಇತರಪದಾರ್ಥಗಳಿಗೆ ವ್ಯಾಪ್ತಿಯು ಅವಶ್ಯಕ ವಿಲ್ಲ. ವ್ಯತಿರೇಕವ್ಯಾಪ್ತಿಯು ಸಾಧ್ಯದ ಅಭಾವದಲ್ಲಿ ಹೇತ್ವಭಾವದೊಂದಿಗೆ ಇರುವಂತಹ ವ್ಯಾಪ್ತಿಯಾಗಿರುತ್ತದೆ. ಹೊಗೆಯಿಂದ ಬೆಂಕಿಯನ್ನು ಸಾಧಿಸುವಾಗ ಬೆಂಕಿಯ ಅಭಾವದಲ್ಲಿ ಹೊಗೆಯು ಅಭಾವದೊಡನೆ ಇರುವ ವ್ಯಾಪ್ತಿಯು ಬೆಂಕಿಯನ್ನು ಸಾಧಿಸುವುದಕ್ಕೆ ಹೇಗೆ ಅನುಕೂಲ ವಾದೀತು? ಅಲ್ಲದೇ, ಸಾಧ್ಯದ ಅಭಾವದಲ್ಲಿ ವ್ಯತಿರೇಕ ವ್ಯಾಪ್ತಿಯು, ಪಕ್ಷಧರ್ಮತೆಯು ಹೇತುವಿನಲ್ಲಿಯೂ ಎಂದು ಭಿನ್ನ ಭಿನ್ನವಾದ ವಸ್ತುಗಳಲ್ಲಿರುವ ಕಾರಣಗಳು ಒಂದನುಮತಿಯನ್ನು ಹೇಗೆ ಹುಟ್ಟಿಸುವುದು? ಆದುದರಿಂದ ವ್ಯತಿರೇಕವ್ಯಾಪ್ತಿಯು ಅನುಮತಿಗೆ ಅಂಗವೇ ಅಲ್ಲವೆಂದು ಹೇಳಬೇಕು. ಆದುದರಿಂದ ಕೇವಲ ವ್ಯತಿರೇಕಿಯು, ಅನ್ವಯವ್ಯತಿರೇಕಿಯು ಎಂಬ ವ್ಯತಿರೇಕವ್ಯಾಪ್ತಿಯನ್ನೊಳಗೊಂಡ ಎರಡು ಪ್ರಭೇದಗಳು ಇಲ್ಲವಾಯಿತು.

ಈ ಪ್ರಕಾರ ಅನುಮಾನತ್ರೈವಿಧ್ಯವನ್ನು ನಿರಾಕರಿಸಿ ಅಲ್ಲಲ್ಲಿ ಶಾಸ್ತ್ರಗಳಲ್ಲಿ ಕೇವಲ ವ್ಯತಿರೇಕಿಯನ್ನು ಅನೇಕ ಶಾಸ್ತ್ರಕಾರರು ಉಪಯೋಗಿಸಿ ರುವುದಕ್ಕೆ ಏನು ಗತಿಯೆಂದು ಪ್ರಶ್ನೆಯನ್ನು ತೆಗೆದುಕೊಂಡು ದ್ವೈತಿಗಳು ಹೇಳಿರುವ ಸಮಾಧಾನವೇನೆಂದರೆ- ವ್ಯಾಪ್ತಿಗ್ರಹಣಕ್ಕೆ ಪ್ರಮಾಣಗಳ ಸಹಾಯವು ಬೇಕಾಗುತ್ತೆ. ಮೇಲೆ ಹೇಳಿದಂತಹ ಕೇವಲ ವ್ಯತಿರೇಕಿ ಸ್ಥಳಗಳಲ್ಲಿ ವ್ಯಾಪ್ತಿಯನ್ನು ತೋರಿಸುವುದಕ್ಕೆ ದೃಷ್ಟಾಂತವು ಇಲ್ಲದೇ ಹೋಗುವುದರಿಂದ ಅನ್ವಯವ್ಯಾಪ್ತಿಯನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದೇ ಹೋಯಿತು. ಅಂತಹ ಸ್ಥಳಗಳಲ್ಲಿ ದೃಷ್ಟಾಂತಮುಖದಿಂದ ವ್ಯಾಪ್ತಿಯನ್ನು ತೋರಿಸುವ ಬದಲು ಅನುಮಾನದಿಂದಲೇ ವ್ಯಾಪ್ತಿಯನ್ನು ಇಂತಹ ಹೇತುಸಾಧ್ಯಗಳಿಗೆ ಸಾಧಿಸಿಕೊಡುವುದಕ್ಕಾಗಿ ವ್ಯತಿರೇಕ

ವ್ಯಾಪ್ತಿಯು ಶಾಸ್ತ್ರಕಾರರಿಂದ ಉಪಯೋಗಿಸಲ್ಪಟ್ಟಿದೆ. ವ್ಯತಿರೇಕವ್ಯಾಪ್ತಿಯ ಸಹಾಯದಿಂದ ವ್ಯಾಪ್ತಿಸಾಧನಪ್ರಕಾರವು ಅನುಮಾನಖಂಡದಲ್ಲಿ ಅಭ್ಯಾಸಮಾಡದಂತಹವರಿಗೆ ತಿಳಿಯುವುದು ಸುಲಭವಲ್ಲದ ಕಾರಣ ಅದರ ವಿವರವನ್ನು ಶಾಸ್ತ್ರಗ್ರಂಥಗಳಿಂದಲೇ ಅರಿಯುವುದು ಯುಕ್ತವೆಂದು ಇಲ್ಲಿ ಸಂಕ್ಷೇಪ ಮಾಡಲ್ಪಟ್ಟಿದೆ.

## 5.(ಅ) ಅನುಮಾನ ಪ್ರಭೇದಗಳು

ಸರ್ವಸಿದ್ಧಾಂತಗಳೂ ಸ್ವಾರ್ಥಾನುಮಾನ-ಪರಾರ್ಥಾನುಮಾನವೆಂದು ಅನುಮಾನದಲ್ಲಿ ದ್ವೈವಿಧ್ಯವನ್ನು ಅಂಗೀಕರಿಸಿರುತ್ತಾರೆ. ಯಾರಾದರೊಬ್ಬ ಬುದ್ಧಿವಂತನು ಪರ್ವತಾದಿ ಸ್ಥಳಗಳಲ್ಲಿ ಹೊಗೆಯನ್ನು ನೋಡಿ ಧೂಮಕ್ಕೆ ಬೆಂಕಿಯೊಂದಿಗೆ ವ್ಯಾಪ್ತಿಯಿದೆ ಎಂದು ತಾನು ಪೂರ್ವದಲ್ಲಿ ಗ್ರಹಿಸುವ ಪ್ರಕಾರ ಸ್ಮರಣೆಗೆ ತಂದುಕೊಂಡು ಬೆಂಕಿಯನ್ನು ಅನುಮೇಯಿಸುತ್ತಾನೆ. ಅಂತಹ ಅನುಮಾನವು ಸ್ವಾರ್ಥಾನುಮಾನ ವಾಗುತ್ತದೆ. ಈ ಪ್ರಕಾರ ತನಗುಂಟಾಗಿರುವ ಅನುಮಿತಿಯನ್ನು ಇತರರಿಗೆ ಉಂಟುಮಾಡಬೇಕೆಂದು ಉದ್ದೇಶಪಟ್ಟು ತನಗುಂಟಾಗಿರುವ ಅನುಮತಿ ಕಾರಣಗಳನ್ನುಂಟುಮಾಡುವುದಕ್ಕಾಗಿ ವಾಕ್ಯಗಳನ್ನು ಪ್ರಯೋಗಿಸುತ್ತಾನೆ. ಅಂತಹ ವಾಕ್ಯಗಳನ್ನು ಕೇಳಿದವನಿಗೆ ಉಂಟಾಗುವ ಅನುಮಾನವು ಪರಾರ್ಥಾನುಮಾನವೆಂದು ಕರೆಯಲ್ಪಡುತ್ತದೆ.

ಮತ್ತೆ ಅನುಮಾನವು ದೃಷ್ಟ-ಸಾಮಾನ್ಯತೋದೃಷ್ಟವೆಂದು ಎರಡು ವಿಧವು. ಪ್ರತ್ಯಕ್ಷದಿಂದ ಗ್ರಾಹ್ಯವಾದ ಅರ್ಥಕ್ಕೆ ಸಾಧಕವಾದುದು ದೃಷ್ಟಾನುಮಾನವು, ಧೂಮವು ಅಗ್ನಿಗೆ ಪ್ರತ್ಯಕ್ಷಯೋಗ್ಯವಾದುದಕ್ಕೆ ಸಾಧಕವಾಗುತ್ತದೆ. ಆದುದರಿಂದ ದೃಷ್ಟಾನುವು ಪ್ರತ್ಯಕ್ಷದಿಂದ ಗ್ರಹಿಸಲು ಅಯೋಗ್ಯವಾದ ವಸ್ತುವಿಗೆ ಸಾಧಕವಾದುದು ಸಾಮಾನ್ಯತೋದೃಷ್ಟವೆಂದೆನಿಸುತ್ತದೆ. ರೂಪದರ್ಶನಾದಿಗಳು ಒಬ್ಬ ಪುರುಷನಿಗೆ ಚಕ್ಷುರಾದೀಂದ್ರಿಯಗಳಿಗೆ ಎಂದು ಸಾಧಿಸಿದರೆ ರೂಪದರ್ಶನಾದಿಗಳು ಸಾಮಾನ್ಯತೋ ದೃಷ್ಟವೆನಿಸುತ್ತದೆ. ಅಥವಾ ಹೇಗೆ ವ್ಯಾಪ್ತಿಗ್ರಹಣ ವಾಗುತ್ತದೆಯೋ ಹಾಗೆಯೇ ಹಾಗೆಯೇ ಸಾಧ್ಯಸಾಧನಗಳನ್ನು ಪ್ರಯೋಗಿಸಿದರೆ ದೃಷ್ಟಾನುಮಾನವಾಗುತ್ತದೆ. ಧೂಮಾನುಮಾನವೇ ಇದಕ್ಕೆ ಉದಾಹರಣವು. ವ್ಯಾಪ್ಯ-ವ್ಯಾಪಕಗಳಿಗೆ ವ್ಯಾಪ್ತಿಗ್ರಹಣವು ಬೇರೆಧರ್ಮಗಳಿಂದ ಕೂಡಿ ಬಳಿಕ ಅವುಗಳಲ್ಲಿರುವ ಸಾಮಾನ್ಯಧರ್ಮಗಳನ್ನು ತೆಗೆದುಕೊಂಡು ಹೇತುಸಾಧ್ಯಗಳನ್ನು ಪ್ರಯೋಗಿಸಿದರೆ ಸಾಮಾನ್ಯದೃಷ್ಟಾನುಮಾನವಾಗುತ್ತದೆ. ಉದಾಃ- ಒಬ್ಬವಕ್ಕಲಿಗನು ಉಳುವುದರಿಂದ ಧಾನ್ಯಾದಿ ಲಾಭವನ್ನು ಪಡೆಯುತ್ತಾನೆ. ಇವನ ಕೃಷಿಕ್ರಿಯೆಯು ಧಾನ್ಯಾದಿ ಫಲಕ್ಕೆ ಸಾಧನವಾಯಿತು. ಇದನ್ನು ಕಂಡು ಇವನ ಕೃಷಿಕ್ರಿಯೆಯು ಬುದ್ಧಿವಂತನ ಕೆಲಸವಾಗಿದೆ. ಇದು ಸಫಲವಾಗಿದೆ ಎಂದು ತಿಳಿದು ಬುದ್ಧಿವಂತರ ಕೆಲಸವಾಗಿರುವುದೆಲ್ಲವೂ ಸಫಲವಾಗುತ್ತದೆಂಬ ವ್ಯಾಪ್ತಿಯನ್ನು ಗ್ರಹಿಸಿ ಯಜ್ಞಾದಿ ಪ್ರವೃತ್ತಿಗೆ ಸ್ವರ್ಗಾದಿ ಫಲವಾಗುತ್ತದೆಂದು ಸಾಧಿಸುತ್ತಾನೆ. ಇಂತಹ ಅನುಮಾನವು ಸಾಮಾನ್ಯತೋ ದೃಷ್ಟವು.

ಮತ್ತು ಅನುಮಾನವು ಸಾಧನಾನುಮಾನವು-ದೂಷಣಾನುಮಾನವು ಎಂದು ಎರಡು ವಿಧವು. ಧೂಮದಿಂದ ಅಗ್ನಿಯನ್ನು ಸಾಧಿ ಸಲು ಪ್ರವರ್ತಿಸುವ ಅನುಮಾನವು ಸಾಧನಾನುಮಾನವು. ದೃಷ್ಟಪ್ರಮಿತಿ ಸಾಧನ ಮತ್ತು ತರ್ಕವೆಂದು ದೂಷಣಾನುಮಾನವು ಎರಡು ವಿಧವಾಗಿ- ರುತ್ತದೆ. ಯಾವುದಾದರೊಂದು ಅನುಮಾನದಲ್ಲಿ ದೋಷವನ್ನು ವ್ಯಕ್ತಪಡಿಸುವ ಅನುಮಾನವು ದೃಷ್ಟಿಪ್ರಮಿತಿಸಾಧನವೆಂದು ಕರೆಸಿಕೊಳ್ಳುತ್ತದೆ. 'ಬೆಂಕಿಯು ತಣ್ಣಗಿದೆ' ಎಂದು ಸಾಧಿಸುವ ಅನುಮಾನವು ಬಾಧವೆಂಬ ದೋಷವಿರುವುದರಿಂದ ಸರಿಯಾದುದಲ್ಲವೆಂದು ಸಾಧಿಸಿದರೆ ಅದು ದೃಷ್ಟಪ್ರಮಿತಿಸಾಧನವೆಂದೆನ್ನಿಸಿಕೊಳ್ಳುತ್ತದೆ. ತರ್ಕವೆಂದರೆ- ಯಾವುದಾದರೊಂದು ಪ್ರಮಾಣವಿರುದ್ಧವಾದ ಅರ್ಥವನ್ನಂಗೀಕರಿಸಿದರೆ ಅನಿಷ್ಟವಾದ ಮತ್ತೊಂದು ಅರ್ಥವನ್ನು ಅಂಗೀಕರಿಸಬೇಕೆಂದು ಆಪಾದಿಸುವಿಕೆ. ಧೂಮಾನುಮಾನದಲ್ಲಿ ಹೊಗೆಯಿದ್ದರೂ ಬೆಂಕಿಯಿಲ್ಲದೇ ಇರಬಹುದೆಂದು ಶಂಕೆ ಬಂದರೆ, ಬೆಂಕಿಯಿಲ್ಲದಿದ್ದರೆ ಹೊಗೆಯಿಲ್ಲದೇ ಹೋಗಬೇಕಾಗುತ್ತದೆ ಎಂದು ಹೇಳುವಿಕೆಯು ತರ್ಕಕ್ಕೆ ಉದಾಹರಣವು.

## 5(ಆ) ಕಾರ್ಯಾನುಮಾನಾದಿ ತ್ರೈವಿಧ್ಯ

ಮೇಲೆ ಹೇಳಿದ ಎರಡುವಿಧವಾದ ಅನುಮಾನವು ಕಾರ್ಯಾನುಮಾನ-ಕಾರಣಾನುಮಾನ-ಅಕಾರ್ಯಕಾರಣಾನುಮಾನ ಎಂದು ಮೂರುವಿಧವುಳ್ಳದ್ದಾಗಿರುತ್ತದೆ. ಕಾರ್ಯದಿಂದ ಕಾರಣವನ್ನು ಸಾಧಿಸಿದರೆ ಅದು ಕಾರ್ಯಾನುಮಾನವೆಂದೆನ್ನಿಸಿಕೊಳ್ಳುತ್ತದೆ. ಧೂಮವು ಅಗ್ನಿಯನ್ನು ಸಾಧಿಸುವುದಕ್ಕೆ ಕಾರ್ಯಾನುಮಾನವಾಗುತ್ತದೆ. ಧೂಮವು ಬೆಂಕಿಯ ಕಾರ್ಯವಲ್ಲವೇ? ಕಾರ್ಯವನ್ನು ಸಾಧಿಸುವುದಕ್ಕೆ ಕಾರಣವನ್ನು ಹೇತುಮಾಡಿಕೊಂಡರೆ ಕಾರಣಾನುಮಾನವಾಗುತ್ತದೆ. ಮೋಡವುಂಟಾದರೆ ಮಳೆಯು ಬರುತ್ತದೆಂದು ತಿಳಿಯುತ್ತಾನೆ. ಇಲ್ಲಿ ಮೋಡವು ಎಂದರೆ ಮೇಘಾವರಣವು ವೃಷ್ಟಿಗೆ ಕಾರಣವಾಗಿದೆ. ಕಾರಣಾನುಮಾನವು ಸಾಕಾದಷ್ಟು ಕಾರಣಗಳು ಸೇರಿದರೆ ಅನುಮಾನ- ವಾಗುತ್ತದೆಯೇ ಹೊರತು ಕಾರಣಮಾತ್ರ ಸೇರಿದರೆ ಆಗುವುದಿಲ್ಲ. ಮೋಡಬಂದಾಗಲೆಲ್ಲಾ ಮಳೆಯಾಗುವುದಿಲ್ಲವೆಂಬುದನ್ನು ಎಲ್ಲರೂ ಬಲ್ಲರು. ಕಾರ್ಯವೂ ಕಾರಣವೂ ಕೂಡ ಅಲ್ಲದಿರುವ ಹೇತುವು ಅಕಾರ್ಯಕಾರಣಾನುಮಾನ ವೆಂದು ಹೇಳಲ್ಪಡುತ್ತದೆ. ಒಂದು ಹಣ್ಣಿನಲ್ಲಿ ಮಾಧುರ್ಯಾದಿ ರಸವು ಪೀತಾದಿರೂಪಕ್ಕೆ ಅನುಮಾನವಾಗುತ್ತದೆ. ಇಲ್ಲಿ ರಸವು ರೂಪಕ್ಕೆ ಕಾರಣವಲ್ಲ-ಕಾರ್ಯವೂ ಅಲ್ಲ.

## 6.(ಅ) ಸಾಂಗ ತರ್ಕನಿರೂಪಣೆ

ಮೇಲೆ ಹೇಳಿದಂತೆ ತರ್ಕಕ್ಕೆ ಐದು ಅಂಗಗಳು ಬೇಕಾಗಿರುತ್ತದೆ. ಆದರೆ ಸಾಧಾರಣವಾದ ಅನುಮಾನಗಳಲ್ಲಿ ಸಾಧ್ಯವೆಂಬುದಕ್ಕೆ ಬದಲು ಆಪಾದ್ಯವೆಂದು ಹೆಸರು. ಹೇತುವೆಂಬುದಕ್ಕೆ ಬದಲು ಆಪಾದಕವೆಂದು ಹೆಸರು ಉಪಯೋಗಿಸಲ್ಪಟ್ಟಿದೆ. (1) ಹೇತುವಿಗೆ ಸಾಧ್ಯದೊಂದಿಗೆ ವ್ಯಾಪ್ತಿಯಿರುವಂತೆ ತರ್ಕದಲ್ಲಿ ಆಪಾದಕಕ್ಕೆ ಆಪಾದ್ಯದೊಂದಿಗೆ ವ್ಯಾಪ್ತಿಯು. (2) ಬದಲು ಮತ್ತೊಂದು ತರ್ಕದಿಂದ ವಿರೋಧವಿಲ್ಲ- ದಿರುವಿಕೆಯು (3) ಆಪಾದ್ಯವು ಅನಿಷ್ಟವಾಗಿರುವಿಕೆಯು (4) ಆಪಾದ್ಯಕ್ಕೆ ವಿಪರ್ಯಯದಲ್ಲಿ ಪರ್ಯವಸಾನವಾಗುವಿಕೆಯು (5) ವಿರೋಧ- ಪಕ್ಷಕ್ಕೆ ಅನುಕೂಲವಿಲ್ಲದಿರುವಿಕೆಯು. ಈ ಐದರಲ್ಲಿ ಆಪಾದ್ಯದ ಅನಿಷ್ಟತ್ವವು ಪ್ರಾಮಾಣಿಕಹಾನ-ಅಪ್ರಾಮಾಣಿಕಕಲ್ಪನವೆಂದು ಎರಡು ವಿಧವಾಗುತ್ತದೆ. ಪ್ರಾಮಾಣಿಕಹಾನವೆಂದರೆ- ಪ್ರಮಾಣಸಿದ್ಧವನ್ನು ತ್ಯಾಗಮಾಡುವಿಕೆ; ಇದು ದೃಷ್ಟಹಾನ-ಅನುಮಿತಹಾನ-ಶ್ರುತಹಾನವೆಂದು ಮೂರುವಿಧವಾಗಿರುತ್ತದೆ. ಅಪ್ರಾಮಾಣಿಕಕಲ್ಪನವು ಕೂಡ ಅದೃಷ್ಟಕಲ್ಪನೆ-ಅನನ್ವಿತಕಲ್ಪನೆ-ಶ್ರುತಹಾನವೆಂದು ಮೂರುವಿಧವಾಗುತ್ತದೆ. ಇಂತಹ ಕಲ್ಪನೆಯೇ ಅನೇಕವಸ್ತುಗಳನ್ನು ಕಲ್ಪಿಸಬೇಕಾದರೆ ಕಲ್ಪನಾಗೌರವವೆಂದು ಕರೆಯಲ್ಪಡುತ್ತದೆ. ಆಪಾದ್ಯಕ್ಕೆ ಅನಿಷ್ಟತ್ವವು ಮತ್ತು ಆತ್ಮಾಶ್ರಯತ್ವವು, ಅನ್ಯೋನ್ಯಾಶ್ರಯತ್ವವು, ಚಕ್ರಕಾಶ್ರಯತ್ವವು, ಅನವಸ್ಥೆ ಕೇವಲಾನಿಷ್ಟವೆಂದು ಐದು ವಿಧವಾಗುತ್ತದೆ. ಈ ಐದೂ ಅನಿಷ್ಟಗಳ ಆಪಾದನರೂಪ- ವಾದಂತಹ ತರ್ಕವೂ ಐದುವಿಧವಾಗುತ್ತದೆ. ಈ ಐದುವಿಧಗಳಾವುವೆಂದರೆ ಆತ್ಮಾಶ್ರಯಾಪಾದನ, ಅನ್ಯೋನ್ಯಾಶ್ರಯಾಪಾದನ, ಚಕ್ರಕಾಶ್ರಯಾಪಾದನ, ಅನವಸ್ಥಾಪಾದನ, ಕೇವಲಾನಿಷ್ಟಾಪಾದನವೆಂದು. ಇವುಗಳ ವಿವರಣೆಯನ್ನು ಸಿದ್ಧಾಂತಗ್ರಂಥಗಳಿಂದಲೇ ತಿಳಿಯಲು ಸಾಧ್ಯವು.

## 6.(ಅ) ತರ್ಕಕ್ಕೆ ಪ್ರಾಮಾಣ್ಯನಿರೂಪಣೆ

ಅಯತಾರ್ಥಜ್ಞಾನಗಳಲ್ಲಿ ಸಂಶಯ-ವಿಪರ್ಯಯ-ತರ್ಕವೆಂದು ಮೂರು ಪ್ರಭೇದಗಳನ್ನು ನೈಯಾಯಿಕಾದಿಗಳು ಅಂಗೀಕರಿಸುತ್ತಾರೆ. ಈ ಸಿದ್ಧಾಂತಗಳಲ್ಲಿ ತರ್ಕದ ಸ್ವರೂಪವೇ ಯಥಾರ್ಥವಾಗಿರುವುದಿಲ್ಲ. ತರ್ಕದ ಉದಾಹರಣೆಗಳನ್ನು ವಿಚಾರಮಾಡಿದರೂ ಕೂಡ ಯಥಾರ್ಥತ್ವವು ಇಲ್ಲವೆಂದು ಸಿದ್ಧವಾಗುತ್ತದೆ. 'ಬೆಂಕಿಯಿಲ್ಲದೇ ಹೋದರೆ ಹೊಗೆಯಿಲ್ಲದೇ ಹೋಗಲಿ' ಎಂಬುದೇ ತರ್ಕವು. ಪರ್ವತಾದಿ ರೂಪವಾದ ಪಕ್ಷದಲ್ಲಿ ಹೊಗೆಯು ಪ್ರತ್ಯಕ್ಷದಿಂದ ಕಾಣುತ್ತಾದ ಕಾರಣ ಧೂಮವಿಲ್ಲವೆಂಬ ಆಪಾದಕಕ್ಕೆ ಅಸಿದ್ಧಿಯು ಬರುತ್ತದೆ. ಹೀಗೆಯೇ ಹೊಗೆಗೆ ವ್ಯಾಪಕವಾಗಿರುವ ಬೆಂಕಿಯಿಲ್ಲವೆಂಬುದಕ್ಕೆ ಪ್ರತ್ಯಕ್ಷಾದಿಗಳಿಂದ ಪರೀಕ್ಷಿಸಿದರೆ ಬೆಂಕಿಯು ಕಂಡುಬರುವುದರಿಂದ ಪ್ರತ್ಯಕ್ಷವಿರೋಧವೂ ಅಪಸಿದ್ಧಾಂತವೂ ಬರುತ್ತದೆ. ಆದುದರಿಂದ ತರ್ಕವು ಅನುಪ್ರಮಾಣವಾಗುವುದು ಹೇಗೆ? ಎಂದು ಆಕ್ಷೇಪ ಬರುತ್ತದೆ.

ಇದಕ್ಕೆ ಸಮಾಧಾನವೇನೆಂದರೆ, ತರ್ಕದಲ್ಲಿ ಆಪಾದಕವು ಸಾಧನಾನುಮಾನದ ಹೇತುಸ್ಥಾನದಲ್ಲಿರುವುದಾದರೂ ಇದಕ್ಕೆ ಹೇತುವಿಗಿರು ವಂತೆ ವಾಸ್ತವವಾಗಿ ಪಕ್ಷದಲ್ಲಿ ಸ್ಥಿತಿಯು ಅವಶ್ಯಕವಲ್ಲ. ಇಲ್ಲದಿರುವಿಕೆಯೇ ಭೂಷಣವಾಗಿರುತ್ತದೆ. ಇತರ ಪಕ್ಷದವನು ಹೊಗೆಯಿಲ್ಲವೆಂದು ಅಂಗೀಕರಿಸುವ ಮಾತ್ರದಿಂದಲೇ ಇದ್ದಂತೆ ಭಾವಿಸಿ ತರ್ಕವನ್ನು ಹೇಳುತ್ತಾನೆ. ಆದ್ದರಿಂದ ಪರಾಂಗೀಕಾರವೇ ಆಪಾದಕಕ್ಕೆ ಸಿದ್ಧಿ ಎಂದು ಅಭಿಪ್ರಾಯಪಡಬೇಕಾಗುತ್ತೆ. ಈ ಪ್ರಕಾರ ಅಸಿದ್ಧಿದೋಷವು ಇಲ್ಲವೆಂದಾಯಿತು. ಇನ್ನು ಪ್ರಮಾಣವಿರೋಧಕ್ಕೂ, ಅಪಸಿದ್ಧಾಂತಕ್ಕೂ ಪರಿಹಾರವನ್ನು ಮಾಡಬೇಕಲ್ಲವೇ? ಯಾವುದಾದರೊಂದು ಅರ್ಥವನ್ನು ಸಾಧಿಸುವುದಕ್ಕೆ ಪ್ರಮಾಣದಿಂದ ಸಹಾಯವು. ಪ್ರಮಾಣ ವಿರೋಧದಿಂದ ದೋಷವು ಉಂಟಾಗುತ್ತದೆ. ಆ ಪ್ರಕಾರ ಸಾಧಿಸುವುದರಿಂದ ಉಂಟಾದ ಒಂದು ಸಿದ್ಧಾಂತಕ್ಕೆ ಹಾನಿಯು ಸಂಭವಿಸಬಹುದು. ತರ್ಕಸ್ಥಳದಲ್ಲಿಯಾದರೋ ಇತರ ಪಕ್ಷದವನು ಅಂಗೀಕರಿಸಿದಂತಹ ಅಪ್ರಾಮಾಣಿಕವಸ್ತುವಿನ ಬಲದಿಂದ ಪರನಿಗೆ ಅನಿಷ್ಟವನ್ನು ಆಪಾದಿಸು- ತ್ತಾನೆಯೇ ಹೊರತು ಯಾವ ಅರ್ಥವನ್ನೂ ಸಾಧಿಸುವುದಿಲ್ಲ. ಮತ್ತು ಸಿದ್ಧಾಂತವಿರೋಧವೂ ಇರುವುದಿಲ್ಲ. ಅನಿಷ್ಟಾಪಾದನೆಯು ಅನುಕೂಲವೇ ಆಗಿರುತ್ತದೆ. ಈ ಸ್ಥಿತಿಯನ್ನು ಪರ್ಯಾಲೋಚಿಸಿದರೆ ತರ್ಕವು ಸಾಮಾನ್ಯದೃಷ್ಟಿಯಲ್ಲಿ ಅಯಥಾರ್ಥವಾಗಿ ಕಂಡುಬಂದರೂ ಅದರ ಪರ್ಯವಸಾನವು ಯಥಾರ್ಥಜ್ಞಾನವನ್ನೇ ಉಂಟುಮಾಡುವುದರಲ್ಲಿ ಫಲಿಸುತ್ತಾದಕಾರಣ ತರ್ಕದ ಪ್ರಾಮಾಣ್ಯಕ್ಕೆ ಯಾವ ಬಾಧೆಯೂ ಇಲ್ಲವೆಂದು ತಿಳಿಯತಕ್ಕದ್ದು.

ಮತ್ತು ಪ್ರಮಾಣಾಕಾರದಲ್ಲಿರುವ ಅನುಮಾನದಂತೆಯೇ ತರ್ಕದ ಆಕಾರವನ್ನು ಪರ್ಯವಸಾನದಲ್ಲಿ ನಿರೂಪಿಸುವ ಪ್ರಾಕಾರಾಂತರಗಳೂ ದ್ವೈತಸಿದ್ಧಾಂತದ ಗ್ರಂಥಗಳಲ್ಲಿ ಸವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಆ ಪ್ರಕಾರಗಳು ಇಲ್ಲಿ ನಿರೂಪಿಸಿದರೆ ಸುಬೋಧವಾಗುವುದಿಲ್ಲವೆಂದು ಸಂಕ್ಷೇಪಿಸಿದ್ದೇವೆ.

## 7(ಅ) ಪರಾರ್ಥಾನುಮಾನದಲ್ಲಿ ಬೇಕಾದ ನ್ಯಾಯಾವಯವ ವಿಚಾರ:

ಪರಾರ್ಥಾನುಮಾನ ಸ್ವರೂಪವು ಹಿಂದೆಯೇ ಹೇಳಲ್ಪಟ್ಟಿತು. ಪರಾರ್ಥಾನುಮಾನಕ್ಕೆ ನ್ಯಾಯವಾಕ್ಯಗಳ ಪ್ರಯೋಗವು ಅವಶ್ಯಕವು. ನ್ಯಾಯವಾಕ್ಯದ ಒಂದೊಂದು ಭಾಗಕ್ಕೆ ಅವಯವಗಳೆಂದು ಹೆಸರು. ಅಂತಹ ಅವಯವಗಳು ಪ್ರತಿಜ್ಞಾ-ಹೇತು-ಉದಾಹರಣೆ-ಉಪನಯ- ನಿಗಮನವೆಂದು ಐದಾಗಿರುತ್ತದೆ. ಪಕ್ಷವು ಸಾಧ್ಯವುಳ್ಳದ್ದು ಎಂದು ಪ್ರತಿಪಾದಿಸುವ ವಾಕ್ಯವು ಪ್ರತಿಜ್ಞೆ ಯೆನ್ನಿಸಿಕೊಳ್ಳುತ್ತದೆ. ಧೂಮಾನುಮಾನ ದಲ್ಲಿ ಪರ್ವತವು ಬೆಂಕಿಯುಳ್ಳದ್ದು ಎಂಬ ವಾಕ್ಯವು ಪ್ರತಿಜ್ಞೆಯು. ಈ ವಾಕ್ಯವನ್ನು ಕೇಳಿದ ಮೇಲೆ ಏಕೆ? ಎಂಬ ಆಕಾಂಕ್ಷೆಯನ್ನು ಪರಿಹರಿಸುವ ಪಂಚಮೀ ಅಥವಾ ತೃತೀಯಾ ವಿಭಕ್ತ್ಯಂತವಾದ ಲಿಂಗವಚನವು ಹೇತು ಎಂದು ಕರೆಸಿಕೊಳ್ಳುತ್ತದೆ. ಅದೇ ಅನುಮಾನದಲ್ಲಿ 'ಧೂಮವಿರುವ

ಕಡೆಯಿಂದ' ಎಂಬುದು ಹೇತುವಾಕ್ಯವು. ಹೇತುವಿಗೆ ಸಾಧ್ಯದೊಂದಿಗೆ ವ್ಯಾಪ್ತಿಯನ್ನು ತೋರಿಸಿ ದೃಷ್ಟಾಂತವನ್ನು ಪ್ರತಿಪಾದಿಸುವ ವಾಕ್ಯವು ಉದಾಹರಣೆಯೆನ್ನಿಸಿಕೊಳ್ಳುತ್ತದೆ. ದೃಷ್ಟಾಂತವೆಂದರೆ-ಹೇತು,ಸಾಧ್ಯ ಇವೆರಡೂ ನಿಶ್ಚಯವಾಗಿದೆ ಎಂದು ಒಪ್ಪಿರುವ ಸ್ಥಳ ಅದು ಸಾಧರ್ಮ್ಯ ದೃಷ್ಟಾಂತ, ವೈಧರ್ಮ್ಯದೃಷ್ಟಾಂತ ಎಂದು ದ್ವಿವಿಧವು. ಈ ದ್ವೈವಿಧ್ಯವನ್ನನುಸರಿಸಿ ಉದಾಹರಣವಾಕ್ಯವೂ ದ್ವಿವಿಧವಾಗಿದೆ. 'ಎಲ್ಲಿ ಧೂಮವಿದೆಯೋ ಅಲ್ಲಿ ಬೆಂಕಿಯಿದೆ, ಅಡುಗೆಮನೆಯಂತೆ' ಎಂಬುದು ಸಾಧರ್ಮ್ಯೋದಾಹರಣ. 'ಎಲ್ಲಿ ಬೆಂಕಿಯಿರುವುದಿಲ್ಲವೋ ಅಲ್ಲಿ ಹೊಗೆಯಿರುವುದಿಲ್ಲ. ದೊಡ್ಡ ಮಡುವಿದ್ದಂತೆ' ಎಂಬುದು ವೈಧರ್ಮ್ಯೋದಾಹರಣ. ದೃಷ್ಟಾಂತದಲ್ಲಿ ಸಿದ್ಧವಾದ ವ್ಯಾಪ್ತಿಯುಳ್ಳ ಲಿಂಗವು ಪಕ್ಷದಲ್ಲಿ ಇದೆಯೆಂದು ಪ್ರತಿಪಾದಿಸುವ ವಾಕ್ಯವು ಉಪನಯವು. ಹೇತುಸಹಿತವಾಗಿ ಪಕ್ಷದಲ್ಲಿ ಸಾಧ್ಯಸಂಬಂಧವನ್ನು ತೋರಿಸುವ ವಾಕ್ಯವು ನಿಗಮನವು. ಮೇಲಿನ ಅನುಮಾನದಲ್ಲಿ 'ಪರ್ವತದಲ್ಲಿ ಅಗ್ನಿಯೊಂದಿಗೆ ವ್ಯಾಪ್ತಿಯುಳ್ಳ ಧೂಮವು ಇದೆ' ಎಂಬುದು ಉಪನಯವು. 'ಧೂಮವಿರುವುದರಿಂದ ಪರ್ವತವು ವಹ್ನಿಯುಳ್ಳದ್ದಾಗಿದೆ ಎಂಬ ವಾಕ್ಯವು ನಿಗಮನವು.

ಈ ಪ್ರಕಾರ ಐದು ಅವಯವಗಳು ಪರಾರ್ಥಾನುಮಾನದಲ್ಲಿ ಇರಬೇಕೆಂದು ನೈಯಾಯಿಕರು ಹೇಳುತ್ತಾರೆ. ಈ ಐದರಲ್ಲಿ ಪ್ರತಿಜ್ಞಾ-ಹೇತು ಉದಾಹರಣೆ ಎಂದಾಗಲೀ ; ಉದಾಹರಣೆ- ಉಪನಯ-ನಿಗಮನವೆಂದಾಗಲೀ ಮೂರು ಅವಯವಗಳು ಮಾತ್ರಸಾಕೆಂದು ಭಾಟ್ಟರು ಹೇಳುತ್ತಾರೆ. ಉದಾಹರಣೆ- ಉಪನಯ ಇವೆರಡು ಮಾತ್ರಸಾಕೆಂದು ಬೌದ್ಧರು ಹೇಳುತ್ತಾರೆ.

## 7(ಆ) ಅವಯವಸಂಖ್ಯಾನಿಯಮವು ಯುಕ್ತವಲ್ಲ.

ಈ ಪ್ರಕಾರ ಅವಯವಗಳ ಸಂಖ್ಯಾನಿಯಮವು ಯುಕ್ತವಲ್ಲ. ವ್ಯಾಪ್ತಿಯಲ್ಲಿ ಅನ್ವಯವ್ಯಾಪ್ತಿ, ವ್ಯತಿರೇಕವ್ಯಾಪ್ತಿ ಎಂಬ ದ್ವೈವಿಧ್ಯವನ್ನು ಪೂರ್ವದಲ್ಲಿ ನಿರಾಕರಿಸಿರುತ್ತೇವಾದ ಕಾರಣ, ಸಾಧರ್ಮ್ಯೋದಾಹರಣೆ, ವೈಧರ್ಮ್ಯೋದಾಹರಣ ಎಂಬ ಉದಾಹರಣ ದ್ವೈವಿಧ್ಯಗಳು ಅಸಂಗತವಾದವು. ಅಲ್ಲದೇ ಸಂಖ್ಯಾನಿಯಮವು ಅವಶ್ಯಕವಿಲ್ಲ. ಈ ಅವಯವಗಳು ಉಪದೇಶರೂಪವಾಗಿ ಅವಶ್ಯ ವಕ್ತವ್ಯವಲ್ಲ. ಪರಪುರುಷನಿಗೆ ತಿಳಿಸುವುದಕ್ಕಾಗಿ ಹೇತುವಕ್ತವ್ಯವೇ ಹೊರತು ಜಪಾದ್ಯರ್ಥವಾಗಿ ಮಂತ್ರದಂತೆ ಪ್ರಯೋಗಿಸತಕ್ಕದಲ್ಲ. ಒಂದು ವೇಳೆ ಉಪದೇಶ ಮಾಡತಕ್ಕವನಲ್ಲಿ ಉಪದೇಶ ಪಡೆಯುವವನಿಗೆ ನಂಬಿಕೆಯಿರುವ ಪಕ್ಷದಲ್ಲಿ ಇಷ್ಟುವಾಕ್ಯಗಳಿದ್ದರೆ ಅವನ ಮಾತಿನಂತೆಯೇ ಮತ್ತೊಬ್ಬನಿಗೆ ತಿಳುವಳಿಕೆಯುಂಟಾಗುತ್ತದೆಂದು ಹೇಳಬಹುದು. ಹಾಗೆ ನಂಬಿಕೆಯಿರುವುದಾದರೆ ಹೇತುಪ್ರತಿಪಾದನಾದಿಗಳು ಅನಾವಶ್ಯಕವಾಗುತ್ತದೆ. ಅಲ್ಲದೇ ಒಂದು ಕ್ರಮದಿಂದ ಮಾತುಗಳಿರಬೇಕೆಂತಲೂ ನಿಯಮವಿಲ್ಲ.ಪ್ರಕಾರಾಂತರದಿಂದ ಮಾತುಗಳಿದ್ದರೂನೂ ತಿಳುವಳಿಕೆಯುಂಟಾಗಬಹುದು. ಆದುದರಿಂದ ಪರಪುರುಷನಿಗೆ ತಿಳಿಯುವುದಕ್ಕೆ ಎಷ್ಟುಮಾತುಗಳು ಅವಶ್ಯಕವೋ ಅಷ್ಟುಮಾತುಗಳು ಐದಕ್ಕೆ ಕಡಿಮೆಯಾದರೂ, ಅಥವಾ ಹೆಚ್ಚಾಗಿಯಾದರೂ ಇರುವುದು ಯುಕ್ತವೆಂದು ದ್ವೈತಿಗಳು ಅಭಿಪ್ರಾಯಪಡುತ್ತಾರೆ.

## 8. ಹೇತ್ವಾಭಾಸದ ಲಕ್ಷಣಗಳು

ವಾಸ್ತವವಾಗಿ ವ್ಯಾಪ್ತಿ-ಸಮುಚಿತದೇಶವೃತ್ತಿತ್ವ ಎಂಬ ಎರಡಂಗಗಳು ಉಳ್ಳಂತಹ ಲಿಂಗವು ಅನುಮಾನವೆಂದು ಕರೆಯಲ್ಪಡುತ್ತದೆಂದು ಹೇಳಿದೆವು. ಅಂತಹ ಅನುಮಾನವು ಅನುಮಿತಿಯನ್ನು ಹುಟ್ಟಿಸುತ್ತದೆ. ಅಂತಹ ಲಿಂಗವೂ ಸದ್ಧೇತುವೆಂದು ಕರೆಯಲ್ಪಡುತ್ತದೆ. ವ್ಯಾಪ್ತಿ-ಸಮುಚಿತದೇಶವೃತ್ತಿತ್ವಗಳನ್ನುಪಡೆಯದೇ ಹೇತುವಿನಂತೆ ತೋರುವಂತಹವು ಹೇತ್ವಾಭಾಸವೆಂದು ಕರೆಯಲ್ಪಡುತ್ತದೆ. ಇಂತಹ ಹೇತ್ವಾಭಾಸಕ್ಕೆ ನೈಯಾಯಿಕರು ಅನೇಕ ಲಕ್ಷಣಗಳನ್ನು ಹೇಳಿರುತ್ತಾರೆ. ಆ ಲಕ್ಷಣಗಳಲ್ಲಿ ಒಂದೊಂದರ ವಿಚಾರವು ಶಾಸ್ತ್ರದಲ್ಲಿ ಬಹುಗ್ರಂಥಗಳಿಂದ ನಿರೂಪಿತ ವಾಗಿದೆ. ಅವುಗಳ ತತ್ವವನ್ನು ಬಹು ಸೂಕ್ಷ್ಮದೃಷ್ಟಿಯಿಂದ ವ್ಯಾಸಂಗಮಾಡಿದರೇನೇ ತಿಳಿಯತಕ್ಕುದಾಗಿರುತ್ತದೆ. ಈಗ ಸಂಗ್ರಹವಾಗಿ ನಿರೂಪಣೆ ಮಾಡುತ್ತಿರುವುದರಿಂದ ಆ ವಿಷಯಗಳನ್ನು ಪೂರ್ಣವಾಗಿ ಹೇಳುವುದೂ, ಒಂದು ವೇಳೆ ಹೇಳಿದರೂ ಅವುಗಳನ್ನು ಪೂರ್ವವ್ಯಾಸಂಗವಿಲ್ಲದವರು ಗ್ರಹಿಸುವುದು ಕೂಡ ಅಸಾಧ್ಯವೇ ಆಗಿರುತ್ತದೆ. ಆದುದರಿಂದ ದ್ವೈತಿಗಳು ಹೇಳುವ ಲಕ್ಷಣಮಾತ್ರವೇ ಪ್ರತಿಪಾದಿಸಲ್ಪಡುತ್ತದೆ. ಲಿಂಗದಂತೆ ತೋರುವ ಹೇತುವು ಎಂತಹ ಸಂದರ್ಭದಲ್ಲಿ ಜ್ಞಾನವನ್ನೇ ಹುಟ್ಟಿಸುವುದಿಲ್ಲವೋ ಅಥವಾ ಸಂಶಯವಿಪರ್ಯಯಗಳನ್ನು ಹುಟ್ಟಿಸುತ್ತವೋ ಅಂತಹುವು ಹೇತ್ವಾಭಾಸಗಳೆಂದು ಲಕ್ಷಣವನ್ನು ಸಾಮಾನ್ಯವಾಗಿ ತಿಳಿಯತಕ್ಕದು. ದೊಡ್ಡಮಡುವಿನಲ್ಲಿ ಹೊಗೆಯಿರುವುದರಿಂದ ಬೆಂಕಿಯಿದೆ ಎಂದು ಅನುಮೇಯಿಸುವುದಾದರೆ ಇಲ್ಲಿ ನೀರಿನಿಂದ ಪೂರ್ಣವಾಗಿರುವ ಮಡುವಿನಲ್ಲಿ ಬೆಂಕಿಯಿರುವುದು ಪ್ರತ್ಯಕ್ಷವಿರುದ್ಧ . ಹೊಗೆಯಿರು- ವುದೂ ಬಾಧವೆಂತಲೂ, ಹೊಗೆಯಿಲ್ಲದಿರುವಿಕೆಯನ್ನು ಅಸಿದ್ಧಿಯೆಂತಲೂ ಶಾಸ್ತ್ರದಲ್ಲಿ ಹೇಳುತ್ತಾರೆ.

## 9. ಅದರಲ್ಲಿ ನೈಯಾಯಿಕೋಕ್ತ ವೈಶೇಷಿಕೋಕ್ತ ಪ್ರಕ್ರಿಯೆಯಲ್ಲಿ ವೇದಾಂತಿಗಳೂ ಅದರಲ್ಲಿಯೂ ವಿಶೇಷವಾಗಿ ದ್ವೈತಿಗಳು ಮಾಡಿರುವ ವಿಚಾರ:

ಸರಿಯಾದ ಹೇತುವಿಗೆ (1) ಪಕ್ಷದಲ್ಲಿರುವಿಕೆಯು (2)ಸಪಕ್ಷದಲ್ಲಿ ಸಾಧ್ಯವಿರುವ ಸ್ಥಳದಲ್ಲಿಯೂ ಇರುವಿಕೆಯು, (3)ವಿಪಕ್ಷದಲ್ಲಿ ಅಂದರೆ ಸಾಧ್ಯವಿಲ್ಲವೆಂದು ನಿಶ್ಚಿತವಾದ ಸ್ಥಳದಲ್ಲಿ ಇಲ್ಲದಿರುವಿಕೆಯು, (4) ಸಾಧನೆಗೆ ವಿಷಯವಾದುದು, ಪಕ್ಷದಲ್ಲಿ ಪ್ರಮಾಣದಿಂದ ಬಾಧಿತವಲ್ಲದೇ ಇರುವಿಕೆಯು, (5) ತನ್ನ ಸಾಧ್ಯಕ್ಕೆ ಅಭಾವವನ್ನು ಸಾಧಿಸುವಂತಹ ಪ್ರತಿಹೇತುವಿಲ್ಲದಿರುವಿಕೆಯು ಎಂದು ಐದು ಧರ್ಮಗಳು

ಅವಶ್ಯಕವು. ಇವುಗಳಲ್ಲಿ ಅನ್ವಯವ್ಯತಿರೇಕಿಯಾದ ಹೇತುವಿಗೆ ಐದೂ ಇರಬೇಕು. ಇತರವಿಧವಾದ ಎರಡಕ್ಕೂ ಎಂದರೆ ಕೇವಲಾನ್ವಯಿ, ಕೇವಲ- ವ್ಯತಿರೇಕಿಗೂ ನಾಲ್ಕು ನಾಲ್ಕು ಧರ್ಮಗಳು ಅವಶ್ಯವಾಗಿರಬೇಕು. ಕೇವಲಾನ್ವಯಿ ಹೇತುವಿಗೆ ವಿಪಕ್ಷವಿಲ್ಲದಿರುವುದರಿಂದ ವಿಪಕ್ಷದಲ್ಲಿಲ್ಲ- ದಿರುವಿಕೆಯು ಇರುವುದಿಲ್ಲ. ಕೇವಲವ್ಯತಿರೇಕಿಗೆ ಸಪಕ್ಷವಿಲ್ಲದಿರುವುದರಿಂದ ಸಪಕ್ಷದಲ್ಲಿ ಇರುವಿಕೆಯು ಇರುವುದಿಲ್ಲ. ಈ ಪ್ರಕಾರ ಆಯಾ ಹೇತುಗಳಿಗೆ ಅವಶ್ಯವಿರಬೇಕಾದ ಧರ್ಮಗಳಲ್ಲಿ ಕೆಲವಿದ್ದು ಮತ್ತು ಕೆಲವಿಲ್ಲದಿರುವಂತಹುದು ಹೇತ್ವಾಭಾಸವೆನ್ನಿಸಿಕೊಳ್ಳುತ್ತದೆ. ಅವುಗಳು ಅಸಿದ್ಧ-ವಿರುದ್ಧ-ಅನೈಕಾಂತಿಕ-ಅನಧ್ಯವಸಿತ-ಕಾಲಾತ್ಯಪದಿಷ್ಟ-ಸತ್ಪ್ರತಿಪಕ್ಷ-ಪ್ರಕರಣಸಮ ಎಂದು ಏಳುವಿಧವಾಗಿರುತ್ತದೆ.

ಅವುಗಳಲ್ಲಿ ವ್ಯಾಪ್ಯವಾದ ಹೇತುವಿಗೆ ಪಕ್ಷದಲ್ಲಿರುವಿಕೆಯು ಯಥಾರ್ಥಜ್ಞಾನವು ಸಿದ್ಧಿಯೆಂದೆನ್ನಿಸಿಕೊಳ್ಳುತ್ತದೆ. ಅದಿಲ್ಲದಿರುವಿಕೆಯು ಅಸಿದ್ಧಿಯು. ಅಸಿದ್ಧಿಯುಳ್ಳದ್ದು ಅಸಿದ್ಧವು. ಅದು (1)ವ್ಯಾಪ್ಯತ್ವಾಸಿದ್ಧ (2)ಆಶ್ರಯಾಸಿದ್ಧ (3)ಪಕ್ಷಧರ್ಮತಾಸಿದ್ಧ (4)ಏತತ್ಪ್ರಮಿತ್ಯಸಿದ್ಧವೆಂದು ನಾಲ್ಕು ಪ್ರಕಾರವುಳ್ಳದ್ದು. ಅದರಲ್ಲಿ ವ್ಯಾಪ್ಯತ್ವಾಸಿದ್ಧವು ಸಾಧ್ಯಸಂಬಂಧವೇ ಇಲ್ಲದಂತುಹುದು, ಸೋಪಾಧಿಕವಾದ ಸಾಧ್ಯಸಂಬಂಧವುಳ್ಳದು ಎಂದು ಎರಡು ವಿಧವು ಇತ್ಯಾದಿ ಭೇದಗಳನ್ನು ನೈಯಾಯಿಕರು ಮತ್ತು ವೈಶೇಷಿಕರು ಹೇಳುತ್ತಾರೆ. ಇವುಗಳಲ್ಲಿ ಕೆಲವು ಹೇತ್ವಾಭಾಸಗಳು ದೋಷವೇ ಅಲ್ಲವೆಂತಲೂ, ಮತ್ತುಕೆಲವು ದೋಷಾಂತರದಲ್ಲಿ ಅಂತರ್ಭೂತವಾಗುತ್ತವೆಂತಲೂ ವೇದಾಂತಿಗಳೂ ಮತ್ತು ದ್ವೈತಿಗಳೂ ವಿಸ್ತರಿಸಿ ಹೇಳಿದ್ದಾರೆ. ಅವುಗಳನ್ನು ತತ್ತದ್ವೇದಾಂತಗಳನ್ನು ನೋಡಿ ತಿಳಿದುಕೊಳ್ಳಬಹುದು.

## 10. ಜಾತಿನಿಗ್ರಹಗಳ ಸ್ಥಾನ

ವಾದಿಪ್ರತಿವಾದಿಗಳಲ್ಲಿ ಒಬ್ಬನಿಗೆ ಜಯವಾಯಿತು ಮತ್ತೊಬ್ಬನಿಗೆ ಪರಾಜಯವಾಯಿತು ಎಂದು ನಿಶ್ಚಯಿಸುವುದಕ್ಕೆ ಸಾಧನವಾದುದು ನಿಗ್ರಹಸ್ಥಾನವೆಂದು ಕರೆಯಲ್ಪಡುತ್ತದೆ. ಅಂತಹ ನಿಗ್ರಹಸ್ಥಾನಗಳು ಇಪ್ಪತ್ತೆರಡು ವಿಧಗಳುಳ್ಳವೆಂದು ನೈಯಾಯಿಕರು ಹೇಳುತ್ತಾರೆ. ಅವುಗಳಲ್ಲಿ ನಿರನುಯೋಜ್ಯಾನುಯೋಗವೆಂಬ ನಿಗ್ರಹಸ್ಥಾನದಲ್ಲಿ ಸೇರಿರುವಂತಹ ಜಾತ್ಯುತ್ತರಗಳು ಇಪ್ಪತ್ತನಾಲ್ಕು ಪ್ರಕಾರವುಳ್ಳವೆಂತಲೂ ಹೇಳುತ್ತಾರೆ. ಇವುಗಳು ಸಮಸ್ತವೂ ಅವರು ಹೇಳಿದ ಪ್ರಕಾರಹೊಂದುವುದಿಲ್ಲ ಎಂಬ ವಿವರವು ದ್ವೈತಸಿದ್ಧಾಂತದ ಗ್ರಂಥಗಳಲ್ಲಿ ವಿಸ್ತರಿಸಿ ನಿರೂಪಿಸಲ್ಪಟ್ಟಿವೆ. ಅವುಗಳನ್ನು ಪೂರ್ಣವಾಗಿ ವಿವರಿಸುವುದು ಈಗ ಶಕ್ಯವಲ್ಲ ಮತ್ತು ಶ್ರೋತೃಗಳಿಗೆ ಸುಲಭವಾಗಿ ತಿಳಿಯತಕ್ಕವೂ ಅಲ್ಲವೆಂದು ಸಂಕ್ಷೇಪಿಸಲ್ಪಟ್ಟಿದೆ.

## ಶಬ್ದನಿರೂಪಣೆ

ಈಗ ಮೂರನೆಯ ಪ್ರಮಾಣವಾದ ಶಬ್ದನಿರೂಪಣವು ಕರ್ತವ್ಯವಾಗಿದೆ. ಈ ನಿರೂಪಣಕ್ಕೆ ಪೂರ್ವದಲ್ಲಿ ಮಾಡಿದ ಪ್ರಮಾಣಗಳ ನಿರೂಪಣದಿಂದ ಸಂಗತಿಯು ಅವಸರವೆಂದು ಹೇಳಲ್ಪಡುತ್ತದೆ. ಪ್ರಮಾಣತ್ರೈವಿಧ್ಯವನ್ನು ಹೇಳುವವರ ಮತದಲ್ಲಿ ಶಬ್ದಪ್ರಮಾಣವೇ ಕೊನೆಯದಾದ ಕಾರಣ ಪ್ರತ್ಯಕ್ಷಾನುಮಾನಗಳ ನಿರೂಪಣಾನಂತರದಲ್ಲಿ ಉಳಿದಿರುವ ಶಬ್ದಪ್ರಮಾಣದ ಜಿಜ್ಞಾಸೆಯು ಉಂಟಾಗುತ್ತಾದ ಕಾರಣ ಈ ನಿರೂಪಣಕ್ಕೆ ಅವಸರವು ಪ್ರಾಪ್ತವಾಯಿತು. ಅಥವಾ, ಅನುಮಾನ ಪ್ರಮಾಣವನ್ನು ನಿರೂಪಿಸಿದ ನಂತರ ಶಬ್ದಪ್ರಮಾಣವನ್ನು ನಿರೂಪಿಸ ಬೇಕಾದರೆ ಉಪಜೀವ್ಯೋಪಜೀವಕಭಾವವೆಂಬ ಸಂಗತಿಯು ಬರುತ್ತದೆ. ಅತೀಂದ್ರಿಯ ವಸ್ತುಗಳನ್ನು ಪಕ್ಷ ಮತ್ತು ಹೇತುವನ್ನಾಗಿ ಮಾಡಿಕೊಂಡು ಅನುಮಾನ ಪ್ರಯೋಗಮಾಡಿದರೆ ಅಂತಹ ವಸ್ತುಗಳ ಜ್ಞಾನವು ಶಬ್ದಪ್ರಮಾಣಹೊರತು ಆಗುವುದಿಲ್ಲವಾದ ಕಾರಣ ಅಂತಹ ಅನುಮಾನಗಳ ಪ್ರವೃತ್ತಿಗೆ ಶಬ್ದಪ್ರಮಾಣವು ಮೂಲವಾಗಿರುತ್ತದೆ. ಈ ಪ್ರಕಾರ ಸಂಗತಿಗಳನ್ನು ತಿಳಿಯತಕ್ಕುದು.

## 1.ಶಬ್ದಪ್ರಮಾಣದ ಲಕ್ಷಣ

ನಿರ್ದೋಷವಾದ ಶಬ್ದವು, ಅಥವಾ ನಿರ್ದೋಷವಾದ ವಾಕ್ಯವು ಶಬ್ದಪ್ರಮಾಣವೆಂದೆನ್ನಿಸಿಕೊಳ್ಳುತ್ತದೆ.ಇದಕ್ಕೆ ಆಗಮವೆಂತಲೂ ಹೆಸರು. 'ಆ+ಸಮ್ಯಕ್+ಗಮಯತೀತಿ=ಆಗಮಃ' ಎಂಬ ವ್ಯುತ್ಪತ್ತಿಯಿಂದ ಚೆನ್ನಾಗಿ ಯಥಾರ್ಥಜ್ಞಾನವನ್ನು ಹುಟ್ಟಿಸುತ್ತದೆ, ಎಂದು ಈ ಶಬ್ದವು ಅನ್ವರ್ಥಕವು. ಶಬ್ದಪ್ರಮಾಣದಿಂದ ತಿಳಿಯತಕ್ಕ ವಿಷಯಗಳು ತತ್ಕಾಲದಲ್ಲಿಯೇ ಇರತಕ್ಕುವಾಗಿಯೂ, ತದ್ದೇಶದಲ್ಲಿಯೇ ಇರತಕ್ಕುದಾಗಿಯೂ ಇರಬೇಕೆಂಬ ನಿಯಮವಿಲ್ಲ. ಕಾಲಾಂತರದಲ್ಲಿಯೂ ದೇಶಾಂತರದಲ್ಲಿಯೂ ಇರತಕ್ಕುವಾಗಿರುವ ವಿಷಯಗಳನ್ನು ಇಂದ್ರಿಯಸನ್ನಿಕರ್ಷಾದಿ ಸಹಾಯವನ್ನು ಅಪೇಕ್ಷಿಸದೇ ಶಬ್ದವು ತಿಳಿಸಿಕೊಡುತ್ತಾದ ಕಾರಣ ಇದು ವಿಷಯಗಳ ಜ್ಞಾನವನ್ನು ಚೆನ್ನಾಗಿ ಹುಟ್ಟಿಸುತ್ತದೆ ಎಂಬುದು ಸರ್ವಾನುಭವ ಸಿದ್ಧವು. ಶ್ರೋತ್ರೇಂದ್ರಿಯದಿಂದ ಗ್ರಾಹ್ಯವಾದ ಧ್ವನ್ಯಾತ್ಮಕವಾದ ಶಬ್ದವು, ಅಥವಾ ಅಂತಹ ವರ್ಣಗಳ ಸಮುದಾಯರೂಪವಾದ ಪದವು ಶಬ್ದವೆಂದು ಇಲ್ಲಿ ಅಭಿಮತವು. ಅಂತಹ ಶಬ್ದವು ದೋಷಗಳಿಂದ ರಹಿತವಾದರೆ ಯಥಾರ್ಥಜ್ಞಾನವನ್ನು ಹುಟ್ಟಿಸುತ್ತದೆ.

ವಾಕ್ಯವೆಂದರೆ- ಆಕಾಂಕ್ಷಾ-ಯೋಗ್ಯತಾ-ಸನ್ನಿಧಿಗಳಿಂದ ಕೂಡಿರುವ ಪದಗಳ ಸಮುದಾಯವು. ಪದವೆಂದರೆ, ವಿಭಕ್ತ್ಯಂತವಾದ ವರ್ಣಗಳ ಸಮುದಾಯವು. ಪ್ರಾಯಿಕವಾಗಿ ಅನೇಕವರ್ಣಗಳ ಸಮುದಾಯ ರೂಪವಾಗಿರುತ್ತವೆ. ಕೆಲವು ಮಾತ್ರ ಏಕವರ್ಣಾತ್ಮಕವಾಗಿಯೂ ಇರುತ್ತವೆ. 'ಅಃ ಇಃ ಕಃ' ಇತ್ಯಾದಿಗಳು ವರ್ಣಸಮುದಾಯರೂಪವಲ್ಲದಿದ್ದರೂ ವಿಭಕ್ತ್ಯಂತವಾಗಿರುವುದರಿಂದ ಪದವೆನ್ನಿಸಿಕೊಳ್ಳುವುದಕ್ಕೆ ಬಾಧಕವಿರುವುದಿಲ್ಲ. ಇಂತಹ ಪದಗಳ ಸಮುದಾಯರೂಪವಾದ ವಾಕ್ಯವು ಆಕಾಂಕ್ಷಾ- ಯೋಗ್ಯತಾ-ಸನ್ನಿಧಿಗಳಿಂದ

ಯುಕ್ತವಾದರೆ ದೋಷ ರಹಿತವಾಗಿರುತ್ತದೆ. ಆದುದರಿಂದ ವಾಕ್ಯವೇ ಶಬ್ದಪ್ರಮಾಣವೆಂದು ಲಕ್ಷಣವನ್ನು ಹೇಳಿದರೂ ಕೂಡ ಸಾಕಾಗಿದ್ದರೂ ಆಕಾಂಕ್ಷಾದಿಗಳಿಂದ ಯುಕ್ತತ್ವ ಮಾತ್ರದಿಂದ ನಿವರ್ತಿಸುವ ದೋಷಗಳಲ್ಲದೇ, ದೋಷಾಂತರಗಳನ್ನು ಪರಿಹರಿಸುವುದಕ್ಕಾಗಿ ನಿರ್ದೋಷವಾಕ್ಯವೆಂದು ಹೇಳಲ್ಪಟ್ಟಿದೆ.

## 2.ಶಾಬ್ದಬೋಧ ಸಾಮಗ್ರೀ

ಮೇಲೆ ಹೇಳಿದಂತಹ ಶಬ್ದಪ್ರಮಾಣದಿಂದ ಹುಟ್ಟುವಂತಹ ಯಥಾರ್ಥಜ್ಞಾನವು ಶಾಬ್ದಬೋಧವೆಂದು ಕರೆಯಲ್ಪಡುತ್ತದೆ. ಶಾಬ್ದಬೋಧವು ವಾಕ್ಯದಿಂದ ಹುಟ್ಟಬೇಕಾದರೆ ವಾಕ್ಯವು ಚೆನ್ನಾಗಿ ಶ್ರೋತ್ರೇಂದ್ರಿಯದಿಂದ ಗ್ರಹಿಸಲ್ಪಡಬೇಕು. ಆ ಪ್ರಕಾರ ಗ್ರಹಿಸಲ್ಪಟ್ಟ ಪದಗಳಿಗೆ ವಾಚ್ಯವಾಚಕಭಾವಸಂಬಂಧದ ಜ್ಞಾನ ಅಥವಾ ಸ್ಮರಣ ಇವುಗಳು ಉಂಟಾಗಬೇಕು. ವಾಕ್ಯಶ್ರವಣವನ್ನು ಮಾಡಿದಂತಹವನಿಗೆ ಶಬ್ದದಿಂದ ಜ್ಞಾನ ಉಂಟಾಗುವುದಕ್ಕೆ ಬೇಕಾದ ನ್ಯಾಯಗಳ ಅನುಸಂಧಾನವಿರಬೇಕು. ಇಷ್ಟರಿಂದ ಸಹಿತವಾಗಿ ವಾಕ್ಯವು ತನ್ನ ಅರ್ಥವನ್ನು ತಿಳಿಸಿಕೊಡುತ್ತದೆಯೇ ಹೊರತು ವಾಕ್ಯಮಾತ್ರದ ಇರುವಿಕೆಯ ಶಾಬ್ದಬೋಧವನ್ನು ಹುಟ್ಟಿಸುವುದಕ್ಕೆ ಸಾಲದು. ವಾಕ್ಯಶ್ರವಣ, ಸಮಯಸ್ಮರಣ, ಶಾಬ್ದನ್ಯಾಯಾನು ಸಂಧಾನ ಇವುಗಳೆಲ್ಲವೂ ಕಲೆತು ಶಾಬ್ದವನ್ನು ಹುಟ್ಟಿಸುವ ಸಾಮಗ್ರಿಯೆಂದು ತಿಳಿಯಬೇಕು.

## 3.ಶಬ್ದದೋಷಗಳು.

ಶಬ್ದ ಅಥವಾ ವಾಕ್ಯವು ದೋಷರಹಿತವಾದರೆ ಮೇಲೆ ಹೇಳಿದಂತಹ ಯಥಾರ್ಥಜ್ಞಾನವನ್ನು ಹುಟ್ಟಿಸುತ್ತದೆ. ಶಬ್ದಕ್ಕೆ ದೋಷಗಳು ಯಾವುವೆಂದರೆ- ಅಬೋಧಕತ್ವವು, ವಿಪರೀತಬೋಧಕತ್ವವು, ಜ್ಞಾತಜ್ಞಾಪಕತ್ವವು, ಅಪ್ರಯೋಜಕತ್ವವು, ಅನಭಿಮತಪ್ರಯೋಜನತ್ವವು, ಅಶಕ್ಯಸಾಧನಪ್ರತಿಪಾದನವು, ಲಘೂಪಾಯವಿರಲಾಗಿ ಗುರೂಪಾಯವನ್ನು ಹೇಳುವಿಕೆ ಇತ್ಯಾದಿಗಳು. ಅವುಗಳಲ್ಲಿ ಅಬೋಧಕತ್ವವೆಂದರೆ ಜ್ಞಾನವನ್ನೇ ಹುಟ್ಟಿಸದಿರುವಿಕೆಯು. ಅದು ಎರಡು ವಿಧ. ಪದಕ್ಕೆ ಅರ್ಥವಿಲ್ಲದಿರುವುದರಿಂದಲೂ ಶಬ್ದಜ್ಞಾನವನ್ನು ಹುಟ್ಟಿಸುವುದಿಲ್ಲ. ಹೀಗೆಯೇ ವಿಪರೀತಬೋಧಕತ್ವವೆಂದರೆ ವಾಕ್ಯದಿಂದ ತಿಳಿಯಬೇಕೆಂದು ಇಚ್ಛಿಸುವ ಅರ್ಥಕ್ಕೆ ವಿಪರೀತವಾಗಿ ಎಂದರೆ ಭ್ರಾಂತಿಯನ್ನು ಹುಟ್ಟಿಸುವಿಕೆ, ಇದು ಅನೇಕ ವಿಧವಾಗಿರುತ್ತದೆ. ತಿಳಿದ ವಿಷಯವನ್ನೇ ತಿಳಿಸುವ ವಾಕ್ಯವು ಜ್ಞಾತಜ್ಞಾಪಕವೆನ್ನಿಸಿಕೊಳ್ಳುತ್ತದೆ. ಪ್ರಯೋಜನವನ್ನುಂಟುಮಾಡ ದಿರುವಿಕೆಯು ಅಪ್ರಯೋಜಕತ್ವವು. ಬೇಕಾದ ಪ್ರಯೋಜನವನ್ನುಂಟುಮಾಡದಿರುವಿಕೆಯು ಅನಭಿಮತಪ್ರಯೋಜನತ್ವವು. ಪ್ರಯತ್ನಿಸಿದರೆ ಶಕ್ಯವಲ್ಲದ ವಸ್ತುವನ್ನು ಪ್ರತಿಪಾದಿಸುವಿಕೆಯು ಅಶಕ್ಯಸಾಧನಪ್ರತಿಪಾದನವು. ಸುಲಭವಾಗಿ ಪ್ರಯೋಜನಸಿದ್ಧವಾಗುತ್ತಿರಲು ಹೆಚ್ಚು ಪ್ರಯತ್ನವನ್ನು ಅಪೇಕ್ಷಿಸುವ ಉಪದೇಶವು ಕೊನೆಯದು.

ಈ ದೋಷಗಳು ಯಾವುದೂ ಇರಬಾರದೆಂಬ ಉದ್ದೇಶದಿಂದ ಮೇಲೆ ಹೇಳಿದ ಶಾಬ್ದಲಕ್ಷಣದಲ್ಲಿ ನಿರ್ದೋಷಪದದ ಪ್ರಯೋಗ ಮಾಡಲ್ಪಟ್ಟಿದೆ.

## 4. ಶಬ್ದವಿಚಾರ.

ಶ್ರೋತ್ರೇಂದ್ರಿಯದಿಂದ ಗ್ರಹಿಸಲ್ಪಡುವುದು ಶಬ್ದವು. ಇದು ಧ್ವನ್ಯಾತ್ಮಕ, ವರ್ಣಾತ್ಮಕವೆಂದು ಎರಡು ವಿಧವು. ಅದರಲ್ಲಿ ಧ್ವನ್ಯಾತ್ಮಕ ಶಬ್ದವು ಪ್ರಕೃತದಲ್ಲಿ ಶಬ್ದವೆಂದು ಕರೆಯಲ್ಪಡುವುದಿಲ್ಲ. ಧ್ವನಿಯಿಂದ ಅಭಿವ್ಯಕ್ತಿಯನ್ನು ಹೊಂದುವ ವರ್ಣಗಳ ಸಮುದಾಯವೇ ಇಲ್ಲಿ ಶಬ್ದ ವೆಂದು ಕರೆಯಲ್ಪಡುತ್ತದೆ. ಬರೀ ವರ್ಣಗಳ ಸಮುದಾಯವೇ ಶಬ್ದವೆಂದು ತಿಳಿಯಬಾರದು. 'ಸುಪ್,ತಿಙ್' ಎಂದು ಕರೆಯಲ್ಪಡುವ ವಿಭಕ್ತಿ ಪ್ರತ್ಯಯ ಗಳಿಂದ ಕೂಡಿರುವ ವರ್ಣಗಳೇ ಪದ ಗಳೆಂದು ಕರೆಯಲ್ಪಡುತ್ತವೆ. ಅಂತಹ ವರ್ಣಗಳು ಅನೇಕವಾಗಿ ಸೇರಿರುವ ಒಂದೊಂದು ಪದದಲ್ಲಿ ಪೂರ್ವಪೂರ್ವ ವರ್ಣಗಳ ಅನುಭವದಿಂದ ಉಂಟಾಗುವ ಸಂಸ್ಕಾರದಿಂದ ಸಹಿತವಾಗಿ ಕೊನೆಯ ವರ್ಣದ ಸನ್ನಿಕರ್ಷದಿಂದ ಕೂಡಿರುವ ಶ್ರೋತ್ರೇಂದ್ರಿಯವು ವಾಚ್ಯವಾಚಕಭಾವ ಸಂಬಂಧಗ್ರಹಣದಿಂದ ಉಂಟಾದ ಸಂಸ್ಕಾರದಿಂದ ಕೂಡಿ ಅನೇಕವಿಧವಾದ ವರ್ಣಗಳಲ್ಲಿ ಇದೊಂದು ಪದವೆಂಬ ಬುದ್ಧಿಯನ್ನು ಹುಟ್ಟಿಸುತ್ತದೆ. ಅನಂತರ ಪೂರ್ವಪೂರ್ವ ಪದಗಳ ಅನುಭವದಿಂದ ಉಂಟಾದ ಸಂಸ್ಕಾರದಿಂದ ಸಹಿತ- ವಾಗಿ ಕೊನೆಯ ಪದದ ವಿಷಯಕವಾದ ಶ್ರೋತ್ರೇಂದ್ರಿಯವು ಅನೇಕ ಪದಗಳಲ್ಲಿ ಇದೊಂದು ವಾಕ್ಯವೆಂಬ ಬುದ್ಧಿಯನ್ನು ಮುಂದೆ ಹೇಳಲ್ಪಡುವ ಆಕಾಂಕ್ಷಾದಿಗಳ ಅನುಸಾರದಿಂದ ಹುಟ್ಟಿಸುತ್ತದೆ. ಇಂತಹ ಪದಸಮುದಾಯವು ಶಬ್ದಪ್ರಮಾಣವೆಂದು ಈ ಪ್ರಕರಣದಲ್ಲಿ ಕರೆಯಲ್ಪಡುತ್ತದೆ. ಆದುದರಿಂದ ಅನೇಕ ಪದಗಳ ಸಮುದಾಯವು ಆಗಮವೆಂದೂ, ಅಥವಾ ಶಬ್ದಪ್ರಮಾಣವೆಂದೂ ಹೇಳಲ್ಪಡುತ್ತದೆ.

ಒಂದು ವಾಕ್ಯದಲ್ಲಿ ಸೇರುವ ಪದಗಳಿಗೆ ಪೌರ್ವಾಪರ್ಯರೂಪವಾದ ಕ್ರಮವು ಇರುತ್ತದೆ. ಇಂತಹ ಕ್ರಮದಿಂದ ಕೂಡಿರುವ ಪದಗಳ ಸಮುದಾಯವು ಶಬ್ದಪ್ರಮಾಣವೆಂದು ತಿಳಿಯತಕ್ಕದ್ದು.

## 5. ವೇದಕ್ಕೆ ಪೌರುಷೇಯತ್ವಾಪೌರುಷೇಯತ್ವವಿಚಾರ:

ಮೇಲೆ ಹೇಳಿದಂತೆ ಒಂದೊಂದು ವಾಕ್ಯದಲ್ಲಿ ಸೇರಿರುವಂತಹ ಪದಗಳ ಕ್ರಮವು ಪುರುಷನ ಬುದ್ಧಿಯುಂಟಾಗಿದ್ದರೆ ಪೌರುಷೇಯವೆನ್ನಿಸಿಕೊಳ್ಳುತ್ತದೆ. ಅಂತಹ ಪದಗಳ ಕ್ರಮವು ಯಾವ ಪುರುಷನ ಬುದ್ಧಿಯಿಂದಲೂ ಉಂಟಾಗದೇ ಸ್ವಭಾವದಿಂದಲೇ ಉಂಟಾದ ಪಕ್ಷದಲ್ಲಿ ಅದು

ಅಪೌರುಷೇಯವೆನ್ನಿಸಿಕೊಳ್ಳುತ್ತದೆ. ಆದುದರಿಂದ ಪುರುಷರಿಂದ ನಿರ್ಮಿಸಲ್ಪಟ್ಟ ಪದಸಮುದಾಯರೂಪವಾದ ವಾಕ್ಯಗಳು ಎಂದರೆ, ಪುರಾಣೇತಿಹಾಸಾದಿಗಳೆಲ್ಲವೂ ಪೌರುಷೇಯವೆಂದು ತಿಳಿಯತಕ್ಕದು. ಋಕ್-ಯಜು-ಸಾಮ-ಅಥರ್ವಾದಿ ಸಂಜ್ಞಕವಾದ ವೇದಗಳಲ್ಲಿ ಪದಗಳ ಕ್ರಮವು ಯಾವ ಪುರುಷನಿಂದಲೂ ರಚಿತವೆಂಬ ವಿಷಯದಲ್ಲಿ ಪ್ರಮಾಣವಿಲ್ಲವಾದ ಕಾರಣ ವೇದಕ್ಕೆ ಅಪೌರುಷೇಯತ್ವವು ಕೂಡುತ್ತದೆ.

## 6. ಅಪೌರುಷೇಯತ್ವಸಾಧನ ಪ್ರಕಾರ

ಈ ವಿಷಯದಲ್ಲಿ ಎಂದರೆ, ವೇದಕ್ಕೆ ಅಪೌರುಷೇಯತ್ವ ವಿಷಯದಲ್ಲಿ ಕೆಲವು ವಾದಿಗಳು ವಿವಾದವನ್ನು ಮಾಡುತ್ತಾರೆ. ಆ ಪ್ರಕಾರವೇನೆಂದರೆ- ಲೋಕದಲ್ಲಿ ವಾಕ್ಯವೆಂಬುದು ಪುರುಷನ ಪ್ರಯತ್ನದಿಂದ ಉಂಟಾಗತಕ್ಕದು. ಒಬ್ಬ ಅಭಿಜ್ಞನಾದ ಪುರುಷನಿಗೆ ತನಗೆ ತಿಳಿದಿರುವಂತಹ ವಿಷಯಗಳ ಜ್ಞಾನವನ್ನು ಪರರಿಗೆ ಹುಟ್ಟಿಸುವುದಕ್ಕಾಗಿ ವಾಕ್ಯವನ್ನು ಪ್ರಯೋಗಿಸುತ್ತಾನೆ. ಆದುದರಿಂದ ವಾಕ್ಯವೆಂಬುದೆಲ್ಲಾ ಪುರುಷಪ್ರಯತ್ನದಿಂದ ಹುಟ್ಟತಕ್ಕದೆಂದು ಸರ್ವರೂ ಒಪ್ಪತಕ್ಕದ್ದು. ಆದುದರಿಂದ ಶಬ್ದಸಮುದಾಯರೂಪವಾದ ವಾಕ್ಯಕ್ಕೆ ಅಪೌರುಷೇಯತ್ವವು ಕೂಡುವುದೇ ಇಲ್ಲ. ಶಬ್ದಗಳೇ ಪುರುಷನ ಕಂಠಾದಿ ಸ್ಥಾನಗಳಲ್ಲಿ ಉಂಟಾಗುವ ಉಚ್ಚಾರಣಕ್ರಿಯೆಯಿಂದ ಹುಟ್ಟುತ್ತದೆಂದು ಸರ್ವರಿಗೂ ತಿಳಿದ ವಿಷಯವೇ. ಇಂತಹ ಶಬ್ದಗಳ ಪೂರ್ವಾಪರ್ಯರೂಪವಾದ ಅನುಪೂರ್ವಿಯಾದರೋ ಪುರುಷಪ್ರಯತ್ನವಿಲ್ಲದೇ ಆಗತಕ್ಕದ್ದೇ ಅಲ್ಲ. ಇಂತಹ ಅನುಪೂರ್ವೀ ವಿಶೇಷದಿಂದ ಯುಕ್ತವಾದ ಪದಗಳ ಸಮುದಾಯರೂಪವಾದ ವಾಕ್ಯವು ಹೇಗೆ ಪುರುಷನಿಂದಲ್ಲದೇ ಆಗುವುದು? ಸಾಮಾನ್ಯವಾಗಿ ವಾಕ್ಯಗಳೆಲ್ಲವೂ ಸಕರ್ತೃಕವಾಗಿಯೇ ಇರುತ್ತವಾದ ಕಾರಣ ಘಟಾದಿ ಪದಾರ್ಥವು ನೀರೂಪವೆಂದು ಹೇಳಿದರೆ ಹೇಗೋ ಹಾಗೆಯೇ ವೇದವು ಅಪೌರುಷೇಯವೆಂಬ ಮಾತು ಅಪಹಸನೀಯವಾಗಿರುತ್ತದೆ. ಅಲ್ಲದೇ, ವೇದಗಳಲ್ಲಿರುವ ಕೆಲವು ಭಾಗಗಳಿಗೆ ಉತ್ಪತ್ತಿ ಪ್ರಕಾರವು, ತತ್ಕರ್ತೃಗಳಾದ ಮಹನೀಯರ ಹೆಸರು ಕೂಡ ವೇದಾದಿಗಳಲ್ಲಿ ಹೇಳಲ್ಪಡುತ್ತವಾದ ಕಾರಣ ವೇದಗಳು ಅಪೌರುಷೇಯ ವೆಂಬುದೇ ಅತ್ಯಂತಾಸಂಗತವು.

ಈ ಪ್ರಕಾರ ತಾರ್ಕಿಕಾದಿಗಳ ಆಕ್ಷೇಪಕ್ಕೆ ವೇದಾಪೌರುಷೇಯತ್ವಾದಿಗಳು ಸಮಾಧಾನವನ್ನು ಹೇಳುತ್ತಾರೆ. ಅದು ಹೇಗೆಂದರೆ- ಶಬ್ದವು ಧ್ವನ್ಯಾತ್ಮಕವು, ವರ್ಣಾತ್ಮಕವು ಎಂದು ದ್ವಿವಿಧವಾಗಿದೆಯೆಂಬುದು ಸರ್ವಸಮ್ಮತವು. ಅದರಲ್ಲಿ ಧ್ವನ್ಯಾತ್ಮಕ ಶಬ್ದವು ಶರೀರದಲ್ಲಿ ಕೆಲವು ಅವಯವಗಳ ಕ್ರಿಯೆಯಿಂದ ಉಂಟಾಗುತ್ತವೆಂಬುದರಲ್ಲಿ ವಿವಾದವಿರುವುದಿಲ್ಲ. ವರ್ಣಾತ್ಮಕವಾದರೂ ಹೀಗೆ ಜನ್ಯವೆಂಬ ವಿಷಯದಲ್ಲಿ ಪ್ರಮಾಣವಿರುವುದಿಲ್ಲ. ಏಕೆಂದರೆ-ಕೆಲವು ಕಾಲಕ್ಕೆ ಪೂರ್ವದಲ್ಲಿ ಯಾರಾದರೊಬ್ಬ ಮನುಷ್ಯನು ಕೇಳಿದಂತಹ ವಾಕ್ಯಗಳನ್ನೂ , ಅಥವಾ ಪದ್ಯಗಳನ್ನೂ ಕೆಲವು ಕಾಲಕಳೆದಮೇಲೆ ಪುನಃ ಕೇಳಿದರೆ ಪೂರ್ವದಲ್ಲಿ ನಾನು ಕೇಳಿದವಾಕ್ಯವೇ ಅಥವಾ ಪದ್ಯವೇ ಇದು ಎಂಬ ಜ್ಞಾನವು ಉಂಟಾಗುವುದು ಸರ್ವಾನುಭವಸಿದ್ಧವು. ಪ್ರತಿಯೊಂದು ಕಾಲದಲ್ಲಿಯೂ ಹೊಸವಾಕ್ಯಗಳೇ ಹುಟ್ಟುವುದಾದರೆ ಅದೇ ಇದೆಂಬ ಪ್ರತ್ಯಭಿಜ್ಞಾ ಜ್ಞಾನವು ಅಪ್ರಮಾಣವಾಗುತ್ತದೆ. ಆದುದರಿಂದ ವರ್ಣಾತ್ಮಕಶಬ್ದವು ಧ್ವನಿಯಂತೆ ಜನ್ಯವೆಂದು ಹೇಳಲಾಗುವುದಿಲ್ಲ.

ಈ ವಿಷಯದಲ್ಲಿ ತಾರ್ಕಿಕರು ಹೇಳುವುದೇನೆಂದರೆ- ವರ್ಣಗಳಿಗೆ ಕಾಲಭೇದದಿಂದ ನಾಶವಿದ್ದರೂ ಕಳೆದು ಹೋದ ಶಬ್ದಗಳಿಗೂ ಈಗ ಪ್ರಯೋಗಿಸಲ್ಪಡುತ್ತಿರುವ ಶಬ್ದಗಳಿಗೂ ಸಾದೃಶ್ಯವಿರುವುದರಿಂದ, ಆ ಶಬ್ದಗಳೇ ಇವು ಎಂಬುದಾಗಿ ಈ ಪ್ರತ್ಯಭಿಜ್ಞಾ ಜ್ಞಾನವು ಹುಟ್ಟುವುದಕ್ಕೆ ಕಾರಣವಿದೆ. ಇಂತಹ ಪ್ರತ್ಯಭಿಜ್ಞೆಯು ವ್ಯಾಧಿಗ್ರಸ್ತನು ತೆಗೆದುಕೊಳ್ಳುತ್ತಿರುವ ಔಷಧಿಯಲ್ಲಿ ''ನೆನ್ನೆ ತೆಗೆದುಕೊಂಡ ಔಷಧವನ್ನೇ ಈಗ ತೆಗೆದುಕೊಳ್ಳುತ್ತಿದ್ದೇನೆ' ಎಂಬುದು ಮೊದಲಾದ ರೀತಿಯಿಂದ ಸರ್ವರಿಗೂ ಅನುಭವಸಿದ್ಧವಾಗಿದೆ. ನೆನ್ನೆ ತೆಗೆದುಕೊಂಡ ಔಷಧವು ಇವತ್ತು ತೆಗೆದುಕೊಳ್ಳುತ್ತಿರುವ ಔಷಧವೂ ಒಂದೇ ಎಂಬುದನ್ನು ಎಂತಹ ಉನ್ಮತ್ತನೂ ಒಪ್ಪಲಾರನು. ಆದುದರಿಂದ 'ಈಗ ನಾನು ತೆಗೆದುಕೊಳ್ಳುತ್ತಿರುವ ಔಷಧವು ಒಂದೇ ಅಲ್ಲದಿದ್ದರೂ ಒಂದಕ್ಕೊಂದು ಸಮಾನವಾಗಿವೆ' ಎಂದು ಪ್ರತ್ಯಭಿಜ್ಞೆಯಿಂದ ಸಿದ್ಧಿಸುತ್ತದೆ ಎಂಬುದನ್ನು ಸರ್ವರೂ ಹೇಗೆ ಒಪ್ಪುತ್ತಾರೆಯೋ ಹಾಗೆಯೇ ಶಬ್ದವಿಷಯದಲ್ಲಿ ಅದೇ ಇದೆಂಬ ಪ್ರತ್ಯಭಿಜ್ಞೆಯು ಸಾದೃಶ್ಯವನ್ನು ವಿಷಯೀಕರಿಸುತ್ತಾದ ಕಾರಣ ಶಬ್ದನಿತ್ಯತ್ವದ ವಿಷಯದಲ್ಲಿ ಈ ಪ್ರತ್ಯಭಿಜ್ಞೆಯು ಪ್ರಮಾಣವಾಗುವುದಿಲ್ಲ.

ಈ ಪ್ರಕಾರ ತಾರ್ಕಿಕರವಾದವು ಅಸಂಗತವು. 'ಅದೇ ಇದು' ಎಂಬ ಪ್ರತ್ಯಭಿಜ್ಞೆಯು ಸಾಮಾನ್ಯವಾಗಿ ಅಭೇದವನ್ನು ವಿಷಯೀಕರಿ ಸುತ್ತದೆ. ಅಭೇದಕ್ಕೆ ಬಾಧಕಪ್ರಮಾಣವೇನಾದರೂ ಇದ್ದಲ್ಲಿ ಅಂತಹ ವಿಷಯಗಳಲ್ಲಿ ಜ್ಞಾನವು ಸಾದೃಶ್ಯವನ್ನು ವಿಷಯೀಕರಿಸುತ್ತದೆಂದು ಹೇಳುವುದು ಉಚಿತವು. ಔಷಧಾದಿಗಳ ಪ್ರತ್ಯಭಿಜ್ಞೆಯು, ಪ್ರತಿದಿನವೂ ಭಿನ್ನಭಿನ್ನವಾದ ಪರಿಮಾಣವುಳ್ಳ ಔಷಧಿಗಳನ್ನು ಸ್ವೀಕರಿಸುತ್ತಿರುವ ಪ್ರತ್ಯಕ್ಷದಿಂದಲೂ ಮತ್ತು ಔಷಧರಾಶಿಯು ದಿನದಿನಕ್ಕೆ ಕಡಿಮೆಯಾಗುತ್ತಾ ಬಂದಿರುವುದರಿಂದಲೂ, ಅದೇ ಇದು ಎಂಬುದು ವಿರುದ್ಧವಾ-ಗುತ್ತಾದ ಕಾರಣ ಸಾದೃಶ್ಯವನ್ನು ವಿಷಯೀಕರಿಸುವುದೆಂದು ಹೇಳುವುದಕ್ಕೆ ಹೇಗೆ ಸಾಧಕವಿದೆಯೋ ಹಾಗೆಯೇ ಪ್ರತಿದಿನದಲ್ಲಿ ಕೇಳುವಂತಹ ಶಬ್ದಗಳಿಗೆ ಭೇದಪ್ರತ್ಯಯವು ಅನುಭವದಲ್ಲಿಲ್ಲವಾದ ಕಾರಣ ಮೇಲೆ ಹೇಳಿದಂತಹ ವರ್ಣಪ್ರತ್ಯಭಿಜ್ಞೆಗೆ ಅಭೇದವೇ ಹೊರತು ಸಾದೃಶ್ಯವು ವಿಷಯವಾಗುವುದಕ್ಕೆ ಅವಕಾಶವಿಲ್ಲವೆಂಬುದು ಮೊದಲಾದ ವಿಷಯಗಳನ್ನು ಸವಿಸ್ತಾರವಾಗಿ ಗ್ರಂಥಗಳಲ್ಲಿ ನಿರೂಪಿಸಿರುತ್ತಾರೆ.

ಆದುದರಿಂದ ಈ ಪ್ರತ್ಯಭಿಜ್ಞಾಪ್ರಮಾಣದ ಬಲದಿಂದ ಭಿನ್ನಭಿನ್ನಕಾಲಗಳಲ್ಲಿ ಕೇಳಲ್ಪಡುವ ಶಬ್ದಗಳಿಗೂ ತದ್ಘಟಕಗಳಾದ ವರ್ಣಗಳಿಗೂ

ಅಭೇದವು ಸಿದ್ಧವಾಗುತ್ತದೆ. ಅಲ್ಲದೇ ವರ್ಣಗಳಿಗೂ ವರ್ಣಸಮುದಾಯರೂಪವಾದ ಶಬ್ದಗಳಿಗೂ ನಿತ್ಯತ್ವವನ್ನು ಹೇಳಬೇಕು. ಪುರುಷ ಪ್ರಯತ್ನವಿಲ್ಲದೇ ವಾಕ್ಯವೇ ಉಂಟಾಗುವುದಿಲ್ಲ ಎಂಬುದು ಅಯುಕ್ತವು. ಲೋಕದಲ್ಲಿ ಗಾದೆಗಳಿಂದ ಸಿದ್ಧವಾಗಿರುವ ಘುಣಾಕ್ಷರವೂ, ಪಿಪೀಲಿಕಾಲಿಪಿಯು ಇತ್ಯಾದಿಗಳಿಂದ ಅನುಮಿತವಾಗುವ ವರ್ಣಗಳೂ ಮತ್ತು ವಾಕ್ಯಗಳು ಹೇಗೆ ಉಂಟಾಗುತ್ತವೋ ಮತ್ತು ಮೂಕನು ಅಥವಾ ಮೌನಿಯು ವರ್ಣೋಚ್ಚಾರಕ್ಕಾಗಿ ಪ್ರಯತ್ನವಿಲ್ಲದೆಯೇ ಬರವಣಿಗೆಯಿಂದ ಪರರಿಗೆ ತಿಳಿಸುವ ವಾಕ್ಯಗಳು ಹೇಗೆ ಸರ್ವಸಿದ್ಧ ವಾಗಿವೆಯೋ,ಹಾಗೆಯೇ ವೇದಗಳು ಯಾರಿಂದಲೂ ಉಚ್ಚರಿಸಲ್ಪಡದೇ, ಇತರರಿಂದ ಹೇಳಲ್ಪಡುವುದಕ್ಕೆ ಅರ್ಹವಾಗುವುದಕ್ಕೆ ಬಾಧಕವೇನೂ ಇಲ್ಲ. ಈ ಪ್ರಕಾರ ವಿಚಾರವನ್ನು ಚೆನ್ನಾಗಿ ಮಾಡಿದರೆ ವೇದಗಳು ಅಪೌರುಷೇಯ ಎಂಬುವುದಕ್ಕೆ ಆಕ್ಷೇಪವೇನೂ ಇಲ್ಲ.

ಅಲ್ಲದೇ ವೇದಗಳು ಪೌರುಷೇಯ ಎಂಬುದಕ್ಕೆ ಪ್ರಮಾಣವೇನೂ ಇಲ್ಲ. ವೇದಕರ್ತೃವು ಇಂತಹವನೆಂದು ಎಲ್ಲೂ ಹೇಳಲ್ಪಟ್ಟಿ-ರುವುದಿಲ್ಲ. ಎಲ್ಲಿಯಾದರೂ ವೇದವು ಇಂತಹವನಿಂದ ರಚಿತವೆಂದು ಸ್ಪಷ್ಟವಾದ ನಿರೂಪಿಸುವ ವಾಕ್ಯವಿರುವುದಿಲ್ಲ. ಕೆಲವು ದೇವತೆಗಳು ಮತ್ತು ಕೆಲವು ಋಷಿಗಳು ಮೊದಲಾದವರ ಹೆಸರಿನಿಂದ ವೇದಭಾಗಗಳಿಗೆ ಕೆಲವಕ್ಕೆ ವ್ಯವಹಾರವು, ಅಂತಹ ದೇವತೆಗಳು ಮೊದಲಾದವರಿಗೆ ವೇದಕರ್ತೃತ್ವವನ್ನು ಸಾಧಿಸಲು ಸಾಲದು. ಅನ್ಯಕೃತಗ್ರಂಥಗಳನ್ನು ಪ್ರಚಾರಕ್ಕೆ ತಂದವರ ಹೆಸರಿನಿಂದಲೂ ಗ್ರಂಥಗಳಿಗೆ ವ್ಯವಹಾರವು ಅನುಭವ ಸಿದ್ಧವಾಗಿರುವಂತೆ ದೇವತಾದಿಗಳ ಹೆಸರಿನಿಂದ ವೇದಭಾಗಗಳಿಗೆ ಪ್ರಸಿದ್ಧಿಯು ಉಂಟಾಗಿರಬಹುದೆಂದು ಹೇಳುವುದರಲ್ಲಿ ಯಾವ ಅನುಪಪತ್ತಿಯೂ ಇರುವುದಿಲ್ಲ ಮತ್ತು ವೇದಗಳಿಗೆ ಶ್ರುತಿಯೆಂತಲೂ, ಆಮ್ನಾಯವೆಂತಲೂ, ವೇದವೆಂತಲೂ ಹೆಸರುಗಳು ಪ್ರಸಿದ್ಧವಾಗಿವೆ. ಈ ಹೆಸರುಗಳೇ ವೇದನಿತ್ಯತ್ವಕ್ಕೆ ಸಾಧಕವಾಗುತ್ತವೆಂದು ಸಪರಿಕರವಾಗಿ ಗ್ರಂಥಗಳಲ್ಲಿ ನಿರೂಪಿಸಿರುತ್ತಾರೆ.

ಮತ್ತು ,ಧರ್ಮಾಧರ್ಮಗಳ ನಿಶ್ಚಯಕ್ಕಾಗಿ ಅಪೌರುಷೇಯವಾಕ್ಯವೊಂದಿದೆಯೆಂದು ಒಪ್ಪಿ ತೀರಬೇಕು. ಧರ್ಮಾಧರ್ಮಗಳನ್ನು ಅಂಗೀಕರಿಸುವ ವಾದಿಗಳು ಸರ್ವರೂ ಬೇರೆಬೇರೆ ಮೂಲಪ್ರಮಾಣಗಳನ್ನು ಒಪ್ಪಿ , ಅವುಗಳಲ್ಲಿ ಹೇಳಿರುವಂತೆಯೇ ಧರ್ಮಾಧರ್ಮ-ವ್ಯವಸ್ಥೆಯನ್ನು ಮಾಡುತ್ತಾರೆ. ಅನೇಕ ವಾದಿಗಳೊಪ್ಪುವ ಧರ್ಮಾಧರ್ಮಗಳಿಗೆ ಸಾಧಕವಾದ ಪ್ರಮಾಣಗಳು ಪರಸ್ಪರವಿರುದ್ಧವಾಗಿರುತ್ತಾವಾದ ಕಾರಣ ಯಾವ ವಾದಿಗಳೊಪ್ಪುವುದು ಧರ್ಮವು, ಮತ್ಯಾವ ವಾದಿಗಳೊಪ್ಪುವುದು ಧರ್ಮವಲ್ಲವೆಂಬ ವ್ಯವಸ್ಥೆಯು ಉಂಟಾಗುವುದು ಕಷ್ಟವಾಗುತ್ತದೆ. ಆದುದರಿಂದ ಯಾವ ವಾಕ್ಯದಲ್ಲಿ ದೋಷಶಂಕೆಯೇ ಇರುವುದಿಲ್ಲವೋ ಅಂತಹ ವಾಕ್ಯದಿಂದ ಸಿದ್ಧಿಸುವುದೇ ಧರ್ಮವು. ಇತರ ವಾಕ್ಯಗಳಿಂದ ಸಿದ್ಧಿಸುವುದು ಧರ್ಮವಲ್ಲವೆಂದು ವ್ಯವಸ್ಥೆಯನ್ನು ಪಡೆಯಬೇಕಾದರೆ, ಅಪೌರುಷೇಯವಾಕ್ಯದ ಅಂಗೀಕಾರವು ಅವಶ್ಯಕವು. ವೇದಗಳನ್ನು ಬಿಟ್ಟು, ಮತ್ಯಾವ ವಾಕ್ಯವೂ ಪುರುಷಪ್ರಣೀತವಲ್ಲವೆಂಬುದನ್ನು ಇತರವಾದಿಗಳೇ ಒಪ್ಪಿರುವುದಿಲ್ಲ. ವೇದಗಳು ಹೇಗೆ ಪುರುಷಪ್ರಣೀತವಲ್ಲವೆನ್ನುವ ವಿಷಯದಲ್ಲಿ ‘ವಾಚಾವಿರೂಪ ನಿತ್ಯಯಾ’ ಇತ್ಯಾದಿ ಪ್ರಮಾಣಗಳಿದ್ದಂತೆ ಮತ್ತಾವ ವಾಕ್ಯದಲ್ಲಿಯೂ ನಿತ್ಯತ್ವವನ್ನು ತಿಳಿಸುವ ಪ್ರಮಾಣವಿರುವುದಿಲ್ಲ. ಈ ಕಾರಣಗಳನ್ನು ಚೆನ್ನಾಗಿ ಆಲೋಚನೆಗೆ ತಂದರೆ ವೇದಾಪೌರುಷೇಯತ್ವವು ಸಿದ್ಧಿಸುವ ವಿಷಯದಲ್ಲಿ ಯಾವ ಬಾಧಕವೂ ಇರುವುದಿಲ್ಲ. ಈ ವಿಷಯದ ಸಂಪೂರ್ಣವಿಚಾರವು ಬಹುಗ್ರಂಥಗಳ ವಿಚಾರದಿಂದ ಆಗತಕ್ಕುದಾಗಿರುತ್ತದೆ. ಅವೆಲ್ಲವನ್ನೂ ಸಪರಿಕರವಾಗಿ ನಿರೂಪಿಸಲು ಈ ಸ್ವಲ್ಪ ಗ್ರಂಥದಲ್ಲಿ ಸಾಧ್ಯವಿಲ್ಲದಿರುವಕಾರಣ ಸಂಕ್ಷೇಪಿಸಲ್ಪಟ್ಟಿದೆ.

## 7. ಆಕಾಂಕ್ಷಾ- ಯೋಗ್ಯತಾ- ಸನ್ನಿಧಿ ನಿರೂಪಣೆ

ಆಕಾಂಕ್ಷಾ- ಯೋಗ್ಯತಾ- ಸನ್ನಿಧಿಗಳುಳ್ಳಂತಹ ಪದಗಳ ಸಮುದಾಯವೇ ವಾಕ್ಯವೆಂದು ಪೂರ್ವದಲ್ಲಿ ಹೇಳಲ್ಪಟ್ಟಿತು. ಆಕಾಂಕ್ಷಾದಿಗಳ ಸ್ವರೂಪವು ಈಗ ಹೇಳಲ್ಪಡುತ್ತದೆ.

ಒಂದೊಂದು ವಾಕ್ಯದಲ್ಲಿಯೂ ಅನೇಕ ಪದಗಳಿರುತ್ತವೆ. ಆ ಪದಗಳೆಲ್ಲವೂ ಒಂದೇ ಅರ್ಥವನ್ನು ಪ್ರತಿಪಾದಿಸುವುದಿಲ್ಲ. ಹಾಗಿದ್ದರೆ ‘ಪುನರುಕ್ತಿ’ ಎಂಬ ದೋಷವು ಇಲ್ಲದೇ ಹೋಗಬೇಕಾಗುವುದು. ಅಲ್ಲದೇ ‘ಘಟಃ’ ಎಂದು ಹತ್ತೆಂಟುಸಲ ಉಚ್ಚರಿಸಿದ ಮಾತ್ರದಿಂದ ಕೆಲವು ಅರ್ಥಗಳ ಜ್ಞಾನವು ಉಂಟಾಗಬೇಕಾಗುತ್ತದೆ. ಒಂದು ಪದವನ್ನು ಮಾತ್ರ ಉಚ್ಚರಿಸುವುದರಿಂದ ಶ್ರೋತೃಗಳಿಗೆ ಕಾರ್ಯಾಕಾರ್ಯಗಳ ಜ್ಞಾನಪೂರ್ವಕವಾದ ಪ್ರವೃತ್ತಿಯು ಅನುಭವಸಿದ್ಧವಾಗಿಲ್ಲ. ಆದುದರಿಂದ ವಾಕ್ಯದಲ್ಲಿರುವ ಪದಗಳಿಗೆ ಒಂದೊಂದಕ್ಕೂ ಬೇರೆ ಅರ್ಥವಿದೆ ಯೆಂದು ಹೇಳಬೇಕು. ಅಂತಹ ಅರ್ಥವನ್ನು ತಿಳಿದುಕೊಳ್ಳಬೇಕೆಂದು ಶ್ರೋತೃವಾದ ಪುರುಷನಿಗೆ ಜಿಜ್ಞಾಸೆಯಿರುತ್ತದೆ. ಶ್ರೋತೃವಾದ ಪುರುಷನ ಜಿಜ್ಞಾಸೆಗೆ ವಿಷಯವಾದ ಬೇರೆಬೇರೆ ಅರ್ಥಗಳನ್ನು ತಿಳಿಸುವಂತಹ ಪದಗಳ ಸಮುದಾಯವು ಸಾಕಾಂಕ್ಷವಾಕ್ಯವೆಂದು ಹೇಳಲ್ಪಡುತ್ತದೆ. ಒಂದೇ ಪದವನ್ನು ಪ್ರಯೋಗಿಸಿದರೆ ಅದರಿಂದ ಯಾರಿಗೂ ಅರ್ಥಜ್ಞಾನವಾಗದೇ ಇರುವುದರಿಂದ ಆಕಾಂಕ್ಷೆಯು ವಾಕ್ಯದಿಂದಾಗುವ ಶಾಬ್ದಬೋಧಕ್ಕೆ ಸಹಕಾರಿ ಎಂದು ಹೇಳಬೇಕು. ಜಿಜ್ಞಾಸಾರೂಪವಾದ ಆಕಾಂಕ್ಷೆಯು ಚೇತನಧರ್ಮವಾದರೂ ಕೂಡ ಅಂತಹ ಆಕಾಂಕ್ಷೆಗೆ ವಿಷಯವಾದ ಬೇರೆಬೇರೆ ಪದಗಳಿಂದ ತೋರುವ ಅರ್ಥಗಳು ಸಾಕಾಂಕ್ಷವೆಂದು ಕರೆಯಲ್ಪಡುತ್ತವೆ. ಈ ಪ್ರಕಾರ ಸಾಕಾಂಕ್ಷಗಳಾದ ಅರ್ಥವನ್ನು ತಿಳಿಸುವ ಕಾರಣ ಪದಗಳೂ ಕೂಡ ಸಾಕಾಂಕ್ಷಗಳೆಂದು ಕರೆಯಲ್ಪಡುತ್ತವೆ.

ಹೀಗೆಯೇ ಯೋಗ್ಯತೆಯೂ ಕೂಡ ಶಾಬ್ದಬೋಧಕ್ಕೆ ಅವಶ್ಯಕವೆಂದು ಹೇಳಬೇಕು. ಮೇಲೆ ಹೇಳಿದಂತೆ ಪದಗಳ ಸಮುದಾಯವು ವಾಕ್ಯವಾಗುತ್ತಾದ ಕಾರಣ ವಾಕ್ಯಗಳಲ್ಲಿರುವ ಬೇರೆಬೇರೆ ಪದಗಳು ಬೇರೆಬೇರೆ ಅರ್ಥಗಳನ್ನು ಪ್ರತಿಪಾದಿಸುತ್ತವೆಂಬುದು ಸರ್ವರೂ

ಅಂಗೀಕರಿಸಬೇಕಾಗುತ್ತದೆ. ಆ ಪ್ರಕಾರ ಭಿನ್ನಭಿನ್ನಪದಗಳಿಂದ ಪ್ರತಿಪಾದಿಸಲ್ಪಡುವ ಅರ್ಥಗಳಿಗೆ ಸಂಬಂಧವು ಪ್ರಮಾಣಸಿದ್ಧವಾಗಿರಬೇಕು. ಅಂತಹ ಪ್ರಮಾಣಸಿದ್ಧವಾದ ಪದಾರ್ಥಗಳ ಸಂಬಂಧವು ಎಲ್ಲಿ ಕೂಡುತ್ತದೆಯೋ ಅಂತಹ ವಾಕ್ಯಕ್ಕೆ ಯೋಗ್ಯತೆ ಇರುತ್ತದೆ. ಆದುದರಿಂದ ಪದಗಳಿಂದ ತಿಳಿಸಲ್ಪಡುವ ಅರ್ಥಗಳಿಗೆ ಪ್ರಮಾಣಸಿದ್ಧವಾದ ಸಂಬಂಧವು ಪದಾರ್ಥಧರ್ಮವಾಗಿರುತ್ತದೆ. ಅಂತಹ ಅರ್ಥವನ್ನು ತಿಳಿಸುವ ಕಾರಣ ಪದಗಳು ಕೂಡ ಯೋಗ್ಯತೆ ವುಳ್ಳವೆಂದು ಹೇಳಲ್ಪಡುತ್ತವೆ.

ಹೀಗೆಯೇ ಸನ್ನಿಧಿಯು ಅವಶ್ಯಕವು. ಸನ್ನಿಧಿ ಎಂದರೆ-ವಾಕ್ಯದಲ್ಲಿರುವ ಪದಗಳಿಗೆ ವ್ಯವಧಾನವಿಲ್ಲದೇ ಪ್ರಯೋಗಿಸೋಣವು. ಒಂದು ವಾಕ್ಯವನ್ನು ಪರಬೋಧನಾರ್ಥವಾಗಿ ಪ್ರಯೋಗಿಸಲು ಉದ್ದೇಶಿಸುವ ಪುರುಷನು ಒಂದೊಂದು ಝಾವಕ್ಕೆ ಒಂದೊಂದು ಪದದಂತೆ ಉಚ್ಚರಿಸುತ್ತಾ ಬಂದರೆ ಅಂತಹ ಪದಗಳ ಸಮುದಾಯದಿಂದ ಅರ್ಥಜ್ಞಾನವೇ ಆಗುವುದಿಲ್ಲ. ಈ ಪ್ರಕಾರ ಆಕಾಂಕ್ಷಾ-ಯೋಗ್ಯತಾ-ಸನ್ನಿಧಿಗಳಿಂದ ಕೂಡಿರುವ ಪದಗಳ ಸಮುದಾಯವು ಶಬ್ದಪ್ರಮಾಣವೆಂದು ಸಿದ್ಧವಾಗುತ್ತದೆ.

## 8. ಅನ್ವಿತಾಭಿಧಾನವಾದ ; ಅಭಿಹಿತಾನ್ವಯವಾದ ; ಕಾರ್ಯತಾವಾದ

ಆಕಾಂಕ್ಷಾದಿಮತ್ತಾದ ಪದಗಳ ಸಮುದಾಯವು ಶಬ್ದಪ್ರಮಾಣವೆಂತಲೂ, ವಾಕ್ಯದಲ್ಲಿರುವ ಪದಗಳಿಗೆ ಭಿನ್ನಭಿನ್ನವಾದ ಅರ್ಥಗಳಿರುತ್ತವೆಯೆಂದು ಹೇಳಲ್ಪಟ್ಟಿತು. ಒಂದೊಂದು ಪದದಿಂದ ತತ್ತದರ್ಥಗಳ ಜ್ಞಾನವಾಗಿ ಸಮಗ್ರವಾಕ್ಯದಿಂದ ಎಲ್ಲಾ ಪದಾರ್ಥಗಳಿಗೂ ಸಂಬಂಧಜ್ಞಾನವಾಗುತ್ತದೆಯೆಂತಲೂ, ಅದೇ ಶಾಬ್ದಬೋಧವೆನ್ನಿಸಿಕೊಳ್ಳುತ್ತದೆಂತಲೂ ಹೇಳಲ್ಪಟ್ಟಿತು. ಶಾಬ್ದಬೋಧಕ್ಕೆ ಅನ್ವಯಬೋಧವೆಂತಲೂ ಹೆಸರು. ಆದರೆ ಒಂದೊಂದು ಪದಕ್ಕೆಅರ್ಥವು ಬೇರೆಬೇರೆ ಇರುವುದರಿಂದ ಆ ಅರ್ಥಗಳಿಗೆ ಸಂಬಂಧಜ್ಞಾನವು ಪದದಿಂದಾಗದೇ ಹೋದರೆ ಪದಸಮುದಾಯರೂಪವಾದ ವಾಕ್ಯದಿಂದ ಪದಾರ್ಥಗಳಿಗೆ ಅನ್ವಯಜ್ಞಾನವಾಗುವುದಕ್ಕೆ ತಕ್ಕ ವ್ಯವಸ್ಥೆಯಿಲ್ಲದೇ ಹೋಗುತ್ತದೆ. ಆದುದರಿಂದ ಒಂದೊಂದು ಪದವೂ ಅನ್ವಯಸಹಿತವಾದ ಅರ್ಥವನ್ನು ತಿಳಿಸುತ್ತದೆಯೆಂದು ಅವಶ್ಯ ಹೇಳಬೇಕು. ಆದರೆ ಒಂದೊಂದು ಪದವೂ ಅನ್ವಯ ಸಹಿತವಾದ ಅರ್ಥವನ್ನು ತಿಳಿಸುವ ಪಕ್ಷದಲ್ಲಿ ಒಂದು ಪದದಿಂದಲೇ ತೋರಿಬರುವ ಅರ್ಥವು ಮತ್ತೊಂದು ಪದದಿಂದಲೂ ಅನ್ವಯಸಹಿತವಾದ ಅರ್ಥವು ತೋರಿಬರುತ್ತಾದ ಕಾರಣ ಪದಾಂತರವು ವ್ಯರ್ಥವಾಯಿತೆಂದು ಶಂಕಿಸಬಾರದು. ಒಂದು ಪದದಿಂದ ಯೋಗ್ಯವಾದ ಸಂಬಂಧವು ವಿಶೇಷಣವಾಗಿ ಸಾಮಾನ್ಯವಾಗಿ ತೋರುತ್ತದೆ. ಪದಾಂತರ ಸನ್ನಿಧಾನದಿಂದ ಆ ಪದದ ಅರ್ಥದಿಂದ ಹೊಂದಿಕೆಯಾಗತಕ್ಕ ಅರ್ಥದ ಸಂಬಂಧ ವಿಶೇಷವು ತೋರುತ್ತದೆ. ಪದಾಂತರವಿಲ್ಲದೇ ಹೋದರೆ ಸಂಬಂಧ ವಿಶೇಷಜ್ಞಾನವು ಒಂದೇ ಪದವಾಗುವುದಿಲ್ಲವಾದ ಕಾರಣ ಪದಾಂತರಕ್ಕೆ ವೈಯರ್ಥ್ಯವಿಲ್ಲ. ಹೀಗೆ ಹೇಳುವ ಪಕ್ಷದಲ್ಲಿ ಪದಕ್ಕೆ ಸಮಾನ್ಯವಾಗಿ ಅನ್ವಯವನ್ನು ಬೋಧಿಸತಕ್ಕ ಶಕ್ತಿಯೂ, ಪದಾಂತರ ಸನ್ನಿಧಾನಕ್ಕೆ ಅನ್ವಯವಿಶೇಷಬೋಧನಶಕ್ತಿಯೂ ಅಂಗೀಕರಿಸಬೇಕಾಗುತ್ತಾದ ಕಾರಣ ಗೌರವದೋಷವು ಬರುತ್ತದೆಂದು ಶಂಕಿಸಬಾರದು. ಒಂದೊಂದು ಪದದಿಂದ ಉಂಟಾಗುವ ಸಾಮಾನ್ಯಾನ್ವಯಜ್ಞಾನವೇ ಪದಾಂತರ ಸನ್ನಿಧಾನದಿಂದ ಅನ್ವಯವಿಶೇಷಜ್ಞಾನದಲ್ಲಿ ಪರ್ಯವಸಾನವನ್ನು ಹೊಂದುತ್ತದೆಂದು ಹೇಳುತ್ತವೆಯಾದ ಕಾರಣ ಎರಡುಶಕ್ತಿಗಳನ್ನು ಅಂಗೀಕರಿಸುವುದೇ ಇಲ್ಲ. ಆದುದರಿಂದ ಗೌರವ ದೋಷವು ಬರುವುದಿಲ್ಲ. ಈ ಪ್ರಕಾರವಾಗಿ ಪದಗಳಿಗೆ ಅನ್ವಿತಾಭಿಮಾನಶಕ್ತಿಯನ್ನು ಕೆಲವು ಸಿದ್ಧಾಂತಿಗಳು ಅಂಗೀಕರಿಸಿ ಈ ವಾದವನ್ನು ವಿಸ್ತರಿಸಿರುತ್ತಾರೆ.

ತಾರ್ಕಿಕಾದಿಗಳು ಈ ವಾದವನ್ನು ಒಪ್ಪದೇ ವಾಕ್ಯದಲ್ಲಿರುವ ಪದಗಳಿಂದ ಬೇರೆಬೇರೆ ಅರ್ಥಗಳು ತೋರಿಬರುತ್ತದೆಂತಲೂ, ಅವುಗಳ ಸಂಬಂಧವು ಪದಗಳಿಂದ ತೋರಿಬರದೇ ಇದ್ದರೂ ಪದಗಳಿಗಿರುವ ಆಕಾಂಕ್ಷಾಬಲದಿಂದ ಸಂಬಂಧವಿಶೇಷಜ್ಞಾನವು ಆಗಬಹುದು. ಆದುದರಿಂದ ಪದಗಳಿಂದ ಅನ್ವಯಜ್ಞಾನವಾಗುವುದಿಲ್ಲವೆಂದು ವಿಸ್ತರಿಸಿರುತ್ತಾರೆ. ಇದಕ್ಕೆ ಅಭಿಹಿತಾನ್ವಯವಾದವೆಂದು ಕರೆಯುತ್ತಾರೆ

ವಾಕ್ಯವು ಶ್ರೋತೃವಾದ ಪುರುಷನಿಗೆ ಯಾವುದಾದರೊಂದು ಕಾರ್ಯದಲ್ಲಿ ಪ್ರವೃತ್ತಿಯನ್ನೂ , ಅಥವಾ ನಿವೃತ್ತಿಯನ್ನೂ ಉಂಟುಮಾಡಲು ಪ್ರವೃತ್ತವಾಗುತ್ತಾದ ಕಾರಣ ಪ್ರವೃತ್ತಿ , ನಿವೃತ್ತಿಗಳಿಗೆ ಅವಶ್ಯಕವಾದ ಅರ್ಥವನ್ನು ತಿಳಿಸುವಂತಹ ವಾಕ್ಯವೇ ಪ್ರಮಾಣವು. ಇದ್ದದು ಇದ್ದಂತೆ ಪ್ರತಿಪಾದಿಸುವ ವಾಕ್ಯವು ವ್ಯರ್ಥವಾಗುತ್ತಾದ ಕಾರಣ ಅಪ್ರಮಾಣವು. ಪ್ರವೃತ್ತಿ ನಿವೃತ್ತಿಗಳಿಗೆ ಉಪಯೋಗಿಸುವಂತಹ ಅರ್ಥವು ಲಿಙ್,ಲೋಟ್, ತವ್ಯ ಪ್ರತ್ಯಯ ಮೊದಲಾದುವುಗಳಿಂದ ತಿಳಿದು ಬರುತ್ತಾದ ಕಾರಣ ಇಂತಹ ಪ್ರತ್ಯಯಗಳುಳ್ಳ ಪದಗಳಿಂದ ಯುಕ್ತವಾದ ವಾಕ್ಯವೇ ವೇದದಲ್ಲಿಯಾಗಲೀ, ಲೋಕದಲ್ಲಿಯಾಗಲೀ ಪ್ರಮಾಣವೆನ್ನಿಸಿಕೊಳ್ಳುತ್ತದೆ. ಈ ಪ್ರತ್ಯಯಾಂತವಾದ ಪದಗಳಿಲ್ಲದ ವಾಕ್ಯವು ಕೇವಲ ಸಿದ್ಧಪರವಾಗಿ ಉಪಯುಕ್ತಾರ್ಥವನ್ನು ಪ್ರತಿಪಾದಿಸುವುದೇ ಇಲ್ಲವಾದ ಕಾರಣ ಪ್ರಮಾಣವೇ ಅಲ್ಲ. ಇಂತಹ ಪದಗಳುಳ್ಳ ವಾಕ್ಯದಿಂದ ಏಕವಾಕ್ಯತೆಯನ್ನು ಹೊಂದಿ ಅಂತಹ ವಾಕ್ಯಗಳು ಪ್ರಮಾಣವಾಗಬಹುದು. ಆದುದರಿಂದ ಕಾರ್ಯತಾಜ್ಞಾನವು ಪ್ರವೃತ್ತಿನಿವೃತ್ತಿಗಳಿಗೆ ಅವಶ್ಯಕವಾಗಿ ಉಪಯುಕ್ತವಾದ ಕಾರಣ ವಾಕ್ಯಪ್ರಮಾಣವನ್ನು ಒಪ್ಪುವುದಕ್ಕೆ ಕಾರ್ಯತಾವಾದವನ್ನಂಗೀಕರಿಸಿ ಪ್ರಾಭಾಕರಾದಿಗಳು ವ್ಯವಸ್ಥೆಯನ್ನು ಮಾಡಿರುತ್ತಾರೆ. ಇವುಗಳ ವಿಸ್ತಾರವು ಆಕರಗಳಿಂದಲೇ ತಿಳಿಯತಕ್ಕುದು.

## 9. ಶಬ್ದಶಕ್ತಿವಿಷಯದಲ್ಲಿ ಮತಭೇದಗಳು.

ವಾಕ್ಯದಲ್ಲಿ ಸೇರುವಂತಹ ಒಂದೊಂದು ಪದವೂ ಬೇರೆ ಅರ್ಥವನ್ನು ತಿಳಿಸಿಕೊಡುವುದರಲ್ಲಿ ಶಕ್ತಿಯುಳ್ಳದ್ದಾಗಿರುತ್ತದೆ. ಅಂತಹ ಶಕ್ತಿಯು ಪದಗಳಿಗೆ ಸ್ವಾಭಾವಿಕವಾದುದೆಂದು ಅನೇಕ ಪ್ರಾಜ್ಞರು ಒಪ್ಪುತ್ತಾರೆ. ಇಂತಹ ಸ್ವಾಭಾವಿಕಾರ್ಥವಿಲ್ಲದೇ ಅನುಪಪತ್ತಿ ವಶದಿಂದ ಯುಕ್ತವಾದ ಅರ್ಥಾಂತರವು ತೋರಿಬಂದರೆ ಅಂತಹ ಜ್ಞಾನಕ್ಕೆ ಕಾರಣವಾದ ಪದವೃತ್ತಿಯನ್ನು ಲಕ್ಷಣೆ ಎಂದು ಕರೆಯುತ್ತಾರೆ.ಆ ಲಕ್ಷಣೆಯಲ್ಲಿಯೂ ಪ್ರಭೇಧಗಳಿವೆ. ಸ್ವಾಭಾವಿಕ ಸಂಬಂಧರೂಪವಾದ ಶಕ್ತಿಯು ಪದಗಳಿಗೆ ಜಾತಿಯನ್ನು ಬೋಧಿಸುವ ವಿಷಯದಲ್ಲಿ ಮಾತ್ರವೇ ಹೊರತು ವ್ಯಕ್ತಿಜ್ಞಾನವು ಲಕ್ಷಣೆಯಿಂದಾಗುತ್ತದೆಂದು ಭಾಟ್ಟರು ಹೇಳುತ್ತಾರೆ. ಜಾತಿವಿಶಿಷ್ಟವಾದ ವ್ಯಕ್ತಿಗಳೇ ಪದಗಳಿಗೆ ವಾಚ್ಯವೆಂದು ವೈಶೇಷಿಕರು ಹೇಳುತ್ತಾರೆ. ಕೆಲವು ಕಡೆ ಪದಗಳಿಗೆ ಜಾತಿಯೇ ವಾಚಯವು ಮತ್ತು ಕೆಲವು ಕಡೆ ವ್ಯಕ್ತಿಯೇ ವಾಚ್ಯವೆಂದು ವೈಯಾಕರಣರು ಹೇಳುತ್ತಾರೆ. ಕೆಲವು ಸ್ಥಳದಲ್ಲಿ ಜಾತಿಯೂ, ಕೆಲವು ಸ್ಥಳದಲ್ಲಿ ವ್ಯಕ್ತಿಯೂ ಮತ್ತು ಕೆಲವು ಸ್ಥಳದಲ್ಲಿ ಆಕೃತಿಯು ಪದದಿಂದ ವಾಚ್ಯವಾಗುತ್ತದೆಂದು ನೈಯಾಯಿಕರು ಹೇಳುತ್ತಾರೆ. ಒಂದೊಂದು ಪದಕ್ಕೂ ಬೇರೆಬೇರೆ ಜಾತಿಗಳಾಗಲೀ, ವ್ಯಕ್ತಿಗಳಾಗಲೀ ವಾಚ್ಯಗಳಾಗುವುದಿಲ್ಲ. ಆವಾವ ಜಾತಿವ್ಯಕ್ತಿಗಳು ವಾಚ್ಯವಾಗುತ್ತವೆಂದು ಇತರರು ಹೇಳುತ್ತಾರೆಯೋ ಅಂತಹ ಜಾತಿವ್ಯಕ್ತಿಗಳ ಅಪೋಹವೇ (ವ್ಯಾವೃತ್ತಿಯು) ಪದಗಳಿಂದ ವಾಚ್ಯವಾಗುತ್ತದೆಂದು ಬೌದ್ಧರು ಹೇಳುತ್ತಾರೆ. ಇತ್ಯಾದಿ ಮತಭೇದಗಳು ಈ ವಿಷಯದಲ್ಲಿರುವಾಗ ಶ್ರೀಮದಾನಂದತೀರ್ಥ ಭಗವತ್ಪಾದರು, ವ್ಯಕ್ತಿಗಳೇ ತತ್ತತ್ಪದಗಳಿಂದ ವಾಚ್ಯವಾಗುತ್ತದೆಂತಲೂ, ವ್ಯಕ್ತಿಗಳು ಅನೇಕವಾಗಿದ್ದರೂ ಅನೇಕವ್ಯಕ್ತಿಗಳಲ್ಲಿ ಶಕ್ತಿಜ್ಞಾನವು ಒಂದು ವ್ಯಕ್ತಿ ಸಾದೃಶ್ಯವು ಮತ್ತೊಂದು ವ್ಯಕ್ತಿಯಲ್ಲಿರುವುದರಿಂದ ಸುಲಭವಾಗಿ ಉಂಟಾಗುತ್ತದೆಂದು ಹೇಳುತ್ತಾರೆ.

ಮೇಲೆ ಹೇಳಿದಂತಹ ಮತಗಳ ವಿವರಣೆಯು ತತ್ತದ್ ಮತಗ್ರಂಥಗಳಿಂದ ವಿಶದವಾಗಿ ತಿಳಿಯಬಹುದು.

## 10. ಶಾಬ್ದಾಪರೋಕ್ಷನಿರಾಕರಣ ;

ಪ್ರತ್ಯಕ್ಷ , ಅನುಮಾನ, ಆಗಮಗಳೆಂಬ ಮೂರುಪ್ರಮಾಣಗಳು ಬಹುವಾದಿಗಳಿಗೆ ಸಮ್ಮತವಾಗಿವೆ. ಇವುಗಳಲ್ಲಿ ಶಬ್ದವೂ, ಅನುಮಾನವೂ ಪರೋಕ್ಷಜ್ಞಾನವನ್ನು ಹುಟ್ಟಿಸುತ್ತದೆ ಮತ್ತು ಪ್ರತ್ಯಕ್ಷವು ಅಪರೋಕ್ಷಜ್ಞಾನವನ್ನು ಹುಟ್ಟಿಸುತ್ತದೆ. ಅನುಮಾನದಿಂದ ಹುಟ್ಟುವ ಪರೋಕ್ಷಜ್ಞಾನಕ್ಕೆ ಅನುಮಿತಿಯೆಂತಲೂ, ಶಬ್ದದಿಂದ ಹುಟ್ಟುವ ಜ್ಞಾನಕ್ಕೆ ಶಾಬ್ದಬೋಧ ಅಥವಾ ಅನ್ವಯಬೋಧವೆಂತಲೂ ಹೆಸರು. ಈ ಪ್ರಕಾರ ಪ್ರಮಾಣತ್ರಯದಿಂದ ಹುಟ್ಟುವ ಯಥಾರ್ಥಜ್ಞಾನ ವಿಷಯವ್ಯವಸ್ಥೆಯನ್ನು ಅನೇಕರು ಒಪ್ಪುತ್ತಾರೆ. ಕೆಲವರು ಮಾತ್ರ ಶಬ್ದಪ್ರಮಾಣದಿಂದಲೂ ಅಪರೋಕ್ಷವು, ಪರೋಕ್ಷವು ಎಂಬ ಉಭಯವಿಧಜ್ಞಾನವು ಹುಟ್ಟುತ್ತದೆಂದು ಅಂಗೀಕರಿಸಿ ಅಂತಹ ಜ್ಞಾನಕ್ಕೆ ಶಾಬ್ದಾಪರೋಕ್ಷವೆಂದು ಹೆಸರನ್ನು ಹೇಳುತ್ತಾರೆ. ''ತದ್ಧಾಸ್ಯ ವಿಜಜ್ಞೌ , ತಮಸಃ ಪಾರಂ ದರ್ಶಯತಿ'' ಇತ್ಯಾದಿ ಉಪನಿಷದ್ವಾಕ್ಯಗಳಲ್ಲಿ ಉಪದೇಶದ ದೆಸೆಯಿಂದಲೇ ಅಪರೋಕ್ಷಜ್ಞಾನವು ಆಗುತ್ತದೆ ಎಂದು ಹೇಳಲ್ಪಟ್ಟಿದೆ. ''ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ'' ಎಂಬ ಮುಂಡಕ ವಾಕ್ಯದಲ್ಲಿ 'ಸು'ಎಂಬ ಶಬ್ದದಿಂದ ಅಪರೋಕ್ಷಜ್ಞಾನವೆಂಬರ್ಥವು ಹೇಳಲ್ಪಟ್ಟಿದೆ. ವೇದಾಂತವಾಕ್ಯದಿಂದ ಹುಟ್ಟುವ ಜ್ಞಾನವು ಅಪರೋಕ್ಷ ವಾಗುತ್ತದೆಂಬ ವಿಷಯದಲ್ಲಿ ಅನುಪ್ರಮಾಣಗಳೂ ಇರುತ್ತವೆ. ಶಬ್ದದಿಂದ ಎಲ್ಲಿಯೂ ಅಪರೋಕ್ಷಜ್ಞಾನಹುಟ್ಟದೇ ಇರುವ ಕಾರಣ ಆ ಅನುಮಾನಗಳೆಲ್ಲಾ ಪ್ರತಿಪಕ್ಷಗ್ರಸ್ತವಾಗುತ್ತದೆಂದು ಹೇಳುವುದು ಸರಿಯಲ್ಲ. ಯಾಕೆಂದರೆ- ಎಲ್ಲಿಯಾದರೊಂದು ಸ್ಥಳಕ್ಕೆ ಜನರು ಹೋಗಿಬಂದ ಮೇಲೆ ಅಲ್ಲಿಗೆ ಹೋಗಿದ್ದವರೆಲ್ಲಾ ಬಂದಿದ್ದಾರೋ ಇಲ್ಲವೋ ಎಂದು ಸಂದೇಹಿಸುತ್ತಿರುವಾಗ 'ನೀನು ಹತ್ತನೆಯವನು' ಎಂಬ ಮಾತಿನಿಂದ ಅಪರೋಕ್ಷಜ್ಞಾನವು ಉಂಟಾಗುವುದು ಕಂಡಿದೆ. ಆದುದರಿಂದ ಶಬ್ದದಿಂದಲೂ ಪ್ರತ್ಯಕ್ಷಜ್ಞಾನ ಹುಟ್ಟುವ ವಿಷಯದಲ್ಲಿ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲವೆಂದು ಅದ್ವೈತಿಗಳು ಹೇಳುತ್ತಾರೆ. ಈ ವಿಷಯವು ವಿಚಾರಮಾಡಿದರೆ ಸರಿ ಬೀಳುವುದಿಲ್ಲ.

''ತತ್ವಮಸಿ'' ಮೊದಲಾದ ವಾಕ್ಯದ ದೆಸೆಯಿಂದಲೇ ಅಪರೋಕ್ಷಜ್ಞಾನವಾಗುತ್ತದೆಂದು ಹೇಳುವುದಕ್ಕೆ ಮತ್ತೊಂದು ದೃಷ್ಟಾಂತವಿರು ವುದಿಲ್ಲ. 'ತದ್ಧಾಸ್ಯ ವಿಜಜ್ಞೌ , ತಮಸಃ ಪಾರಂ ದರ್ಶಯತಿ' ಎಂಬ ವಾಕ್ಯಗಳಲ್ಲಿ ಅಪರೋಕ್ಷಜ್ಞಾನವುಂಟಾಯಿತು ಎಂಬುವುದಕ್ಕೆ ಸಾಧಕವೇನೂ ಕಾಣುವುದಿಲ್ಲ. ವಾಕ್ಯದಿಂದ ಉಪದೇಶಮಾಡಿದ ಅರ್ಥವು ಪರೋಕ್ಷವಾಗಿ ತಿಳಿದುಬಂತೆಂದು ಆ ವಾಕ್ಯಕ್ಕೆ ಸರಿಯಾದ ಅರ್ಥವು. ಉಪದೇಶಮಾಡಿ ಅರ್ಥವು ಅನುಭವಕ್ಕೆ ಬಂದರೆ 'ನನಗೆ ತಿಳಿಯಿತು' ಎಂದು ವ್ಯವಹಾರವಿದೆ. 'ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ'' ಎಂಬಲ್ಲಿ 'ಸು' ಶಬ್ದದಿಂದ ದಾರ್ಢ್ಯವುಂಟಾಯಿತೆಂದು ಅರ್ಥವು ಹೇಳಲ್ಪಟ್ಟಿದೆಯೇ ಹೊರತು ಅಪರೋಕ್ಷತ್ವವು ಉಕ್ತವಲ್ಲ. ''ನೀನು ಹತ್ತನೇಯವನಾಗಿದ್ದೀಯ''ಎಂಬುದು ಮೊದಲಾದ ಸ್ಥಳದಲ್ಲಿ ವಾಕ್ಯದಿಂದಲೇ ಅಪರೋಕ್ಷಜ್ಞಾನ ಹುಟ್ಟುತ್ತದೆಂಬುದು ಸರ್ವರೂ ಒಪ್ಪತಕ್ಕವಿಷಯವಲ್ಲ. ಏಕೆಂದರೆ, ಒಂದು ಸ್ಥಳದಲ್ಲಿ ಹೋದವರು ಎಲ್ಲರೂ ಇದ್ದಾರೆಯೇ?ಇಲ್ಲವೇ? ಎಂದು ನೋಡಿಕೊಳ್ಳುತ್ತಿರುವಾಗ ಎಣಿಸುತ್ತಿರುವವನು ತನ್ನನ್ನು ಬಿಟ್ಟು ಒಬ್ಬ ಕಡಿಮೆ ಇದ್ದಾನೆ ಎಂದು ಚಿಂತಿಸುತ್ತಿರುವಾಗ 'ನಿನ್ನನ್ನು ಎಣಿಕೆ ಮಾಡದೇ ಬಿಟ್ಟಿದ್ದೀಯೆ, ನೀನೇ ಹತ್ತನೆಯವನು' ಎಂದು ಹೇಳಿದ ಮೇಲೆ ತಾನೇ ಹತ್ತನೆಯವನೆಂಬ ಜ್ಞಾನವು ಸ್ಮರಣಪೂರ್ವಕವಾಗಿ ಉಂಟಾಗಿದೆಯೇ ಹೊರತು ಅಪರೋಕ್ಷ ವಾಗಿ ಉಂಟಾಗಲಿಲ್ಲ. ಆದುದರಿಂದ ಈ ದೃಷ್ಟಾಂತವು ಪ್ರಕೃತಾರ್ಥಕ್ಕೆ ಸಾಧಕವಲ್ಲ. 'ತಮಸಃ ಪಾರಂ ದರ್ಶಯತಿ' ಇತ್ಯಾದಿ ವಾಕ್ಯವು ಗ್ರಾಮಕ್ಕೆ ಮಾರ್ಗೋಪದೇಶವನ್ನು ಮಾಡುವ ವಾಕ್ಯದಂತೆ ಪರಂಪರೆಯಿಂದ ಪ್ರತ್ಯಕ್ಷಜ್ಞಾನಕ್ಕೆ ಸಾಧನವನ್ನು ಪ್ರತಿಪಾದಿಸುತ್ತದೆಯೇ ಹೊರತು ಅಪರೋಕ್ಷಜ್ಞಾನವೇ ಆಯಿತೆಂದು ಪ್ರತಿಪಾದಿಸುವುದಿಲ್ಲ. ಹಾಗಿಲ್ಲದಿದ್ದ ಪಕ್ಷದಲ್ಲಿ 'ಮನಸೈವಾನುದ್ರಷ್ಟವ್ಯಂ' ಇತ್ಯಾದಿ ಶ್ರುತಿಗಳ ವಿರೋಧವು

ಬರುತ್ತದೆ. ಇಲ್ಲಿ ಮನಸ್ಸಿನಿಂದ ಜ್ಞೇಯನೆಂದು (ದ್ರಷ್ಟವ್ಯನು) ಎಂದು ಹೇಳಲ್ಪಟ್ಟಿದೆ.

ಉಪನಿಷತ್ತಿನಲ್ಲಿ ಉಪದೇಶರೂಪವಾಗಿ ಬೋಧಿಸಲ್ಪಡುವ ವಿಷಯಗಳೆಲ್ಲವೂ ಪ್ರತ್ಯಕ್ಷಕ್ಕೆ ವಿಷಯವಾಗದೇ ಇರುವಾಗ 'ತತ್ತ್ವಮಸಿ' ಶ್ರುತ್ಯರ್ಥ ಮಾತ್ರ ಪ್ರತ್ಯಕ್ಷಕ್ಕೆ ವಿಷಯವಾಗುತ್ತದೆಂದು ಹೇಳುವುದಕ್ಕೆ ಏನು ಸಾಧಕವೋ ತಿಳಿಯದು. ಅನುಮಾನಗಳು ನಿರ್ಮೂಲವಾಗಿ ತಮ್ಮ ಅಭಿಮತಾರ್ಥವನ್ನು ಸಾಧಿಸುವುದಕ್ಕೆ ಸಮರ್ಥವಾಗುವುದಿಲ್ಲ. ಭಿನ್ನಭಿನ್ನಕರಣಗಳಿಂದ ಹುಟ್ಟುವಂತಹ ಜ್ಞಾನಗಳು ಭಿನ್ನವಾಗಿರುತ್ತವೆಯೇ ಹೊರತು ಒಂದೊಂದು ಕಡೆ ಅವುಗಳ ಧರ್ಮಗಳು ಕಲೆತಿರುವುದಿಲ್ಲ. ಚಕ್ಷುರಿಂದ್ರಿಯದಿಂದ ರೂಪಜ್ಞಾನವೇ, ರಸನೇಂದ್ರಿಯದಿಂದ ರಸಜ್ಞಾನವೇ, ತ್ವಗಿಂದ್ರಿಯದಿಂದ ಸ್ಪರ್ಶಜ್ಞಾನವೇ, ಘ್ರಾಣೇಂದ್ರಿಯದಿಂದ ಗಂಧಜ್ಞಾನವೇ, ಶ್ರೋತ್ರೇಂದ್ರಿಯದಿಂದ ಶಬ್ದಜ್ಞಾನವೇ ಹುಟ್ಟುತ್ತದೆಯೇ ಹೊರತು ಒಂದೊಂದು ಇಂದ್ರಿಯದಿಂದ ಮತ್ತೊಂದು ಇಂದ್ರಿಯದ ವಿಷಯಗಳ ಜ್ಞಾನವು ಹೇಗೆ ಬರುವುದಿಲ್ಲವೋ ಹಾಗೆಯೇ ಇಂದ್ರಿಯಗಳಿಂದ ಪ್ರತ್ಯಕ್ಷಜ್ಞಾನವು, ಲಿಂಗಗಳಿಂದ ಅನುಮಿತಿಯು, ಶಬ್ದದಿಂದ ವಾಕ್ಯಾರ್ಥಜ್ಞಾನವು ನಿಯಮವಾಗಿ ಆಗುತ್ತದೆ-ಯೇ ಹೊರತು ಒಂದೊಂದು ಸಾಧನದಿಂದ ಮತ್ತೊಂದು ಜಾತಿಯ ಜ್ಞಾನವು ಹುಟ್ಟುವುದೇ ಇಲ್ಲ. ಹೀಗಿರುವ ಲೋಕಮರ್ಯಾದೆಯನ್ನು ಮೀರಿ ಶಬ್ದತ್ವಾಪರೋಕ್ಷತ್ವಗಳು 'ತತ್ತ್ವಮಸಿ' ಇತ್ಯಾದಿ ವಾಕ್ಯದಿಂದ ಹುಟ್ಟುವ ಜ್ಞಾನದಲ್ಲಿ ಕಲೆಯುತ್ತವೆಯೆಂದು ಹೇಳುವುದು ಅತ್ಯಂತಾಪಹಾಸದ ವಿಷಯವು. ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದ್ದರೂ ಕೂಡ ಅವೆಲ್ಲವೂ ಶಾಸ್ತ್ರಾಭ್ಯಾಸಂಗವನ್ನು ಮಾಡದಿರುವ ಜನರಿಗೆ ತಿಳಿಯಲು ಶಕ್ಯವಲ್ಲವೆಂದು ಸಂಕ್ಷೇಪಿಸಿದ್ದೇವೆ.

## 11. ಪ್ರಾಮಾಣ್ಯ ಸ್ವತಸ್ತ್ವ ಮತ್ತು ಪರತಸ್ತ್ವ ನಿರೂಪಣೆ.

ಈ ಮೂರು ಉಪನ್ಯಾಸಗಳಲ್ಲಿಯೂ ಪ್ರಮಾಣಗಳ ವಿಭಾಗವು, ಅವುಗಳ ಲಕ್ಷಣಾದಿಗಳು ಸವಿಸ್ತಾರವಾಗಿ ನಿರೂಪಿಸಲ್ಪಟ್ಟವು. ಈಗ ಪ್ರಮಾಣಗಳಿಗೆ ಪ್ರಾಮಾಣ್ಯವೆಂಬ ಧರ್ಮವು ಹೇಗೆ ಹುಟ್ಟುತ್ತದೆ? ಹೇಗೆ ತಿಳಿಯುತ್ತದೆ? ಎಂಬ ವಿಷಯವು ನಿರೂಪಿಸಲ್ಪಡುತ್ತದೆ.

ಪ್ರಾಮಾಣ್ಯವೆಂದರೆ- ಜ್ಞಾನದ ಯಥಾರ್ಥ್ಯ ಅಥವಾ ಜ್ಞಾನದ ಯಥಾರ್ಥಜ್ಞಾನಕರಣತ್ವ ಎಂದರ್ಥವಾಗುತ್ತದೆ. 'ಪ್ರ ಪೂರ್ವಕ ಮಾಙ್ ಧಾತುವಿನ ಮೇಲೆ ಲ್ಯುಟ್ ಪ್ರತ್ಯಯ ಬರಲು ಪ್ರಮಾಣಶಬ್ದವು ಕೇವಲ ಧಾತ್ವರ್ಥದಲ್ಲಿಯೂ, ಕರಣಾರ್ಥದಲ್ಲಿಯೂ ನಿಷ್ಪನ್ನವಾಗುತ್ತಾದ ಕಾರಣ ಯಥಾರ್ಥಜ್ಞಾನವೆಂಬರ್ಥವು, ಯಥಾರ್ಥಜ್ಞಾನಕರಣವೆಂಬರ್ಥವು ಪ್ರಮಾಣಶಬ್ದಕ್ಕೆ ಯೋಗದಿಂದ ಲಬ್ಧವಾಗುತ್ತದೆ. ಯಥಾರ್ಥಜ್ಞಾನವೆಂದರೆ- ಆಯಾಧರ್ಮಗಳುಳ್ಳ ವಸ್ತುಗಳನ್ನು ಇದ್ದದ್ದು ಇದ್ದಹಾಗೇ ಗ್ರಹಿಸುವಂತಹ ಜ್ಞಾನವು. ಯಥಾರ್ಥ ಜ್ಞಾನಕರಣವೆಂದರೆ-ಅಂತಹ ಜ್ಞಾನಕ್ಕೆ ಸಾಧನವು. ಪ್ರತ್ಯಕ್ಷವಾಗಿರುವ ಚಕ್ಷುರಾದೀಂದ್ರಿಯಗಳು ವಿಷಯಸನ್ನಿಕೃಷ್ಟವಾದ ಮೇಲೆ ಹೇಗೆ ವಿಷಯಗಳಿವೆಯೋ ಹಾಗೆಯೇ ಇದು ಘಟ, ಇದು ಪಟ ಇತ್ಯಾದಿರೂಪವಾಗಿ ವಿಷಯಗಳ ಜ್ಞಾನವನ್ನು ಉಂಟುಮಾಡುತ್ತವೆ. ಜ್ಞಾನಗಳಲ್ಲಿ-ರುವ ಘಟತ್ವವುಳ್ಳದ್ದರಲ್ಲಿ ಘಟತ್ವದನ್ನು ಪ್ರಕಾರವನ್ನಾಗಿ ವಿಷಯೀಕರಿಸುವಿಕೆಯೆಂಬ ಪ್ರಾಮಾಣ್ಯವು ಇರುತ್ತದೆ. ಚಕ್ಷುರಾದೀಂದ್ರಿಯಗಳಲ್ಲಿ ಅಂತಹ ಜ್ಞಾನಕ್ಕೆ ಸಾಧನತ್ವವು ಇರುತ್ತದೆ. ಈ ಎರಡುವಿಧವಾದ ಪ್ರಾಮಾಣ್ಯವು ಜ್ಞಾತವಾದರೆ ಪ್ರವೃತ್ತಿಯು ಉಂಟಾಗುತ್ತದೆ. ಇಲ್ಲದಿದ್ದರೆ ಪ್ರವೃತ್ತಿಯು ಉಂಟಾಗುವುದಿಲ್ಲ . ಆದುದರಿಂದ ಪ್ರಾಮಾಣ್ಯಜ್ಞಾನವು ಹೇಗೆ ಉಂಟಾಗುತ್ತದೆಂಬ ಜ್ಞಾನವು ಹೇಗೆ ಉಂಟಾಗುತ್ತದೆಂಬ ವಿಚಾರವು ಪ್ರತಿಯೊಂದು ಮತದಲ್ಲಿಯೂ ಅವಶ್ಯಕವಾಗಿದೆ.

ಜ್ಞಾನಗಳಲ್ಲಿರುವ ಪ್ರಾಮಾಣ್ಯವು ಜ್ಞಾನಾನಂತರದಲ್ಲಿ ಆಯಾ ಪುರುಷನು ಮಾಡುವ ಪರೀಕ್ಷೆಯಿಂದ ನಿಶ್ಚಿತವಾಗುತ್ತದೆಂದು ಕೆಲವು ವಾದಿಗಳು ಹೇಳುತ್ತಾರೆ. ಹೇಗೆಂದರೆ- ಜಲಾದಿ ಜ್ಞಾನವುಂಟಾದ ಮೇಲೆ ಜಲಾರ್ಥಿಯಾದ ಪುರುಷನು ಪ್ರಯತ್ನಮಾಡಲು ನೀರು ಲಭಿಸಿ ಕುಡಿದನಂತರ ತೃಷ್ಣಾಶಾಂತಿಯಾಗುವುದು ಸರಿಯಷ್ಟೆ. ಹಾಗೆ ಜಲಪಾನದಿಂದ ತೃಷ್ಣಾಶಾಂತಿಯಾದಮೇಲೆ ಪೂರ್ವದಲ್ಲಿ ನನಗೆ ಹುಟ್ಟಿದ ಜಲಜ್ಞಾನವು ಯಥಾರ್ಥವು.ಆ ಪ್ರಕಾರ ಪ್ರಯತ್ನಿಸಿ ನೀರುಲಭಿಸಿದ ಮೇಲೆ ತೃಷ್ಣಾಶಾಂತಿಯಾಗಿದೆ ಎಂದು ಅನುಮಾನದಿಂದ ತನ್ನ ಪ್ರಯತ್ನ ಸಫಲವಾಯಿತೆಂಬ ಕಾರಣದಿಂದ ಆ ಜ್ಞಾನದಲ್ಲಿ ಯಾಥಾರ್ಥ್ಯವನ್ನು ಗ್ರಹಿಸುತ್ತಾನೆ. ಈ ಪ್ರಕಾರ ಜ್ಞಾನದ ಯಾಥಾರ್ಥ್ಯರೂಪವಾದ ಪ್ರಾಮಾಣ್ಯವು ಪರೀಕ್ಷಾದಿ ಲಿಂಗದಿಂದ ತಿಳಿಯತಕ್ಕುದೇ ಹೊರತು ಸ್ವತಃ ತಿಳಿಯತಕ್ಕುದಲ್ಲವೆಂದು ತಾರ್ಕಿಕರು ಹೇಳುತ್ತಾರೆ. ಇದಕ್ಕೆ ಪ್ರಾಮಾಣ್ಯಪರತಸ್ತ್ವ ವೆಂದು ಹೆಸರು.

ಈ ವಿಷಯದಲ್ಲಿ ಮೀಮಾಂಸಕರು ಎಂದರೆ ಭಾಟ್ಟ-ಪ್ರಾಭಾಕರರು ಮತ್ತು ವೇದಾಂತಿಗಳು ಪರತಸ್ತ್ವವನ್ನು ಒಪ್ಪದೇ ಸ್ವತಸ್ತ್ವವನ್ನು ಹೇಳುತ್ತಾರೆ. ಸ್ವತಸ್ತ್ವವೆಂದರೆ ಜ್ಞಾನವನ್ನು ಯಾವುದು ಗ್ರಹಿಸುತ್ತದೆಯೋ ಅದರಿಂದಲೇ ಪ್ರಾಮಾಣ್ಯಗ್ರಹಿಸುವಿಕೆ. ಅದು ಘಟವು ಎಂಬುದು ಮೊದಲಾದ ಜ್ಞಾನವು ನನಗೆ ಘಟವು ತಿಳಿಯತೆಂದು ಅನುವ್ಯವಸಾಯದಿಂದಲೇ ಆಗುವುದು ಅನುಭವಸಿದ್ಧವಾಗಿದೆ. ಈ ಅನುವ್ಯವಸಾಯ-ದಿಂದಲೇ ಜ್ಞಾನಗತವಾದ ಪ್ರಾಮಾಣ್ಯದಜ್ಞಾನವು ಆಗುವುದರಲ್ಲಿ ಲಾಘವವಿದೆ. ಪರೀಕ್ಷಾದಿಗಳನ್ನು ಅಪೇಕ್ಷಿಸಿ ಪ್ರಾಮಾಣ್ಯವನ್ನು ತಿಳಿದುಕೊಳ್ಳುವ ಪಕ್ಷದಲ್ಲಿ ಗೌರವ ಬರುತ್ತದೆಂದು ಅನುವ್ಯವಸಾಯದಿಂದಲೇ ಜ್ಞಾನಪ್ರಾಮಾಣ್ಯ ಗ್ರಹಣವಾಗುತ್ತದೆಂದು ಭಾಟ್ಟರು ಹೇಳುತ್ತಾರೆ.

ಹೀಗೆಯೇ ಪ್ರಾಭಾಕರರು ಸ್ವಪ್ರಕಾಶಜ್ಞಾನಪ್ರಾಮಾಣ್ಯವನ್ನು ಅಂಗೀಕರಿಸತಕ್ಕವರಾಗಿ ಆಯಾಜ್ಞಾನಗಳಿಂದಲೇ ಜ್ಞಾನಪ್ರಾಮಾಣ್ಯ

ಗ್ರಹಣವಾಗಿರುತ್ತದೆಂದು ಹೇಳುತ್ತಾರೆ. ಈ ಪ್ರಕಾರ ಅನೇಕವಾದಿಗಳು ಅನೇಕಪ್ರಕಾರವಾಗಿ ಪ್ರತಿಪಾದಿಸುವ ವಿಷಯಗಳನ್ನು ಸಮಗ್ರವಾಗಿ ಈ ಸಣ್ಣ ಉಪನ್ಯಾಸದಲ್ಲಿ ನಿರೂಪಿಸುವುದಕ್ಕೆ ಸಂಪೂರ್ಣವಾಗಿ ಅವಕಾಶವಿಲ್ಲದಿರುವ ಕಾರಣ ದ್ವೈತಸಿದ್ಧಾಂತದ ಪ್ರಕಾರವಾಗಿ ಮಾತ್ರ ಈ ವಿಷಯ ನಿರೂಪಣವನ್ನು ಮಾಡಿ ಮುಗಿಸಲು ಉದ್ದೇಶಿಸುತ್ತೇವೆ.

ತತ್ತದಿಂದ್ರಿಯಗಳಿಂದ ಹುಟ್ಟುವ ಜ್ಞಾನವು ಯಥಾರ್ಥವಾಗಿಯೇ ಹುಟ್ಟುತ್ತವೆ. ಆಯಾಜ್ಞಾನಗಳಿಗೆ ಯಥಾರ್ಥತ್ವವು ಪ್ರಾಮಾಣ್ಯವೆಂದು ಕರೆಯಲ್ಪಡುತ್ತದೆ. ಅಂತಹ ಪ್ರಾಮಾಣ್ಯವು ಸಾಕ್ಷಿಜ್ಞಾನದಿಂದ ಗ್ರಹಿಸಲ್ಪಡುತ್ತದೆ. ಸಾಕ್ಷಿ ಎಂದರೆ ಆಯಾ ಜೀವರ ಸ್ವರೂಪಭೂತವಾದ ಇಂದ್ರಿಯದಿಂದ ಅಭಿವ್ಯಕ್ತವಾಗುವುದೇ ಸ್ವರೂಪಜ್ಞಾನವು. ಆ ಸಾಕ್ಷಿಜ್ಞಾನವು ಕೇವಲ ಯಥಾರ್ಥವನ್ನು ಗ್ರಹಿಸುವ ಸ್ವಭಾವವುಳ್ಳದಾದ ಕಾರಣ ಆಯಾವಸ್ತುಗಳ ಜ್ಞಾನವಾದಕೂಡಲೇ ಆ ಜ್ಞಾನವನ್ನು ಯಥಾರ್ಥವಾಗಿ ಗ್ರಹಿಸುತ್ತದೆ. ತಾರ್ಕಿಕಾದಿಗಳು ಹೇಳುವಂತೆ ಜ್ಞಾನವು, ಪ್ರಾಮಾಣ್ಯವು ಪರೀಕ್ಷಾದಿ ಲಿಂಗಗಳಿಂದ ಆಗುತ್ತದೆಂದು ಹೇಳುವ ಪಕ್ಷದಲ್ಲಿ ಆ ಲಿಂಗಜ್ಞಾನಕ್ಕೆ ಪ್ರಾಮಾಣ್ಯವು ಮತ್ತೊಂದು ಜ್ಞಾನದಿಂದ ತಿಳಿಯಬೇಕಾಗಿರುವ ಕಾರಣ ಈ ಪ್ರಕಾರ ಜ್ಞಾನಪರಂಪರೆಯನ್ನು ಕಲ್ಪಿಸಬೇಕಾಗಿ ಬರುವುದರಿಂದ ಅನವಸ್ಥಾದೋಷವು ಬರುತ್ತದೆ. ಈ ಸಾಕ್ಷಿಜ್ಞಾನವನ್ನು ಪ್ರಾಮಾಣ್ಯಗ್ರಾಹಕವನ್ನಾಗಿ ಅಂಗೀಕರಿಸುವುದಾದರೆ ಈ ಸಾಕ್ಷಿಜ್ಞಾನದ ಸ್ವಪ್ರಕಾಶವು ಎಂದರೆ ತನ್ನ ಪ್ರಾಮಾಣ್ಯವನ್ನು ತನ್ನಲ್ಲಿ ವಿಷಯವಾಗುವ ಜ್ಞಾನದ ಪ್ರಾಮಾಣ್ಯವನ್ನೂ ಕೂಡ ತಾನೇ ಗ್ರಹಿಸುತ್ತದೆಯೇ ಹೊರತು ಮತ್ತೊಂದು ಜ್ಞಾನವನ್ನು ಅಪೇಕ್ಷಿಸುವುದಿಲ್ಲ. ಆದುದರಿಂದ ಪ್ರಾಮಾಣ್ಯ ಗ್ರಹಣಕ್ಕಾಗಿ ಅನವಸ್ಥಾದೋಷವು ಬರುವುದಿಲ್ಲ.

ಪ್ರಾಮಾಣ್ಯವು ಜ್ಞಾನಪ್ರಾಮಾಣ್ಯವು, ಕರಣಪ್ರಾಮಾಣ್ಯವೆಂದು ಮೇಲೆ ಹೇಳಿದಂತೆ ಎರಡು ವಿಧವಾಗಿರುತ್ತದೆ. ಅದರಲ್ಲಿ ಜ್ಞಾನಪ್ರಾಮಾಣ್ಯಕ್ಕೆ ಸಾಕ್ಷಿಜ್ಞಾನದಿಂದ ಗ್ರಹಣವಾಗುತ್ತಾದ ಕಾರಣ ಸ್ವತಸ್ತ್ವವು ಕೂಡುತ್ತದೆ. ಕರಣಪ್ರಾಮಾಣ್ಯಕ್ಕೆ ಜ್ಞಾನಪ್ರಾಮಾಣ್ಯದಂತೆ ಸ್ವತಸ್ತ್ವವನ್ನು ಹೇಳುವುದಿಲ್ಲ. ಆ ಕರಣಗಳಲ್ಲಿರುವ ಯಥಾರ್ಥಜ್ಞಾನಸಾಧನತ್ವವು ಅನ್ವಯವ್ಯತಿರೇಕರೂಪವಾದ ಲಿಂಗದಿಂದ ತಿಳಿಯ-ತಕ್ಕುದಾದ ಕಾರಣ ಪ್ರತ್ಯಕ್ಷದಿಂದ ತಿಳಿಯತಕ್ಕುದಲ್ಲ. ಆದುದರಿಂದ ಕರಣಪ್ರಾಮಾಣ್ಯಕ್ಕೆ ಅನುಮಾನಗಮ್ಯಸ್ವರೂಪವಾದ ಪರತಸ್ತ್ವವನ್ನೇ ಹೇಳಬೇಕು.

ಈ ಪ್ರಕಾರ ಕರಣಪ್ರಾಮಾಣ್ಯಕ್ಕೆ ಪರತಸ್ತ್ವವನ್ನೂ , ಜ್ಞಾನಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನೂ ನಿರೂಪಿಸಿ ದ್ವೈತಸಿದ್ಧಾಂತವನ್ನು ಪರಿಷ್ಕರಿಸಿ-ರುತ್ತಾರಾದ ಕಾರಣ ತತ್ತದ್ವೇದಾಂತಗಳ ತತ್ವವನ್ನು ಸರಿಯಾಗಿ ತಿಳಿದು ಸಂಸ್ಕೃತ ವಿದ್ಯಾಭ್ಯಾಸದಿಂದ ಕೃತಕೃತ್ಯರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಈ ಪ್ರಮಾಣತತ್ವವನ್ನು ಜನರಿಗೆ ಸುಲಭವಾಗಿ ತಿಳಿಸಿಕೊಡುವ ಉದ್ದೇಶದಿಂದ ಕನ್ನಡಭಾಷೆಯಲ್ಲಿ ಸಂಗ್ರಹವಾಗಿ ಬರಿಯಲ್ಪಟ್ಟಿದೆ. ಇದರ ವಿಚಾರವು ಸಂಸ್ಕೃತದಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡತಕ್ಕವರಿಗೂ ಕೂಡ ತಿಳಿದುಕೊಳ್ಳಲು ಕಷ್ಟವಾಗಿರುತ್ತದೆ. ವಾಚಕರು ಇದನ್ನು ಸಾವಧಾನದಿಂದ ವ್ಯಾಸಂಗಮಾಡಿ ಪುನಃ ಪುನಃ ವಿಚಾರಮಾಡುತ್ತಾ ಬಂದರೆ ಸಾಧಾರಣವಾಗಿಯಾದರೂ ತಿಳಿಯಲು ಸಾಧ್ಯವಾಗುತ್ತದೆ. ನನ್ನ ಶ್ರಮವನ್ನು ವ್ಯರ್ಥಪಡಿಸದೇ ಕೈಲಾದಮಟ್ಟಿಗೂ ವಾಚಕರು ಇದರ ವಿಷಯವನ್ನು ಗ್ರಹಿಸುವರೆಂದು ನಂಬಿರುತ್ತೇನೆ.

ಇತಿ, ಅರಮನೆ ಧರ್ಮಾಧಿಕಾರಿ,

ಪಂಡಿತರತ್ನಂ ಆರ್.ರಾಘವೇಂದ್ರಾಚಾರ್ಯಃ , ಮೈಸೂರು.

( ಬಹುಶಃ ಈ ಗ್ರಂಥವು ಸುಮಾರು 70ವರ್ಷಗಳಷ್ಟುಹಳೆಯದಿರಬೇಕು. ನನ್ನ ಮೂಲಪ್ರತಿಯಲ್ಲಿ ದಿನಾಂಕವು ಸಿಕ್ಕಿಲ್ಲ. ಗಣಕೀಕರಣಮುಗಿದಿದ್ದು. ಶ್ರೀವೃಷನಾಮಸಂವತ್ಸರ ಶ್ರಾವಣಬಹುಳ ಏಕಾದಶಿ ಬುಧವಾರ. ತಾ।। 15-8-2001)

**ಶರ್ವಾದಿ ಸರ್ವಗೀರ್ವಾಣ ನಿರ್ವಾಣಗತಿ ಹೇತವಃ ।।**

**ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾಂತು ನಃ ಸದಾ ।।**

**ಭಾರತೀರಮಣೋಮಧ್ವೋ ಸೃಷ್ಟಿಸ್ಥಿತ್ಯಂತಕಾರಕಃ ।**

**ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ।।**

ಇತಿ ಅಸ್ಮತ್ಪಿತ್ರಂತರ್ಗತ ಶ್ರೀರಾಘವೇಂದ್ರಾಚಾರ್ಯಾಂತರ್ಗತ

ಶ್ರೀವಾದಿರಾಜಗುರ್ವಂತರ್ಗತ ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್

ಶ್ರೀನರಹರಿರಾಮಕೃಷ್ಣವೇದವ್ಯಾಸಾಭಿನ್ನಶ್ರೀಲಕ್ಷ್ಮೀಹಯಗ್ರೀವಾರ್ಪಣಮಸ್ತು ।।

( ಶ್ರೀರಾಯಪಾಳ್ಯರಾಘವೇಂದ್ರಾಚಾರ್ಯರ ಪರಿಚಯವನ್ನು ಮಾಡಲು ತಕ್ಕ ವಿವರಗಳುಳ್ಳ ಪುಸ್ತಕ ಸಿಕ್ಕಿದ ಕೂಡಲೇ ತಿಳಿಸುತ್ತೇನೆ. ಮಾಧ್ವೇತರ ಮತಗಳ ಬಗ್ಗೆ ತಿಳಿಯಲು ಸುಮಧ್ವವಿಜಯ 15 ಸರ್ಗವನ್ನು ನೋಡಿ )